ಶನಿವಾರ, ಮೇ 2, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಲಕ್ಷ್ಯ ಸೇನ್ ಮಿಂಚು
ಡೆನ್ಮಾರ್ಕ್‌ನಲ್ಲಿ ನಡೆಯುತ್ತಿರುವ ಥಾಮಸ್ ಕಪ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವು ಸೆಮಿಫೈನಲ್ ಪ್ರವೇಶಿಸಲು ಪ್ರಮುಖ ಪಾತ್ರ ವಹಿಸಿದ ಲಕ್ಷ್ಯ ಸೇನ್

ಬುದ್ಧನ ಸ್ಮರಣೆ
ಬುದ್ಧ ಪೂರ್ಣಿಮೆ ಪ್ರಯುಕ್ತ ಮಹಾರಾಷ್ಟ್ರದ ಠಾಣೆಯಲ್ಲಿ ಬೌದ್ಧ ಬಿಕ್ಕುವೊಬ್ಬರು ಗೌತಮ ಬುದ್ಧನ ಮೂರ್ತಿಗೆ ಹೂವು ಇಟ್ಟು ಅಲಂಕರಿಸಿದರು

RERA REGISTRATION : PRM/KA/RERA/1268/378/PR/161224/007302

SHR™ ಸ್ವೀಟ್ ಹೋಮ್ ರಿಯಾಲ್ಟಿ
ರಿಯಲ್ ಎಸ್ಟೇಟ್‌ನಲ್ಲಿ ನಿಮ್ಮ ವಿಶ್ವಾಸಾರ್ಹ ಪಾಲುದಾರ

MYSORE GROWTH CORRIDOR !

ಈ ಪ್ರೀಮಿಯಂ ಪ್ಲಾಟ್‌ನಲ್ಲಿ ಏಕೆ ಹೂಡಿಕೆ ಮಾಡಬೇಕು?

ಹೂಡಿಕೆಗಳಿಗೆ ಉತ್ತಮ ಅವಕಾಶ
ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕಾರಿಡಾರ್

ಕಾರ್ಯತಂತ್ರದ ಸ್ಥಳ
ಮೈಸೂರು ಮತ್ತು ಇತರ ನಗರಗಳಿಗೆ ಅತ್ಯುತ್ತಮ ಸಂಪರ್ಕ

ಜೀವನಶೈಲಿಯ ಸೌಕರ್ಯಗಳು
ಪ್ರೀಮಿಯಂ ಮಾಲ್, ಉದ್ಯಾನವನಗಳು ಮತ್ತು ಉತ್ತಮವಾಗಿ ಯೋಜಿಸಲಾದ ಮೂಲಸೌಕರ್ಯ

ಸುರಕ್ಷಿತ ಹೂಡಿಕೆಗಳು
ಸ್ಪಷ್ಟ ಶೀರ್ಷಿಕೆಗಳು, ಗೇಟೆಡ್ ಸಮುದಾಯ ವಿನ್ಯಾಸ

ಭವಿಷ್ಯದ ಪರಿಪೂರ್ಣ ಮನೆಗಳಿಗೆ
ಗುಣಮಟ್ಟದ ಜೀವನಶೈಲಿಗಾಗಿ ಶಾಂತಿಯುತ ವಾತಾವರಣ

ಸೀಮಿತ ಪ್ರೀಮಿಯಂ ಪ್ಲಾಟ್‌ಗಳು ಲಭ್ಯವಿದೆ !
ಈ ಸುವರ್ಣ ಅವಕಾಶವನ್ನು ಕಳೆದುಕೊಳ್ಳಬೇಡಿ

ಇಂದು ಹೂಡಿಕೆ ಮಾಡಿ ನಾಳೆ ಲಾಭ ಪಡೆಯಿರಿ

ಬೆಳವಣಿಗೆ, ಸೌಕರ್ಯ ಮತ್ತು ಸಮೃದ್ಧಿಗಾಗಿ ವಿನ್ಯಾಸಗೊಳಿಸಲಾದ ಭವಿಷ್ಯಕ್ಕೆ ಸಿದ್ಧವಾಗಿರುವ ಸಮುದಾಯದ ಭಾಗವಾಗಿರಿ

ಸೀಮಿತ ಕೊಡುಗೆ
ನಿಮ್ಮ ಉಚಿತ ಸೈಟ್ ಭೇಟಿಯನ್ನು ಈಗಲೇ ಬುಕ್ ಮಾಡಲು ಕರೆ ಮಾಡಿ

+91 99000 11883 / +91 99000 11887
www.sweethomerealtyindia.com
info@sweethomerealtyindia.com
#915, 3RD FLOOR, DHANUSH PLAZA, IDEAL HOMES LAYOUT, RAJARAJESHWARI NAGAR, BENGALURU - 560098

ವಿವೇಕಾ ವಿದ್ಯಾ ಸಂಸ್ಥೆ (ರಿ.)
ಎಂ. ಶ್ರೀನಿವಾಸ್ ಎಜುಕೇಷನಲ್ & ಚಾರಿಟೇಬಲ್ ಟ್ರಸ್ಟ್ (ರಿ.)

ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404

2025 - 2026 ನೇ ಸಾಲಿನ SSLC ಪರೀಕ್ಷೆಯಲ್ಲಿ 100% ಫಲಿತಾಂಶ

2026 - 2027 ನೇ ಸಾಲಿನ ಶಾಲಾ ದಾಖಲಾತಿ ಪ್ರಾರಂಭವಾಗಿದೆ.

ಎಂ. ಶ್ರೀನಿವಾಸ್ ಸಮೂಹ ಶಿಕ್ಷಣ ಸಂಸ್ಥೆಗಳು ಕನ್ನಡ ಮಾಧ್ಯಮ

ಎಂ ಶ್ರೀನಿವಾಸ್ ಮಕ್ಕಳ ಮನೆ
ಪೂರ್ವ ಪ್ರಾಥಮಿಕ (ಪ್ರಿಕೆಜಿ, ಎಲ್‌ಕೆಜಿ, ಯುಕೆಜಿ)

ವಿವೇಕ ಹಿರಿಯ ಪ್ರಾಥಮಿಕ ಶಾಲೆ
1 ರಿಂದ 7ನೇ ತರಗತಿ

ವಿವೇಕ ಪ್ರೌಢಶಾಲೆ
8 ರಿಂದ 10ನೇ ತರಗತಿ

ಎಂ ಶ್ರೀನಿವಾಸ್ ವಿದ್ಯಾರ್ಥಿ ನಿಲಯ
5 ರಿಂದ 10ನೇ ತರಗತಿ

M Srinivas international public school English medium
2026 - 27 Admission Open now

ನುರಿತ, ಉತ್ಸಾಹಿ ಮತ್ತು ಅನುಭವಿ ಬೋಧಕ ವರ್ಗ
ಕ್ರೀಡೆ ಮತ್ತು ಕಲೆಗಳ ಮೂಲ ಕೌಶಲ್ಯಗಳ ತರಬೇತಿ

ಸುಸಜ್ಜಿತ ಕ್ರೀಡಾಂಗಣ ಮತ್ತು ಗ್ರಂಥಾಲಯಗಳ ವ್ಯವಸ್ಥೆ
ವಿಶೇಷ ಕಾಳಜಿಯ ಮೂಲಕ ಮಕ್ಕಳ ಕಲಿಕೆಗೆ ಒತ್ತು

ಶಾಲಾ ವಾಹನ ಮತ್ತು ವಸತಿ ನಿಲಯ ಸೌಲಭ್ಯ
ಮಾಹೆವಾರು ನಿಯಮಿತ ಪೋಷಕರ ಸಭೆ ಆಯೋಜನೆ

* 1 ರಿಂದ 7 ನೇ ತರಗತಿ ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ. * ಉಚಿತ ಗುಣಾತ್ಮಕ ಶಿಕ್ಷಣ. * ಉಚಿತ ಪಠ್ಯಪುಸ್ತಕ ವಿತರಣೆ.
* ಕ್ಷೀರ ಭಾಗ್ಯ ಯೋಜನೆ * ಮಧ್ಯಾಹ್ನದ ಬಿಸಿ ಊಟ ವಿತರಣೆ. * ವಾರದ ಆರು ದಿನದಲ್ಲಿ ಪೌಷ್ಟಿಕಾಂಶ ಮೊಟ್ಟೆ/ಬಾಳೆಹಣ್ಣು ವಿತರಣೆ.

ಉಚಿತ ವಿದ್ಯಾಭ್ಯಾಸ ಕನ್ನಡ ಮಾಧ್ಯಮದವರಿಗೆ

ಐಟಿಐ ಕಾಲೇಜಿನಲ್ಲಿ ಪ್ರವೇಶ ಪ್ರಾರಂಭವಾಗಿದೆ! ಈಗಲೇ ವಿಚಾರಿಸಿ (SSLC ಉತ್ತೀರ್ಣರು ಅರ್ಹರು).

ನಾವು ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದೇವೆ (ಅರ್ಹತೆ TGT / PGT)

1 ರಿಂದ 7 ನೇ ತರಗತಿ: ಯಾವುದೇ ಪದವಿ, ಡಿ.ಎಡ್, ಬಿ.ಎಡ್

8 ರಿಂದ 10 ನೇ ತರಗತಿ: ಯಾವುದೇ ಪದವಿ, ಬಿ.ಎಡ್ ಜೊತೆಗೆ ಸ್ನಾತಕೋತ್ತರ ಪದವಿ

vvshs1997@gmail.com
ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404
+91 98450 41912 / +91 91485 76991 / +91 96636 09416

prajavani.net prajavani
ಶನಿವಾರ, ಮೇ 2, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 121 | ಪುಟ 18
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ರಿಯಾನ್ ಅಬ್ಬರ
ಜೈಪುರದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ರಾಜಸ್ಥಾನ ರಾಯಲ್ಸ್ ತಂಡದ ರಿಯಾನ್ ಪರಾಗ್ (90; 50ಎಸೆತ, 4X8, 6X5) ಅಮೋಘ ಬ್ಯಾಟಿಂಗ್ ಮಾಡಿದರು

ಹೈಕಮಾಂಡ್ ತೀರ್ಮಾನವೇ 'ಪ್ರಸಾದ': ಡಿಕೆಶಿ 5

ವಾಣಿಜ್ಯ ಎಲ್‌ಪಿಜಿ: ₹993 ಹೆಚ್ಚಳ

ರೆಸ್ಟೋರೆಂಟ್, ಹೋಟೆಲ್‌ಗಳಿಗೆ ಭಾರಿ ಹೊರೆ • ಸಿಲಿಂಡರ್ ದರ ₹3,152ಕ್ಕೆ ಏರಿಕೆ

ನವದೆಹಲಿ (ಪಿಟಿಐ): ನಾಲ್ಕು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗಳಿಗೆ ಮತದಾನ ಮುಗಿದ ಬೆನ್ನಲ್ಲೇ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಇದರಿಂದ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಲಿದೆ.

ರೆಸ್ಟೋರೆಂಟ್, ಹೋಟೆಲ್‌ಗಳಲ್ಲಿ ಬಳಸುವ 19 ಕೆ.ಜಿಯ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರವು ₹993ರಷ್ಟು ಹೆಚ್ಚಳವಾಗಿದೆ. ಅಲ್ಲದೆ, 5 ಕೆ.ಜಿ ಎಲ್‌ಪಿಜಿ ಸಿಲಿಂಡರ್ ದರವನ್ನು ₹261ರಷ್ಟು ಹೆಚ್ಚಿಸಲಾಗಿದೆ. ಈ ಪರಿಷ್ಕೃತ ದರವು ಶುಕ್ರವಾರದಿಂದಲೇ ಜಾರಿಯಾಗಿದೆ.

ದರ ಹೆಚ್ಚಳದಿಂದ ದೆಹಲಿಯಲ್ಲಿ ವಾಣಿಜ್ಯ ಸಿಲಿಂಡರ್ ದರ ₹3,071 ಮತ್ತು ಬೆಂಗಳೂರಿನಲ್ಲಿ ₹3,152ಕ್ಕೆ ಏರಿದೆ. ಬೆಲೆ ಏರಿಕೆಯ ಹೊಡೆತ ತಪ್ಪಿಸಿಕೊಳ್ಳಲು ಹೋಟೆಲ್, ರೆಸ್ಟೋರೆಂಟ್‌ಗಳ ಮಾಲೀಕರು ಆಹಾರದ ದರಗಳನ್ನು ಹೆಚ್ಚಿಸಿದರೆ, ಅದರ ಹೊರೆ ನೇರವಾಗಿ ಗ್ರಾಹಕರ ಮೇಲೆ ಬೀಳುತ್ತದೆ.

8

ವಿವಿಧ ನಗರಗಳಲ್ಲಿ ವಾಣಿಜ್ಯ ಸಿಲಿಂಡರ್ ದರ

ನಗರಗಳು	ಮೇ 1	ಏಪ್ರಿಲ್ 1
ನವದೆಹಲಿ	₹3,071	₹2,078
ಬೆಂಗಳೂರು	₹3,152	₹2,150
ಕೋಲ್ಕತ್ತ	₹3,202	₹2,208
ಮುಂಬೈ	₹3,204	₹2, 031
ಚೆನ್ನೈ	₹3,237	₹2,246

* ಆಧಾರ: ಇಂಡಿಯನ್ ಆಯಿಲ್ ಕಾರ್ಪೊರೇಷನ್ ವೆಬ್‌ಸೈಟ್

ದೆಹಲಿಯಲ್ಲಿ ವಾಣಿಜ್ಯ ಸಿಲಿಂಡರ್ ದರ

ತಿಂಗಳು	ಏರಿಕೆ	ಒಟ್ಟು ದರ
ಡಿಸೆಂಬರ್ (2025)	---	₹1,580
ಜನವರಿ (2026)	₹111	₹1,691
ಫೆಬ್ರುವರಿ	₹49	₹1,740
ಮಾರ್ಚ್*	₹142	₹1,883
ಏಪ್ರಿಲ್	₹195	₹2,078
ಮೇ	₹993	₹3,071

(*ಮಾರ್ಚ್ ತಿಂಗಳ 1ರಂದು ವಾಣಿಜ್ಯ ಸಿಲಿಂಡರ್ ₹28 ಹೆಚ್ಚಳ ಆಗಿತ್ತು. ಅದೇ ತಿಂಗಳ 7ರಂದು ₹114.50 ಏರಿಕೆಯಾಗಿತ್ತು. ಜನವರಿ 1ರಿಂದ ಮೇ 1ರವರೆಗೆ ವಾಣಿಜ್ಯ ಸಿಲಿಂಡರ್ ದರ ಒಟ್ಟು ₹1,491 ಹೆಚ್ಚಳವಾಗಿದೆ.)

ಪೆಟ್ರೋಲ್, ಡೀಸೆಲ್ ಬೆಲೆ ಮೇಲೆ ಮುಂದಿನ ದಾಳಿ ನಡೆಯಲಿದೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ₹993ರಷ್ಟು ಹೆಚ್ಚಾಗಿದೆ. ಇದೇ ಚುನಾವಣಾ ಬಿಲ್. ಟೀ ಸ್ಟಾಲ್, ಡಾಬಾ, ಹೋಟೆಲ್, ಬೇಕರಿ... ಹೀಗೆ ಪ್ರತಿಯೊಂದೂ ಕಡೆ ಬೆಲೆ ಹೆಚ್ಚಲಿದೆ

ರಾಹುಲ್ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ

ಜಗತ್ತಿನ ಇತರ ದೇಶಗಳಲ್ಲಿ ಎಷ್ಟು ಬೆಲೆ ಏರಿಕೆ ಆಗಿದೆ ಎಂಬುದನ್ನು ಒಮ್ಮೆ ಪರಿಶೀಲಿಸಿ ನೋಡಿ. ನಾವು ಇಷ್ಟರ ಮಟ್ಟಿಗೆ ಮಾತ್ರ ತಡೆಯಬಹುದು

ಸುರೇಶ್ ಗೋಪಿ, ಪೆಟ್ರೋಲಿಯಂ ಸಚಿವಾಲಯದ ರಾಜ್ಯ ಖಾತೆ ಸಚಿವ

ಸಿಲಿಂಡರ್ ಬೆಲೆಯಷ್ಟೇ ದುಬಾರಿ ಆಗುವುದಿಲ್ಲ; ರೊಟ್ಟಿ–ಊಟದ ಬೆಲೆಯೂ ಹೆಚ್ಚಾಗುತ್ತದೆ. ಅದರ ನೋವು ಸ್ವತಃ ಹಣ ನೀಡಿ ಖರೀದಿಸಿ ತಿನ್ನುವವರಿಗೆ ಮಾತ್ರ ತಿಳಿಯುತ್ತದೆ. ಬೇರೆಯವರ ಮನೆಯಲ್ಲಿ ತಿನ್ನುವವನಿಗಲ್ಲ ಅಥವಾ ಬೇರೆಯವರ ತಟ್ಟೆಯಿಂದ ಕಸಿದು ತಿನ್ನುವವನಿಗಲ್ಲ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ

ಹೋಟೆಲ್ ಆಹಾರ ಬೆಲೆ ಏರಿಕೆ ಸಾಧ್ಯತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ದರ ಹೆಚ್ಚಳ ಬೆನ್ನಲ್ಲೇ ಹೋಟೆಲ್‌ಗಳ ಆಹಾರ ದರ ಹೆಚ್ಚಿಸುವ ಸಾಧ್ಯತೆ ಇದ್ದು, ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಲಿದೆ.

ಬೆಲೆ ಏರಿಕೆಯ ಹೊಡೆತ ತಪ್ಪಿಸಿಕೊಳ್ಳಲು ಹೋಟೆಲ್, ರೆಸ್ಟೋರೆಂಟ್‌ಗಳ ಮಾಲೀಕರು ಆಹಾರದ ದರಗಳನ್ನು ಹೆಚ್ಚಿಸಲು ಮುಂದಾಗಿದ್ದಾರೆ. ಕಾಫಿ, ಚಹಾ ಜತೆಗೆ ದೋಸೆ, ಪೂರಿ ಹಾಗೂ ಇತರೆ ತಿನಿಸುಗಳ ತಯಾರಿಕೆಗೆ ಗ್ಯಾಸ್ ಹೆಚ್ಚು ಬೇಕಾಗುತ್ತದೆ. ಹಾಗಾಗಿ ಈ ತಿನಿಸುಗಳ ದರ ₹3 ರಿಂದ ₹6 ರವರೆಗೆ ಏರಿಕೆ ಮಾಡುವ ಸಾಧ್ಯತೆ ಇದೆ.

8

ನದಿ ಜೋಡಣೆಗೆ ಸಮೀಕ್ಷೆ: ಆಕ್ಷೇಪ

ಬೇಡ್ತಿ–ವರದಾ ಯೋಜನೆಗೆ ಪರಿಸರವಾದಿಗಳ ವಿರೋಧ

ಪ್ರಜಾವಾಣಿ ವಾರ್ತೆ

ಬೇಸಿಗೆ ಸಂದರ್ಭದಲ್ಲಿನ ಬೇಡ್ತಿ ನದಿ

ಶಿರಸಿ: 'ಬೇಡ್ತಿ-ವರದಾ ನದಿ ಜೋಡಣೆ ಯೋಜನೆ ಸಂಬಂಧ ಪಾರದರ್ಶಕ ತೀರ್ಮಾನ ಕೈಗೊಳ್ಳುವ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಭರವಸೆ ಸಿಕ್ಕಿತ್ತು. ಆದರೆ, ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಆಡಳಿತ ವ್ಯವಸ್ಥೆಯು ತಾಂತ್ರಿಕ ಸಮೀಕ್ಷೆ ನಡೆಸಲು ಅವಕಾಶ ಮಾಡಿಕೊಟ್ಟಿರುವುದು ತಪ್ಪು' ಎಂದು ಪರಿಸರ ಕಾರ್ಯಕರ್ತರು ಮತ್ತು ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ (ಎನ್‌ಡಬ್ಲ್ಯುಡಿಎ) ಹಾಗೂ ರಾಜ್ಯ ಜಲಸಂಪನ್ಮೂಲ ಇಲಾಖೆಯ ಹೈದರಾಬಾದ್ ಮತ್ತು ಬೆಂಗಳೂರು ಕಚೇರಿಯ ಹಿರಿಯ ವಿಜ್ಞಾನಿಗಳು, ಎಂಜಿನಿಯರ್‌ಗಳು ಮತ್ತು ನದಿ ಜೋಡಣೆ ತಜ್ಞರು ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಪೂರಕವಾಗಿ ಯೋಜನಾ ಸ್ಥಳಗಳಿಗೆ ಏಪ್ರಿಲ್ 28ರಂದು ಭೇಟಿ ತಾಂತ್ರಿಕ ಕಾರ್ಯಸಾಧ್ಯತಾ ಮಾಹಿತಿ ಸಂಗ್ರಹಿಸಿದ್ದಾರೆ.

'ನದಿ ಜೋಡಣೆ ವಿಸ್ತೃತ ಯೋಜನಾ ವರದಿ ಕೈಬಿಡಲು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಸದಸ್ಯರು ತುಂಬಾ ದಿನಗಳ ಹಿಂದೆಯೇ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದರು. ನೀರಾವರಿ ತಜ್ಞರು, ಪರಿಸರವಾದಿಗಳು ಮತ್ತು ಯೋಜನೆ ಅನುಷ್ಠಾನಾಧಿಕಾರಿಗಳ ಜಂಟಿ ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳುವ ಮತ್ತು ಪುನರ್ ಪರಿಶೀಲಿಸುವ ಭರವಸೆ ಸಿಕ್ಕಿತ್ತು. ಆದರೆ, ಇದರ ಮಧ್ಯೆ ತಾಂತ್ರಿಕ ಸಮೀಕ್ಷೆ ನಡೆದಿದೆ. ಜನಾಭಿಪ್ರಾಯಕ್ಕೆ ಮನ್ನಣೆ ನೀಡದೇ ಬಲವಂತವಾಗಿ ಯೋಜನೆಯನ್ನು ಹೇರುವ ಯತ್ನ ನಡೆದಿದೆ' ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಬಾಲಚಂದ್ರ ಸಾಯಿಮನೆ ತಿಳಿಸಿದರು.

> **ಭವಿಷ್ಯದಲ್ಲಿ ಎಲ್ಲಿಯೇ ಸಮೀಕ್ಷೆ ಕಾರ್ಯಕ್ಕೆ ಬಂದರೂ ಕೊಳ್ಳ ಸಂರಕ್ಷಣಾ ಸಮಿತಿ ವತಿಯಿಂದ ತಡೆಯಲಾಗುವುದು. ಸಮೀಕ್ಷೆ ನಡೆಸಲು ಅವಕಾಶ ಕೊಡುವುದಿಲ್ಲ**
>
> **ಅನಂತ ಅಶೀಸರ,** ಸಮಿತಿ ಸಂಚಾಲಕ

'ಅರಣ್ಯ ಸಂರಕ್ಷಿತ ಪ್ರದೇಶದಲ್ಲಿ ಯಾವುದೇ ಸಮೀಕ್ಷೆ ನಡೆಸಲು ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಆದರೆ, ಸಮೀಕ್ಷಾ ತಂಡದವರು ಪ್ರವಾಸಿಗರಂತೆ ಬಂದು ಸ್ಥಳ ಪರಿಶೀಲಿಸಿರುವುದು ವನ್ಯಜೀವಿ ಕಾಯ್ದೆಯ ನೇರ ಉಲ್ಲಂಘನೆ. ಸ್ಥಳೀಯ ಅಧಿಕಾರಿಗಳಿಗೂ ಮಾಹಿತಿ ನೀಡಿಲ್ಲ. ತೀವ್ರ ಸ್ವರೂಪದ ವಿರೋಧವಿದ್ದರೂ ಈ ಯೋಜನೆ ಮುಂದುವರಿಸುತ್ತಿರುವ ಸರ್ಕಾರದ ಹಟಮಾರಿ ಧೋರಣೆಯ ಹಿಂದೆ ಯಾರ ಹಿತಾಸಕ್ತಿ ಅಡಗಿದೆ' ಎಂದು ಸಮಿತಿಯ ಸಂಚಾಲಕ ಅನಂತ ಹೆಗಡೆ ಅಶೀಸರ ಪ್ರಶ್ನಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕಾರ್ಮಿಕರ ಮಕ್ಕಳಿಗೆ 'ಕಿಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಒಳಗೊಂಡ 'ಶಾಲಾ ಕಿಟ್' ಒದಗಿಸುವ ಯೋಜನೆಯನ್ನು ಕಾರ್ಮಿಕ ಇಲಾಖೆ ಇದೇ ಶೈಕ್ಷಣಿಕ ವರ್ಷದಿಂದ ಆರಂಭಿಸಲಿದೆ.

ಸುಮಾರು 1.30 ಲಕ್ಷ ವಿದ್ಯಾರ್ಥಿಗಳಿಗೆ ಈ ಯೋಜನೆಯ ಪ್ರಯೋಜನ ಸಿಗಲಿದ್ದು, ಇದಕ್ಕಾಗಿ ₹115.84 ಕೋಟಿ ವೆಚ್ಚ ಮಾಡಲಿದೆ. ಈ ಸಂಬಂಧ 'ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಯ 47ನೇ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿದ್ದು, ಸರ್ಕಾರದ ಒಪ್ಪಿಗೆಯೂ ಸಿಕ್ಕಿದೆ.

ಪ್ರತಿಯೊಂದು ಕಿಟ್‌ನ ವೆಚ್ಚ ₹8,706ರಿಂದ ₹9,535. 1ರಿಂದ 5, 6ರಿಂದ 8 ಮತ್ತು 9ರಿಂದ 12ನೇ ತರಗತಿಗಳ ವಿದ್ಯಾರ್ಥಿಗಳಿಗೆ ಕಿಟ್‌ಗಳನ್ನು ವಿತರಿಸಲಾಗುತ್ತದೆ. ಈ ಕಿಟ್‌ಗಳನ್ನು ಎಂಎಸ್‌ಐಎಲ್ ಪೂರೈಸಲಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆಯಲ್ಲಿ ಕಾರ್ಮಿಕ ಮಕ್ಕಳ ಶಿಕ್ಷಣಕ್ಕೆ ಮಂಡಳಿ ನೆರವು ನೀಡಬಹುದು ಎಂಬ ಉಲ್ಲೇಖ ಇದೆ. ವರ್ಷದ ಆರಂಭದಲ್ಲೇ ನೀಡಲಾಗುತ್ತಿದೆ. ಪೋಷಕರು ಲೇಖನ ಸಾಮಗ್ರಿಗಳಿಗಾಗಿ ವೆಚ್ಚ ಮಾಡುವ ಹೊರೆ ತಪ್ಪಲಿದೆ.

8

ಎಚ್ಚರಿಕೆ ಸಂದೇಶ: ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಹ, ಭೂಕಂಪ, ಅತಿವೃಷ್ಟಿ, ಭೂಕುಸಿತದಂತಹ ಪ್ರಾಕೃತಿಕ ವಿಕೋಪಗಳು ಮತ್ತು ತುರ್ತು ಸಂದರ್ಭದಲ್ಲಿ ನಾಗರಿಕರ ಮೊಬೈಲ್‌ಗೆ ನೇರವಾಗಿ ಎಚ್ಚರಿಕೆ ಸಂದೇಶ ಬಿತ್ತರಿಸುವ 'ಸೆಲ್ ಬ್ರಾಡ್‌ಕಾಸ್ಟಿಂಗ್ ಅಲರ್ಟ್' ಸೇವೆಯ ಆರಂಭಕ್ಕೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಸಿದ್ಧತೆ ನಡೆಸಿದೆ. ಇದರ ಭಾಗವಾಗಿ ಬೆಂಗಳೂರು ನಾಗರಿಕರ ಮೊಬೈಲ್‌ಗಳಿಗೆ ಶನಿವಾರದಿಂದ (ಮೇ 2) ಎಚ್ಚರಿಕೆ ಸಂದೇಶ ಬರಲಿದೆ.

- ಪ್ರಾಕೃತಿಕ ವಿಕೋಪ ಅಥವಾ ತುರ್ತು ಸಂದರ್ಭಕ್ಕೆ ಗುರಿಯಾದ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿರುವ ಎಲ್ಲ ಮೊಬೈಲ್/ಸ್ಮಾರ್ಟ್‌ಫೋನ್‌ಗಳಲ್ಲಿ ಎಚ್ಚರಿಕೆ ಸಂದೇಶ ರವಾನೆಯಾಗಲಿದೆ
- 2ಜಿ, 3ಜಿ, 4ಜಿ ಮತ್ತು 5ಜಿ ಸಿಮ್ ಇರುವ ಮೊಬೈಲ್‌ಗಳಲ್ಲೂ ಈ ಎಚ್ಚರಿಕೆ ಸಂದೇಶ ಬಿತ್ತರ
- ಇದಕ್ಕಾಗಿ ಮೊಬೈಲ್ ಮತ್ತು ಸ್ಮಾರ್ಟ್‌ಫೋನ್‌ಗಳಲ್ಲಿ ಯಾವುದೇ ಹೆಚ್ಚುವರಿ ಆ್ಯಪ್ ಅಳವಡಿಸುವ ಅವಶ್ಯಕತೆ ಇಲ್ಲ. ಇಂಟರ್‌ನೆಟ್ ಸಂಪರ್ಕದ ಅಗತ್ಯವೂ ಇಲ್ಲ
- ಈ ವ್ಯವಸ್ಥೆಯು ದೂರಸಂಪರ್ಕ ಕಂಪನಿಗಳ ನೆಟ್‌ವರ್ಕ್ ಗೋಪುರಗಳ (ಟವರ್) ಮೂಲಕ ಕಾರ್ಯನಿರ್ವಹಿಸಲಿದೆ. ಅಲ್ಲಿಂದ ಬಿತ್ತರವಾಗುವ ಸಂದೇಶಗಳನ್ನು ಸ್ವೀಕರಿಸಲು ಮೊಬೈಲ್/ ಸ್ಮಾರ್ಟ್‌ಫೋನ್‌ನಲ್ಲಿ ಇರುವ ಸಿಮ್ ಚಾಲ್ತಿಯಲ್ಲಿ ಇರಬೇಕು

ಆತಂಕ ಬೇಕಿಲ್ಲ

ಈ ವ್ಯವಸ್ಥೆಯ ಪ್ರಾಯೋಗಿಕ ಚಾಲನೆಗೆ ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು. ಬೆಂಗಳೂರಿನ ವ್ಯಾಪ್ತಿಯಲ್ಲಿ ಇರುವ ಪ್ರತಿಯೊಬ್ಬರ ಮೊಬೈಲ್/ಸ್ಮಾರ್ಟ್‌ಫೋನ್‌ಗಳಿಗೆ ಪ್ರಾಯೋಗಿಕ ಸಂದೇಶ ಬರಲಿದೆ. ಈ ಸಂದೇಶ ಬಂದಾಗ ಬೀಪ್ ಸದ್ದು ಬರಲಿದ್ದು, ಕೆಲ ನಿಮಿಷ ಸಂದೇಶ ಬಿತ್ತರವಾಗಲಿದೆ. ಪ್ರಾಯೋಗಿಕ ಸಂದೇಶ ಆದ ಕಾರಣ ನಾಗರಿಕರು ಗಾಬರಿಯಾಗುವ ಅವಶ್ಯಕತೆ ಇಲ್ಲ ಎಂದು ಎನ್‌ಡಿಎಂಎ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

5

8

ಎಚ್‌ಎಎಲ್‌ಗೆ ಕನ್ನಡಿಗನ ಸಾರಥ್ಯ

ರವಿ ಕೆ.

ಬೆಂಗಳೂರು (ಪಿಟಿಐ): ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್‌ಎಎಲ್) 22ನೇ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ (ಸಿಎಂಡಿ) ರವಿ ಕೆ. ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ. ರವಿ ಅವರು ಉಡುಪಿ ಜಿಲ್ಲೆಯ ಕೋಟದವರು.

ತಯಾರಿಕೆ, ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ರವಿ ಕೆಲಸ ಮಾಡಿದ್ದು, 30 ವರ್ಷಕ್ಕೂ ಅಧಿಕ ಅನುಭವ ಹೊಂದಿದ್ದಾರೆ.

8



ದೇಶದ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

> ಕರ್ನಾಟಕವನ್ನು ದೇಶದ ಬಾಹ್ಯಾಕಾಶ ಆರ್ಥಿಕತೆಯ ಪ್ರಮುಖ ಚಾಲಕಶಕ್ತಿಯನ್ನಾಗಿ ಅಭಿವೃದ್ಧಿಪಡಿಸುವಲ್ಲಿ ಈ ಶ್ರೇಷ್ಠತಾ ಕೇಂದ್ರವು ಮಹತ್ವದ ಪಾತ್ರವಹಿಸಲಿದೆ
> **ಪ್ರಿಯಾಂಕ್ ಖರ್ಗೆ,** ಮಾಹಿತಿ ತಂತ್ರಜ್ಞಾನ ಸಚಿವ

ಬೆಂಗಳೂರು: 'ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಬಾಹ್ಯಾಕಾಶ ತಂತ್ರಜ್ಞಾನದಲ್ಲೂ ಮುಂಚೂಣಿ ಸ್ಥಾನವನ್ನು ಕಾಯ್ದುಕೊಳ್ಳಲು ದೇಶದ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವನ್ನು ಆರಂಭಿಸುತ್ತಿದ್ದೇವೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕರ್ನಾಟಕ ಸರ್ಕಾರ ಮತ್ತು ಸ್ಯಾಟ್‌ಕಾಂ ಇಂಡಸ್ಟ್ರಿ ಅಸೋಸಿಯೇಷನ್ (ಎಸ್‌ಐಎ)–ಇಂಡಿಯಾ ಸಹಭಾಗಿತ್ವದಲ್ಲಿ ಆರಂಭಿಸಲಾಗಿರುವ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರ, 'ಸಿಓಇ ಸ್ಪೇಸ್ ಟೆಕ್ ಫೌಂಡೇಷನ್' ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರವು ಕ್ಷಿಪ್ರವಾಗಿ ಬೆಳೆಯುತ್ತಿದೆ. ಅಲ್ಲಿರುವ ಅಭಿವೃದ್ಧಿಯ ಅವಕಾಶಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ಈ ಶ್ರೇಷ್ಠತಾ ಕೇಂದ್ರವನ್ನು ಆರಂಭಿಸಲಾಗಿದೆ. ಸರ್ಕಾರ, ಕೈಗಾರಿಕೆಗಳು, ನವೋದ್ಯಮ ಮತ್ತು ಶಿಕ್ಷಣ ಸಂಸ್ಥೆಗಳು ಪರಸ್ಪರ ಸಂಯೋಜನೆಯಲ್ಲಿ ಕಾರ್ಯನಿರ್ವಹಿಸಲು ಈ ಕೇಂದ್ರವು ವೇದಿಕೆ ಒದಗಿಸಲಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ಬಲಪಡಿಸಲು ಕರ್ನಾಟಕವು ಸದಾ ಮುಂದೆ ನಿಲ್ಲುತ್ತದೆ. ಕರ್ನಾಟಕದ ಈ ಬದ್ಧತೆಯನ್ನು ಈ ಶ್ರೇಷ್ಠತಾ ಕೇಂದ್ರವು ಇನ್ನಷ್ಟು ಗಟ್ಟಿಗೊಳಿಸಿದೆ' ಎಂದರು.

ಬೆಂಗಳೂರು ಏರೋಸ್ಪೇಸ್ ಪಾರ್ಕ್‌ನಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಬಾಹ್ಯಾಕಾಶ ಕ್ಷೇತ್ರದ ಕಂಪನಿಗಳ ಮೂಲಕ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ತರಬೇತಿ ಒದಗಿಸುವ ಕೆಲಸ ಮಾಡಲಿದೆ. ನವೋದ್ಯಮಗಳ ಸಂಶೋಧನೆ ಮತ್ತು ಪ್ರಯೋಗಗಳಿಗೆ ಅಗತ್ಯ ವೇದಿಕೆ ಒದಗಿಸಲಿದೆ.

ಐದು ಒಪ್ಪಂದಗಳಿಗೆ ಸಹಿ: ಬಾಹ್ಯಾಕಾಶ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಳ್ಳುವ ಉದ್ದೇಶದಿಂದ ಸಿಓಇ ಸ್ಪೇಸ್ ಟೆಕ್ ಫೌಂಡೇಷನ್, ಬೇರೆ ಬೇರೆ ಸಂಸ್ಥೆಗಳ ಒಟ್ಟಿಗೆ ಒಟ್ಟು ಐದು ಒಪ್ಪಂದಗಳಿಗೆ ಸಹಿ ಹಾಕಿದೆ. ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿ, ಅಮೆರಿಕದ ಹೆಲೋಜನ್ ಕಾರ್ಪೊರೇಷನ್, ಜೈವಿಕ ತಂತ್ರಜ್ಞಾನ ಉದ್ಯಮಗಳ ಸಂಘ, ಡಾಸೊ ಸಿಸ್ಟಮ್ಸ್, ಐಡಿಯಾ ಬಾಜ್ ಜತೆಗಿನ ಒಪ್ಪಂದ ಪತ್ರಗಳನ್ನು ಸಿಓಇ ಸ್ಪೇಸ್ ಟೆಕ್ ಫೌಂಡೇಷನ್‌ನ ಮುಖ್ಯಸ್ಥರು ಪರಸ್ಪರ ಹಸ್ತಾಂತರಿಸಿದರು.

5,000 ಗಿಡ ನೆಡುವ ಅಭಿಯಾನ

ಬೆಂಗಳೂರು: 'ರಾಜ್ಯದಲ್ಲಿ ಮುಂದಿನ ಐದು ವರ್ಷಗಳಲ್ಲಿ ಐದು ಸಾವಿರ ಗಿಡಗಳನ್ನು ನೆಡುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಯುಎಸ್ ಮೂಲದ ತಂತ್ರಜ್ಞಾನ ಸಂಸ್ಥೆ ಮಾಡರ್ ತಿಳಿಸಿದೆ.

'ನಮ್ಮ ಕಂಪನಿಯು ಬೆಂಗಳೂರಿನಲ್ಲಿ ಕಾರ್ಯಚಟುವಟಿಕೆ ನಡೆಸುತ್ತಿದ್ದು, ಕರ್ನಾಟಕದಲ್ಲಿ ಹಸಿರು ಸಂಪತ್ತನ್ನು ಹೆಚ್ಚಿಸುವ ಗುರಿ ಹೊಂದಿದೆ. ಮೊದಲ ಹಂತದಲ್ಲಿ ಚಿಕ್ಕಮಗಳೂರು, ಕೊಪ್ಪಳ ಮತ್ತು ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧೆಡೆ ಗಿಡ ನೆಡಲು ಕ್ರಮ ಕೈಗೊಳ್ಳಲಾಗುವುದು. ಜುಲೈ ವೇಳೆಗೆ ಈ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆಯಿದೆ' ಎಂದು ಮಾಡರ್‌ನ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎರಿಕ್ ಆ್ಯಂಡರ್ಸನ್ ಹೇಳಿದ್ದಾರೆ.

ಅನುವಾದ ಸಾಹಿತ್ಯದ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2025ನೇ ಸಾಲಿನ 'ಎಚ್.ವಿ. ಸಾವಿತ್ರಮ್ಮ ಪ್ರಶಸ್ತಿ'ಗೆ ಲೇಖಕಿಯರಿಂದ ಅನುವಾದ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಿದೆ.

ಯಾವುದೇ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ, 2023, 2024 ಅಥವಾ 2025ನೇ ಸಾಲಿನಲ್ಲಿ ಪ್ರಕಟಗೊಂಡ ಕೃತಿಗಳನ್ನು ಪ್ರಶಸ್ತಿಗೆ ಕಳುಹಿಸಬಹುದಾಗಿದೆ.

ನವೋದಯ ಕಾಲಘಟ್ಟದ ಲೇಖಕಿ ಎಚ್.ವಿ. ಸಾವಿತ್ರಮ್ಮ ಅವರು ತೀಕ್ಷ್ಣ ವೈಚಾರಿಕ ಬರಹಗಳಿಂದ ಗುರುತಿಸಿಕೊಂಡರು. ಅವರ ಕುಟುಂಬ ವರ್ಗ ಕರ್ನಾಟಕ ಲೇಖಕಿಯರ ಸಂಘದಲ್ಲಿ ದತ್ತಿ ಇಟ್ಟಿದ್ದು, ಪ್ರತಿ ವರ್ಷ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ ಎಂದು ಸಂಘದ ಅಧ್ಯಕ್ಷೆ ಸುನಂದಮ್ಮ ತಿಳಿಸಿದ್ದಾರೆ.

ಕೃತಿಗಳನ್ನು ಕರ್ನಾಟಕ ಲೇಖಕಿಯರ ಸಂಘ, ನಂ.206, 2ನೇ ಮಹಡಿ, ವಿಜಯ ಮ್ಯಾನ್ಷನ್, 2ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು- 560018 ಈ ವಿಳಾಸಕ್ಕೆ ಮೇ 20ರೊಳಗೆ ಕಳಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಪಿಯು: ಸಮರಿನ್ 5ನೇ ರ್‍ಯಾಂಕ್

ಬೀಳಗಿ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಬಾಡಗಂಡಿ ಬಾಪೂಜಿ ಸ್ವತಂತ್ರ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಸಮರಿನ್ ರಿಯಾಜ್ ಬಾಗವಾನ, ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಶೇ 99.33 ರಷ್ಟು ಅಂಕ ಗಳಿಸಿ, ರಾಜ್ಯಕ್ಕೆ ಐದನೇ ರ್‍ಯಾಂಕ್ ಗಳಿಸಿದ್ದಾರೆ.

ಪರೀಕ್ಷೆಯಲ್ಲಿ 584 ಅಂಕ ಪಡೆದಿದ್ದ ಸಮರಿನ್, ಹೆಚ್ಚಿನ ಅಂಕಗಳ ನಿರೀಕ್ಷೆಯಲ್ಲಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರಿಂದ 600ಕ್ಕೆ 596 ಅಂಕ ಬಂದಿವೆ. ಸಮರಿನ್ ಅವರು ರಿಯಾಜ್-ಹಮೀದಾ ಬಾಗವಾನ ದಂಪತಿಯ ದ್ವಿತೀಯ ಪುತ್ರಿ. 'ಶಿಕ್ಷಕರು ಹೇಳಿದ ಪಾಠ ಕೇಳಿ, ಓದಿದ ವಿಷಯವನ್ನು ಮನನ ಮಾಡಿಕೊಳ್ಳುತ್ತಿದ್ದೆ. ಗೊಂದಲಗಳಿದ್ದರೆ ಶಿಕ್ಷಕರಿಂದ ಪರಿಹರಿಸಿಕೊಳ್ಳುತ್ತಿದ್ದೆ. ಚಾರ್ಟರ್ಡ್ ಅಕೌಂಟೆಂಟ್ ಆಗುವ ಗುರಿಯಿದೆ' ಎಂದು ಸಮರಿನ್ ತಿಳಿಸಿದರು.

ಪಾರ್ಕಿಂಗ್ ಕಟ್ಟಡ: ಖಾಸಗಿಯವರಿಗೆ ಉತ್ತೇಜನ

ಡಬಲ್ ಡೆಕರ್, ಮೇಲ್ಸೇತುವೆ ಬ್ರ್ಯಾಂಡ್ ಬೆಂಗಳೂರು ನಿರ್ಮಿಸಲು ಸಹಕಾರಿ: ಡಿಸಿಎಂ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ವಾಹನ ನಿಲುಗಡೆಗೆ ಕಟ್ಟಡ ನಿರ್ಮಾಣಗಳನ್ನು ಉತ್ತೇಜಿಸಲು ಖಾಸಗಿಯವರಿಗೆ ಪ್ರೋತ್ಸಾಹ ನೀಡಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದಲ್ಲಿ ವಿವಿಧ ಯೋಜನೆಗಳಿಗೆ ಶುಕ್ರವಾರ ಚಾಲನೆ ಹಾಗೂ ಶಂಕುಸ್ಥಾಪನೆ ನಡೆಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಸಂಚಾರ ದಟ್ಟಣೆ ಇರುವ ಕಡೆ ವಾಹನ ನಿಲ್ಲಿಸಲು ಅವಕಾಶ ನೀಡಲಾಗುವುದಿಲ್ಲ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ ಕಟ್ಟಡವನ್ನು ಜನರು ಬಳಸಿಕೊಳ್ಳಬೇಕು. ವಾಹನ ಪಾರ್ಕಿಂಗ್ ವಿಚಾರದಲ್ಲಿ ಖಾಸಗಿಯವರಿಗೆ ಹೆಚ್ಚು ಉತ್ತೇಜನ ನೀಡಬೇಕು ಎಂದು ಹೊಸ ನಿಯಮಗಳನ್ನು ಮಾಡುತ್ತಿದ್ದೇವೆ. ಸರ್ಕಾರದ ಪಾರ್ಕಿಂಗ್ ಜೊತೆಗೆ ಖಾಸಗಿ ಪಾರ್ಕಿಂಗ್ ಸಹ ಮಾಡಲಾಗುವುದು. 10x12 ಅಡಿ ಅಳತೆಯ ಜಾಗದಲ್ಲಿ 20 ವಾಹನಗಳನ್ನು ನಿಲ್ಲಿಸುವ ತಂತ್ರಜ್ಞಾನ ನೋಡಿದ್ದೇನೆ. ಇದಕ್ಕೆ ಖಾಸಗಿಯವರಿಗೆ ಪ್ರೋತ್ಸಾಹ ನೀಡಲು ಆಲೋಚಿಸಲಾಗಿದೆ' ಎಂದರು.

'ಕೆ.ಆರ್. ಮಾರುಕಟ್ಟೆಯಲ್ಲಿ ನೂತನ ಪಾರ್ಕಿಂಗ್ ಕಟ್ಟಡ ಲೋಕಾರ್ಪಣೆ ಮಾಡಿದ್ದು, ಇದರ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲಾಗಿದೆ. ವಾಹನ ನಿಲುಗಡೆಗೆ ಹೆಚ್ಚು ಶುಲ್ಕ ವಿಧಿಸಿಲ್ಲ. ಸುತ್ತಮುತ್ತ 1 ಕಿ.ಮೀ ಯಾರೂ ವಾಹನ ನಿಲ್ಲಿಸಬಾರದು ಎಂದು ಪೊಲೀಸರು ತಿಳಿಸಬೇಕು. ಅಂಗಡಿ ಮಾಲೀಕರು ವಾಹನಗಳನ್ನು ಅಲ್ಲಿಯೇ ನಿಲ್ಲಿಸಬೇಕು. ಎಲ್ಲೆಂದರಲ್ಲಿ ವಾಹನ ನಿಲ್ಲಿಸಿದರೆ ಟೋಯಿಂಗ್ ಮಾಡಲಾಗುವುದು' ಎಂದು ಎಚ್ಚರಿಸಿದರು.

'ಕೆ.ಆರ್. ಮಾರುಕಟ್ಟೆಯಲ್ಲಿ ಕಟ್ಟಡಗಳ ಬಳಕೆ ಸರಿಯಾಗಿಲ್ಲ. ಹೂವಿನ ವರ್ತಕರು ಸೇರಿದಂತೆ ಅನೇಕರು ಅವರ ಕಟ್ಟಡಕ್ಕೆ ಹೋಗಿರಲಿಲ್ಲ. ಈಗ ಒಂದಷ್ಟು ಯೋಜನೆಗಳ ಮೂಲಕ, ಪ್ರದೇಶವನ್ನು ದುರಸ್ತಿಗೊಳಿಸಿ ವರ್ತಕರನ್ನು ಸ್ಥಳಾಂತರ ಮಾಡಲಾಗಿದೆ. ವರ್ತಕರು ಬರದಿದ್ದರೆ ಬೇರೆಯವರಿಗೆ ಬಾಡಿಗೆ ನೀಡಬೇಕು ಅಥವಾ ನಮ್ಮದೇ ಯಾವುದಾದರೂ ಕಚೇರಿಗಳನ್ನು ತೆರೆಯಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ' ಎಂದರು.

44 ಕಿ.ಮೀ ಉದ್ದ ಡಬಲ್ ಡೆಕರ್: 'ನಗರದಲ್ಲಿ ಸುಮಾರು 44 ಕಿ.ಮೀ ಉದ್ದದ ಡಬಲ್ ಡೆಕರ್ ನಿರ್ಮಾಣಕ್ಕೆ ಯೋಜಿಸಲಾಗಿದೆ. ಇದರ ಬಗ್ಗೆ ಈ ಹಿಂದೆಯೇ ಆಲೋಚನೆ ಮಾಡಿದಿದ್ದರೆ 336 ಕಿ.ಮೀ ಉದ್ದದ ಮೆಟ್ರೊ ಯೋಜನೆಯಲ್ಲಿ ಸುಮಾರು 200 ಕಿ.ಮೀ ಉದ್ದವಾದರೂ ಡಬಲ್ ಡೆಕರ್ ಯೋಜನೆ ಮಾಡಬಹುದಿತ್ತು. ಆದರೂ ಈಗ ತಡವಾಗಿಲ್ಲ, ಯೋಜನೆ ರೂಪಿಸಿದ್ದೇವೆ' ಎಂದು ಹೇಳಿದರು.

'ಎಲ್ಲಾ ಶಾಸಕರು, ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರನ್ನೂ ಒಟ್ಟಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಬೆಂಗಳೂರನ್ನು ಅಭಿವೃದ್ಧಿ ಮಾಡಲಾಗುವುದು. ಬೆಂಗಳೂರು ಜನರ ನಿರೀಕ್ಷೆಗಳನ್ನು ಒಂದೊಂದಾಗಿ ಈಡೇರಿಸಲಾಗುತ್ತಿದೆ. ಅಭಿವೃದ್ಧಿ ಎಂದರೆ ಒಂದೇ ರಾತ್ರಿಯಲ್ಲಿ ಮಾಡುವ ಕೆಲಸಗಳಲ್ಲ. ಇದಕ್ಕೂ ಸಮಯ ಬೇಕಿದೆ' ಎಂದರು.

'ಎಂ.ಜಿ ರಸ್ತೆಯಲ್ಲಿ ಹೊಸ ಮಾದರಿ ಡೈನಾಮಿಕ್ ದೀಪಗಳನ್ನು ಅಳವಡಿಸಲಾಗಿದೆ. ಇಲ್ಲಿ ಎಂ.ಆರ್. ಎಲೆಕ್ಟ್ರಿಕಲ್ಸ್ ಸಂಸ್ಥೆ ಕಾಲಮಿತಿಯೊಳಗೆ ಆಧುನಿಕ ಲೈಟಿಂಗ್ ವ್ಯವಸ್ಥೆ ಮಾಡಿದ್ದು ಬಣ್ಣದ ವಿನ್ಯಾಸವೂ ಚೆನ್ನಾಗಿದೆ. ನಗರದ ಎಲ್ಲಾ ಕಡೆಯೂ ಬೀದಿ ದೀಪಗಳನ್ನು ಇನ್ನೂ ಹೆಚ್ಚು ಪ್ರಖರತೆ ಬೀರುವಂತೆ ಮಾಡಲಾಗುವುದು' ಎಂದು ಹೇಳಿದರು.

ಡಬಲ್ ಡೆಕರ್‌ಗೆ ಚಾಲನೆ ನೀಡಿದ ಡಿ.ಕೆ. ಶಿವಕುಮಾರ್ ಅವರು ಆ ಮೇಲ್ಸೇತುವೆಯಲ್ಲಿ ಕಾರಿನಲ್ಲಿ ಪ್ರಯಾಣಿಸಿದರು. ಸಂಸದ ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ವಿವಿಧ ಯೋಜನೆಗಳಿಗೆ ಚಾಲನೆ

- ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ 5.12 ಕಿ.ಮೀ ಉದ್ದದ ಡಬಲ್ ಡೆಕರ್‌ಗೆ ಚಾಲನೆ ನೀಡಲಾಯಿತು
- ಬನಶಂಕರಿ ಜಂಕ್ಷನ್‌ನಲ್ಲಿ ಪಾದಚಾರಿಗಳಿಗಾಗಿ ಸ್ಕೈವಾರ್ಕ್ ನಿರ್ಮಾಣಕ್ಕೆ ಶಂಕುಸ್ಥಾಪನೆ
- ಗಾಂಧಿ ಬಜಾರ್‌ನಲ್ಲಿ ವಾಣಿಜ್ಯ ಸಂಕೀರ್ಣ ಮತ್ತು ಬಹುಮಹಡಿ ವಾಹನ ನಿಲುಗಡೆ ಕೇಂದ್ರ ಲೋಕಾರ್ಪಣೆ
- ಕೆ.ಆರ್. ಮಾರುಕಟ್ಟೆ ಕಟ್ಟಡದ ನೆಲಮಹಡಿಯಲ್ಲಿ ವಾಹನ ನಿಲುಗಡೆ ಸಂಕೀರ್ಣದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಚಾಲನೆ
- ನಗರದ ಸೌಂದರ್ಯವನ್ನು ಹೆಚ್ಚಿಸಲು ನಮ್ಮ ಮೆಟ್ರೊ ಪಿಲ್ಲರ್‌ಗಳಿಗೆ ಡೈನಾಮಿಕ್ ಲೈಟಿಂಗ್ ಅಳವಡಿಸುವ ವ್ಯವಸ್ಥೆ ಉದ್ಘಾಟನೆ

'ಅಂತರರಾಷ್ಟ್ರೀಯ ಮೇಲ್ಸೇತುವೆ'

'ಬನಶಂಕರಿ ದೇವಸ್ಥಾನ ಜಂಕ್ಷನ್‌ನಲ್ಲಿ ಅಂತರರಾಷ್ಟ್ರೀಯ ದರ್ಜೆಯ ಮೇಲ್ಸೇತುವೆ–ಸ್ಕೈವಾಕ್ ಅನ್ನು ನಿರ್ಮಿಸಲಾಗುತ್ತದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಬನಶಂಕರಿ ಜಂಕ್ಷನ್ ಸ್ಕೈವಾಕ್ ಬಗ್ಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಸಂಸದ ತೇಜಸ್ವಿ ಸೂರ್ಯ ಅವರು ಪ್ರಸ್ತಾವ ಮಾಡಿದ್ದರು. ಇದರ ಬಗ್ಗೆ ಸಚಿವ ಸಂಪುಟದಲ್ಲೂ ಚರ್ಚೆಯಾಗಿ, ರಾಮಲಿಂಗಾರೆಡ್ಡಿ ಅವರು ಮೇಲ್ಸೇತುವೆ ನಿರ್ಮಿಸಬೇಕೆಂದು ಹೇಳಿದ್ದಾರೆ. ಭವಿಷ್ಯದಲ್ಲಿ ಕನಕಪುರದ ಕಡೆಗೆ ಹೋಗಬೇಕಾದರೆ ಇದು ಜಂಕ್ಷನ್ ಆಗಲಿದೆ. ಮುಂದಕ್ಕೆ ಇಲ್ಲಿ ಸಂಚಾರ ದಟ್ಟಣೆ ಆಗಬಾರದು. ಅತಿಹೆಚ್ಚು ವಾಹನಗಳು ಸಂಚರಿಸುವ ಈ ಜಂಕ್ಷನ್‌ನಲ್ಲಿ ದಕ್ಷಿಣ ನಗರ ಪಾಲಿಕೆಯ ಕಚೇರಿ ನಿರ್ಮಾಣವಾಗಲಿದೆ' ಎಂದರು.

'ಬನಶಂಕರಿ ವೃತ್ತ ಪ್ರಮುಖವಾದುದು. ಇಲ್ಲಿ ಬನಶಂಕರಿ ದೇವಸ್ಥಾನವಿದೆ, ಬಸ್ ನಿಲ್ದಾಣವಿದೆ. ಇಲ್ಲಿ ಪಾದಚಾರಿಗಳಿಗೆ ತೊಂದರೆ ಆಗಬಾರದು ಎಂದು ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಸ್ಕೈವಾಕ್‌ಗೆ ಅಡಿಪಾಯ ಹಾಕಲಾಗಿದೆ. ಇದನ್ನು ಇನ್ನೂ ವಿಸ್ತರಿಸಿ, ಮೇಲ್ಸೇತುವೆಯನ್ನೂ ನಿರ್ಮಿಸಲಾಗುತ್ತದೆ' ಎಂದು ಹೇಳಿದರು.

'ಕಟ್ಟಡ ಉಳಿಸಲು ಮೇಲ್ಸೇತುವೆ'

'ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆಯಿದ್ದು, ಅಷ್ಟೇ ಸಂಖ್ಯೆಯ ವಾಹನಗಳಿವೆ. ಪರಿಹಾರದ ಮೊತ್ತ ಹೆಚ್ಚಳವಾಗಿರುವ ಕಾರಣಕ್ಕೆ ಕಟ್ಟಡಗಳನ್ನು ನೆಲಸಮ ಮಾಡದೇ ವಾಹನ ಸಂಚಾರಕ್ಕೆ ಬೇರೆ ಪರಿಹಾರ ಮಾಡಬೇಕು ಎಂದು ಮೇಲ್ಸೇತುವೆಗಳ ನಿರ್ಮಾಣ ಮಾಡಲಾಗುತ್ತಿದೆ' ಎಂದು ಶಿವಕುಮಾರ್ ಹೇಳಿದರು.

'ಪಿಇಎಸ್ ಕಾಲೇಜು ಬಳಿಯ ಮೇಲ್ಸೇತುವೆಯನ್ನೂ ಲೋಕಾರ್ಪಣೆ ಮಾಡಲಾಗಿದೆ. ಎಲಿವೇಟೆಡ್ ಕಾರಿಡಾರ್ ವಿಚಾರದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಂದಷ್ಟು ತೀರ್ಮಾನ ಮಾಡಲಾಗಿದೆ. 138 ಕಿ.ಮೀ.ನಷ್ಟು ಮೇಲ್ಸೇತುವೆ, ಅಂಡರ್ ಪಾಸ್ ನಿರ್ಮಾಣ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ನಾಯಂಡಹಳ್ಳಿ–ನೈಸ್ ರಸ್ತೆ ಲಿಂಕ್ ಕೂಡ ವಾಹನಗಳಿಗೆ ಮುಕ್ತವಾಗಿದೆ' ಎಂದು ಮಾಹಿತಿ ನೀಡಿದರು.

ಎಂ.ಜಿ ರಸ್ತೆಯಲ್ಲಿ ಮೆಟ್ರೊ ಪಿಲ್ಲರ್‌ಗಳಿಗೆ ಅಳವಡಿಸಿರುವ 'ಡೈನಾಮಿಕ್ ಲೈಟಿಂಗ್'

ಜಯಮಹಲ್ ರಸ್ತೆಯಲ್ಲಿ ಗೋಡೆಯ ಒಂದು ಭಾಗದಲ್ಲಿ ಕುಸಿತವಾಗಿದೆ

ಜಯಮಹಲ್ ರಸ್ತೆಯಲ್ಲಿ ಅಪಾಯದ ಗೋಡೆ

ಬೆಂಗಳೂರು: ನಗರದ ಜಯಮಹಲ್ ಮುಖ್ಯರಸ್ತೆಯಲ್ಲಿರುವ ಗೋಡೆಯೊಂದು ಅಲ್ಲಲ್ಲಿ ಕುಸಿದಿದ್ದು, ಬೀಳುವ ಹಂತದಲ್ಲಿದೆ. ಮಿಲ್ಲರ್ಸ್ ರಸ್ತೆಯಿಂದ ರೈಲ್ವೆ ಕೆಳಸೇತುವೆ ದಾಟಿಕೊಂಡು ಮುಂದೆ ಬಂದರೆ ಕೆಲವು ಕ್ರೀಡಾ ಚಟುವಟಿಕೆ ಇರುವ ಸಂಕೀರ್ಣ ಸಿಗುತ್ತದೆ. ಆ ಸಂಕೀರ್ಣಕ್ಕೆ ಹೊಂದಿಕೊಂಡಂತೆ ಎತ್ತರದ ಗೋಡೆಯನ್ನು ಹಲವು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಸಂಪೂರ್ಣ ಹಳೆಯದಾಗಿದೆ.

ಸುಮಾರು 700 ಮೀಟರ್‌ವರೆಗೂ ಕಲ್ಲು–ಇಟ್ಟಿಗೆಯ ಗೋಡೆ ಇದ್ದು, ಕೆಲವು ಕಡೆ ಕಲ್ಲು–ಇಟ್ಟಿಗೆಗಳು ಕೆಳಕ್ಕೆ ಬಿದ್ದಿವೆ. ಒಂದು ಕಡೆಯಂತು ದೊಡ್ಡ ಮರ ಗೋಡೆಗೆ ಆತುಗೊಂಡಿದ್ದು, ಯಾವಾಗಲಾದರೂ ಗೋಡೆ ವಾಲಬಹುದು ಎನ್ನುವ ಆತಂಕವಿದೆ.

ಈ ರಸ್ತೆಯಲ್ಲಿ ಪಾದಚಾರಿ ಮಾರ್ಗವೂ ಇದೆ. ಗೋಡೆ ಪಕ್ಕದಲ್ಲಿಯೇ ಜನ ಹಾದು ಹೋಗಬೇಕು. ನಾಲ್ಕೈದು ಕಡೆ ವ್ಯಾಪಾರವನ್ನು ಬೀದಿ ಬದಿ ವ್ಯಾಪಾರಸ್ಥರು ಮಾಡುತ್ತಾರೆ. ಬೇಸಿಗೆಯಾಗಿರುವುದರಿಂದ ಎಳನೀರು ಸೇವಿಸಲು ಇಲ್ಲಿಗೆ ಬರುತ್ತಾರೆ. ಈ ವೇಳೆ ಕನಿಷ್ಠ ಹತ್ತು ಮಂದಿಯೂ ಇಲ್ಲಿ ನಿಂತಿರುತ್ತಾರೆ.

ರಸ್ತೆಯ ಮತ್ತೊಂದು ಬದಿಯಲ್ಲಿ ಸಚಿವರಾದ ರಹೀಂ ಖಾನ್, ಶಿವರಾಜ ತಂಗಡಗಿ ಅವರ ಸಹಿತ ಹಲವು ಗಣ್ಯರ ಮನೆಗಳಿವೆ. ಅರಮನೆ ಕಡೆ ಹೋಗುವ ಈ ರಸ್ತೆ ಸದಾ ವಾಹನ ದಟ್ಟಣೆಯಿಂದ ಕೂಡಿರುತ್ತದೆ. 'ಕೆಲ ದಿನಗಳ ಹಿಂದೆ ಮಳೆ ಬಂದಾಗ ಗೋಡೆಯ ಒಂದು ಭಾಗ ಕುಸಿದಿದೆ. ಇನ್ನೂ ಮೂರ್ನಾಲ್ಕು ಕಡೆ ಅನಾಹುತ ಆಗಬಹುದು ಎನ್ನುವ ಆತಂಕವಿದೆ. ರಸ್ತೆಯಲ್ಲಿ ಹೆಚ್ಚು ವಾಹನಗಳು ಸಂಚರಿಸುವುದರಿಂದ ನಾವೂ ಜೀವ ಹಿಡಿದುಕೊಂಡೇ ಗೋಡೆ ಪಕ್ಕದ ಪಾದಚಾರಿ ಮಾರ್ಗದಲ್ಲಿ ನಡೆದು ಹೋಗುತ್ತೇವೆ' ಎಂದು ಸ್ಥಳೀಯರೊಬ್ಬರು ತಿಳಿಸಿದರು.

ಅಪಾಯದ ಸ್ಥಳಗಳಿವೆಯೇ?

ಮಳೆಯಿಂದ ಸಮಸ್ಯೆಯಾಗುವ ಪ್ರದೇಶಗಳು, ಶಿಥಿಲವಾದ ಗೋಡೆ, ಕಟ್ಟಡಗಳು ನಿಮ್ಮ ಸಮೀಪದ ಸ್ಥಳಗಳಲ್ಲಿ ಇದ್ದರೆ, ಯಾವುದಾದರೂ ಪ್ರದೇಶದಲ್ಲಿ ಮಳೆಯಿಂದ ಸಮಸ್ಯೆ ಆಗುತ್ತಿರುವ ಮಾಹಿತಿ ಇದ್ದರೆ, ಚಿತ್ರ ಸಹಿತ 'ಪ್ರಜಾವಾಣಿ'ಗೆ ಕಳುಹಿಸಿ ಕೊಡಿ.

ವಾಟ್ಸ್ ಆ್ಯಪ್: 96060 38256

ಬಂಡಿಪುರ ಮುಂದುವರಿದ ಮುಷ್ಕರ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ಪಾವತಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ಬಂಡಿಪುರ ಹುಲಿ ಸಂರಕ್ಷಿತ ಅರಣ್ಯದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಶುಕ್ರವಾರವೂ ಮುಂದುವರಿಯಿತು.

ನಾಲ್ವರು ಮಾತ್ರ ಭಾಗಿ: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ 36 ಆ್ಯಂಟಿ ಪೋಚಿಂಗ್ ಕ್ಯಾಂಪ್‌ಗಳಿದ್ದು 105 ಹೊರಗುತ್ತಿಗೆ ಸಿಬ್ಬಂದಿ ಪೈಕಿ ನಾಲ್ವರು ಮಾತ್ರ ಮುಷ್ಕರದಲ್ಲಿ ಭಾಗಿಯಾಗಿದ್ದು, ಸಮಸ್ಯೆಯಾಗಿಲ್ಲ. ಹೊರಗುತ್ತಿಗೆ ಸಿಬ್ಬಂದಿಗೆ ಕಾಲಕಾಲಕ್ಕೆ ವೇತನ, ಪಿಎಫ್, ಸಂಕಷ್ಟ ಪರಿಹಾರ ಭತ್ಯೆ ಸಹಿತ ಅಗತ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ' ಎಂದು ಎಂ.ಎಂ.ಹಿಲ್ಸ್ ಡಿಸಿಎಫ್ ಭಾಸ್ಕರ್ ತಿಳಿಸಿದರು.

10 ತಿಂಗಳಲ್ಲಿ 23 ಲಕ್ಷ ಆಸ್ತಿಗಳಿಗೆ ಇ–ಖಾತಾ ಸೃಜನೆ: ಡಿಕೆಶಿ

ಮೇ 16 ರಿಂದ ಇ–ಖಾತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಾಲಿಕೆಗಳ ವ್ಯಾಪ್ತಿಯಲ್ಲಿ ಈವರೆಗೆ 23 ಲಕ್ಷಕ್ಕೂ ಹೆಚ್ಚು ಆಸ್ತಿಗಳಿಗೆ ಇ–ಖಾತಾ ನೀಡಲಾಗಿದ್ದು, ಮೇ 16 ರಿಂದ ಪ್ರತಿ ಶನಿವಾರ 'ನಮ್ಮ ಇ–ಖಾತಾ' ಅಭಿಯಾನ ನಡೆಸಲಾಗುತ್ತದೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜನರಿಗೆ ಭೂ–ಗ್ಯಾರಂಟಿ ಒದಗಿಸಲು ಇ–ಖಾತಾ ಕಾರ್ಯಕ್ರಮ ಆಯೋಜಿಸಲಾಗಿತ್ತು. 10 ತಿಂಗಳಲ್ಲಿ 23 ಲಕ್ಷ ಆಸ್ತಿಗಳಿಗೆ ಇ–ಖಾತಾ ಸೃಜಿಸಲಾಗಿದೆ. ಅವುಗಳನ್ನು ಆನ್‌ಲೈನ್ ಮುಖೇನ ಮಾಲೀಕರ ಮೊಬೈಲ್‌ಗಳಿಗೆ ವಿತರಿಸಲಾಗಿದೆ. ನಮ್ಮ ಈ ಕಾರ್ಯಕ್ರಮವನ್ನು ಮೆಚ್ಚಿಕೊಂಡು ಕೇಂದ್ರ ಸರ್ಕಾರದ ಇ–ಆಡಳಿತ ಸಚಿವಾಲಯವು 'ಸ್ವರ್ಣ ಪುರಸ್ಕಾರ' ನೀಡಿದೆ' ಎಂದರು.

'ನಮ್ಮ ಇ–ಖಾತಾದಲ್ಲಿ ಆಸ್ತಿಯ ವಿವರ, ನಕ್ಷೆ, ರೇಖಾಂಶ–ಅಕ್ಷಾಂಶ ವಿವರ, ಚಿತ್ರ ಎಲ್ಲವೂ ಇರಲಿದ್ದು, ವಂಚನೆಗೆ ಮತ್ತು ನಕಲಿಗೆ ಅವಕಾಶವಿಲ್ಲದಂತೆ ಅದನ್ನು ರೂಪಿಸಲಾಗಿದೆ. ಇನ್ನೂ ಹಲವು ಆಸ್ತಿಗಳಿಗೆ ಇ–ಖಾತಾ ಸೃಜಿಸಬೇಕಾಗಿದೆ. ಜನಗಣತಿಯ ಭಾಗವಾಗಿ ನಡೆಯುತ್ತಿರುವ ಮನೆಗಣತಿ ಕಾರ್ಯದಲ್ಲಿ ಪಾಲಿಕೆ ಸಿಬ್ಬಂದಿ ಭಾಗಿಯಾಗಿರುವ ಕಾರಣ, 'ನಮ್ಮ ಇ–ಖಾತಾ' ಅಭಿಯಾನ ಆರಂಭಿಸಲು ಸಾಧ್ಯವಾಗಿಲ್ಲ. ಮೇ 15ಕ್ಕೆ ಮನೆ ಗಣತಿ ಕಾರ್ಯ ಪೂರ್ಣಗೊಳ್ಳಲಿದೆ. ಮೇ 16ರಿಂದ ಅಭಿಯಾನ ಆರಂಭಿಸುತ್ತಿದ್ದೇವೆ' ಎಂದು ಮಾಹಿತಿ ನೀಡಿದರು.

'ಪಾಲಿಕೆ ಕಚೇರಿಗಳಲ್ಲೇ ಅಭಿಯಾನ ನಡೆಸಿದರೆ ಜನದಟ್ಟಣೆಯಾಗುತ್ತದೆ. ಹೀಗಾಗಿ ಖಾಸಗಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿ ವಿಶೇಷ ಕೇಂದ್ರಗಳನ್ನು ತೆರೆಯಲಾಗುತ್ತದೆ. ಐದೂ ಪಾಲಿಕೆಗಳ ವ್ಯಾಪ್ತಿಯಲ್ಲಿ ಇಂತಹ ಒಟ್ಟು 50 ಓಪನ್ ಹೌಸ್ ಕೌಂಟರ್ ತೆರೆಯಲಾಗುವುದು' ಎಂದರು.

7,000 ಎ ಖಾತಾ: 'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತಿಸಿಕೊಳ್ಳುವ ಅಭಿಯಾನದ ಅಡಿ ಅರ್ಜಿ ಸಲ್ಲಿಸಿದ್ದವರ ಪೈಕಿ, 7,000 ಅರ್ಜಿಗಳ ಪ್ರಕ್ರಿಯೆ ಮುಗಿದಿದೆ. ಅವರೆಲ್ಲಾ ಹಣ ಕಟ್ಟಿದರೆ 'ಎ' ಖಾತಾ ಸಿಗಲಿದೆ. ಇದರಿಂದ ₹300 ಕೋಟಿ ಆದಾಯ ಬರುವ ನಿರೀಕ್ಷೆ ಇದೆ. ದಾಖಲೆಗಳು ಸರಿ ಇಲ್ಲದವರು ಈ ಕಾರ್ಯಕ್ರಮದ ವಿರುದ್ಧ ಮಾತನಾಡುತ್ತಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಖಾತಾ ಪರಿವರ್ತನೆಗೆ ವಿಪರೀತ ಶುಲ್ಕ ವಿಧಿಸಲಾಗುತ್ತಿದೆ ಎಂಬ ಆರೋಪವಿದೆ ಎಂದು ಸುದ್ದಿಗಾರರು ಪ್ರಸ್ತಾಪಿಸಿದಾಗ, 'ಎಲ್ಲವನ್ನೂ ಉಚಿತವಾಗಿ ನೀಡಲು ಸಾಧ್ಯವಿಲ್ಲ. ಆಸ್ತಿ ಮೌಲ್ಯ ಹೆಚ್ಚಾಗಿರುತ್ತದೆ ಅಲ್ಲವೇ? ಎಸ್.ಬಂಗಾರಪ್ಪ ಅವರ ಕಾಲದಲ್ಲಿ 50/80 ಅಡಿ ಅಳತೆಯ ನಿವೇಶನವನ್ನು ₹99 ಸಾವಿರಕ್ಕೆ ಖರೀದಿಸಿದ್ದೆ. ಈಗ ಅದರ ಮೌಲ್ಯ ₹8 ಕೋಟಿಯಿಂದ ₹9 ಕೋಟಿಯಷ್ಟಾಗಿದೆ. ಕೋರಮಂಗಲದಲ್ಲಿ ಈ ಹಿಂದೆ ಹೌಸಿಂಗ್ ಬೋರ್ಡ್ ವತಿಯಿಂದ ₹600ಕ್ಕೆ ಮನೆ ಕಟ್ಟಿಕೊಡಲಾಗಿತ್ತು. ಅದೇ ಬೆಲೆಗೆ ಈಗ ಮಾಡಿಕೊಡಲಾಗುತ್ತದೆಯೇ' ಎಂದು ಪ್ರತಿಪಾದಿಸಿದರು.

'ಬಿಡದಿ ಟೌನ್‌ಶಿಪ್ ಯೋಜನೆಯಲ್ಲಿ ರೈತರು ಪರಿಹಾರ ಭೂಮಿ ಕೇಳಿದಾಗ, ಎಚ್.ಡಿ.ಕುಮಾರಸ್ವಾಮಿ ಅವರು 8,000 ಚದರ ಅಡಿ ನೀಡುತ್ತೇನೆ ಎಂದಿದ್ದರು. ನಾವೀಗ ಒಂದು ಎಕರೆ ಕೃಷಿ ಜಮೀನಿಗೆ ಪರಿಹಾರವಾಗಿ 9,400 ಚದರ ಅಡಿ ನೀಡುತ್ತಿದ್ದೇವೆ. ರೈತರು ಈಗ ಭೂಮಿ ಉಳಿಸಿಕೊಳ್ಳಲು ಒತ್ತು ನೀಡುತ್ತಾರೆ. ನಾನೂ ಅದನ್ನೇ ಹೇಳುತ್ತೇನೆ. ಮಧ್ಯವರ್ತಿಗಳ ಜಾಲಕ್ಕೆ ಸಿಲುಕಿ, ಜಮೀನನ್ನು ಮಾರಾಟ ಮಾಡಬೇಡಿ' ಎಂದು ಹೇಳಿದರು.

'ನಮ್ಮ ಟೌನ್‌ಶಿಪ್ ಯೋಜನೆ ವಿರುದ್ಧ ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಕೂತು ಮಾತನಾಡುತ್ತಾರೆ. ಹೆಚ್ಚಿನ ಪರಿಹಾರಕ್ಕೆ ಅವರು ತಮ್ಮ ಭೂಮಿಯನ್ನು ನೀಡಲಿ. ಎಷ್ಟಕ್ಕೆ ಖರೀದಿಸಿದರು ಮತ್ತು ಈಗ ಎಷ್ಟು ಬೆಲೆಯಾಗಿದೆ ಎಂಬುದು ಅವರಿಗೂ ಗೊತ್ತಿದೆ. ಅವರಿಗೆ ಲಾಟರಿ ಹೊಡೆದಿದೆ' ಎಂದು ಪ್ರಶ್ನೆಗೆ ಉತ್ತರಿಸಿದರು.

ನಗರದ ವಿವಿಧೆಡೆ 404 ಮರ ಕಟಾವು

ಪೊಲೀಸ್ ಆಯುಕ್ತರಿಂದ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿರುವ ಹಾಗೂ ಶಿಥಿಲಾವಸ್ಥೆಯಲ್ಲಿರುವ 404 ಮರಗಳನ್ನು ಕಟಾವು ಮಾಡಬೇಕು ಎಂದು ಸಂಚಾರ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಅವರು ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಸಂಚಾರ ಪೊಲೀಸ್ ಠಾಣೆ, ನಗರ ಪಾಲಿಕೆ, ರಸ್ತೆಯ ಹೆಸರಿನ ಜೊತೆಗೆ ಮರವಿರುವ ಅಕ್ಷಾಂಶ, ರೇಖಾಂಶವನ್ನು ನಮೂದಿಸಿ, 404 ಮರಗಳ ಚಿತ್ರದೊಂದಿಗೆ ವರದಿಯನ್ನು ಪತ್ರದೊಂದಿಗೆ ಸಲ್ಲಿಸಲಾಗಿದೆ.

ಮಳೆಯ ಸಂದರ್ಭದಲ್ಲಿ ಉಂಟಾಗುವ ಗಾಳಿಯಿಂದ ನಗರದ ಹಲವು ಭಾಗಗಳಲ್ಲಿ ತುಂಬಾ ಹಳೆಯ ಮರಗಳು, ಕೊಂಬೆಗಳು ಮುರಿದು ರಸ್ತೆಗಳ ಮೇಲೆ ಬಿದ್ದು, ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿವೆ. ಅಲ್ಲದೆ, ಸಾರ್ವಜನಿಕ ಆಸ್ತಿಪಾಸ್ತಿ, ಜೀವಕ್ಕೂ ಹಾನಿಯುಂಟಾಗುತ್ತಿವೆ. ಏಪ್ರಿಲ್ 29ರಂದು ಬಿದ್ದ ಮಳೆಯಿಂದಾದ ಸಮಸ್ಯೆಗಳೇ ಇದಕ್ಕೆ ಸಾಕ್ಷಿಯಾಗಿದ್ದು, ನಾಗರಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಮರದ ವಿವರಗಳನ್ನು ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾಗುವ ಸಂಭವವಿರುವುದರಿಂದ, ಈ ಮರಗಳನ್ನು ಕಟಾವು ಮಾಡಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ಹಲಸೂರು, ಶಿವಾಜಿನಗರ, ಜೀವನಬಿಮಾನಗರ, ಪುಲಕೇಶಿನಗರ, ಬಾಣಸವಾಡಿ, ಕೆ.ಆರ್.ಪುರ, ಎಚ್‌ಎಎಲ್ ವಿಮಾನ ನಿಲ್ದಾಣ, ಮಹದೇವಪುರ, ಹೆಬ್ಬಾಳ, ಯಲಹಂಕ, ಹೆಣ್ಣೂರು, ಆರ್.ಟಿ. ನಗರ, ಪೀಣ್ಯ, ರಾಜಾಜಿನಗರ, ಜಾಲಹಳ್ಳಿ, ಚಿಕ್ಕಬಾಣಾವರ, ಯಶವಂತಪುರ, ಮಲ್ಲೇಶ್ವರ, ಆಡುಗೋಡಿ, ಮಡಿವಾಳ, ಹುಳಿಮಾವು, ಮೈಕೊ ಲೇಔಟ್, ಎಚ್‌ಎಸ್‌ಆರ್, ವಿವಿ ಪುರ, ಜಯನಗರ, ಸಿಟಿ ಮಾರುಕಟ್ಟೆ, ಬ್ಯಾಟರಾಯನಪುರ, ಕೆಂಗೇರಿ, ಉಪ್ಪಾರಪೇಟೆ, ಚಾಮರಾಜಪೇಟೆ, ಜ್ಞಾನಭಾರತಿ, ಮಾಗಡಿ ರಸ್ತೆ, ವಿಜಯನಗರ, ವಿಲ್ಸನ್ ಗಾರ್ಡನ್, ಹೈಗ್ರೌಂಡ್ಸ್, ಅಶೋಕನಗರ, ಹಲಸೂರು ಗೇಟ್, ಕಬ್ಬನ್ ಪಾರ್ಕ್, ಶೇಷಾದ್ರಿಪುರ, ಸದಾಶಿವನಗರ, ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಟಾವು ಮಾಡಬೇಕಾದ ಮರಗಳ ಮಾಹಿತಿ ನೀಡಲಾಗಿದೆ.

ಯಾವ ಪಾಲಿಕೆ ವ್ಯಾಪ್ತಿಯಲ್ಲಿ ಮರ ಕಟಾವು?

ನಗರ ಪಾಲಿಕೆ	ಮರ
ಕೇಂದ್ರ	110
ಪೂರ್ವ	54
ಪಶ್ಚಿಮ	90
ದಕ್ಷಿಣ	47
ಉತ್ತರ	103

'ಅಹಿಂದ ಸಮುದಾಯವೇ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದಲ್ಲಿ ಅಹಿಂದ ಸಮುದಾಯಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ರಾಜಕೀಯವಾಗಿ ಗುರಿ ಮಾಡುತ್ತಿರುವುದು ಖಂಡನೀಯ' ಎಂದು ರಾಷ್ಟ್ರೀಯ ಅಹಿಂದ ಸಂಘಟನೆ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ಎಚ್. ಮೋಹನ್‌ಕುಮಾರ್, 'ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲು ಅಹಿಂದ ಸಮುದಾಯದ ನಿರ್ಣಾಯಕ ಪಾತ್ರ ಇದೆ' ಎಂದು ತಿಳಿಸಿದರು.

'ಸರ್ಕಾರ ರಚನೆಯಾದ ನಂತರ ಈ ಸಮುದಾಯಗಳ ನಾಯಕತ್ವವನ್ನು ಕಡೆಗಣಿಸಲಾಗಿದೆ. ಯಾವುದೇ ನೋಟಿಸ್ ನೀಡದೇ ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹಮದ್ ಅವರ ವಿರುದ್ಧ ಕಾಂಗ್ರೆಸ್ ಕೈಗೊಂಡಿರುವ ಶಿಸ್ತು ಕ್ರಮ ಖಂಡನೀಯ. ಶಾಸಕ ಕೆ.ಎನ್. ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಿರುವುದು ಸರಿಯಲ್ಲ. ಈಗ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಗುರಿ ಮಾಡಲಾಗುತ್ತಿದೆ' ಎಂದು ದೂರಿದರು.

'ಅಹಿಂದ ನಾಯಕತ್ವವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿದೆ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶಿಸಿ ಸಮುದಾಯದ ನಾಯಕರಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಸಂಘಟನೆ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಬಿ. ಬಸವಯ್ಯ, ಮಲ್ಲೇಶ, ಸುಜಾತಾ, ರೇಷ್ಮಾ, ಕವಿತಾ, ಮಹಮ್ಮದ್ ಅಲಿ, ತಾಹಿರ ಪಾಷ ಇದ್ದರು.

ಎಂಜಿನಿಯರ್ ನಾಗರಾಜ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿತದ ಪ್ರಕರಣದಲ್ಲಿ ಆರೋಗ್ಯ ಇಲಾಖೆಯು ಕಾರ್ಯಪಾಲಕ ಎಂಜಿನಿಯರ್ ನಾಗರಾಜ್ ಎಂ.ಬಿ. ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದೆ.

ಏ.29ರಂದು ನಗರದಲ್ಲಿ ಸುರಿದ ಧಾರಾಕಾರ ಮಳೆಗೆ ಗೋಡೆ ಕುಸಿದು ಬಾಲಕಿ ಸೇರಿ ಏಳು ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಈ ಗೋಡೆಯನ್ನು ಆರೋಗ್ಯ ಇಲಾಖೆಯಿಂದ ನಿರ್ಮಿಸಲಾಗಿದೆ. ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಬೌರಿಂಗ್ ಆಸ್ಪತ್ರೆಯಲ್ಲಿ 500 ಹಾಸಿಗೆಗಳ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಈ ಕಾಮಗಾರಿಯ ಉಸ್ತುವಾರಿಯನ್ನು ಕಾರ್ಯಪಾಲಕ ಎಂಜಿನಿಯರ್ ನಾಗರಾಜ್ ಎಂ.ಬಿ. ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶ್ರೀನಿವಾಸ್ ವಹಿಸಿಕೊಂಡಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಎಂಜಿನಿಯರ್‌ಗಳು ಆರೋಗ್ಯ ಇಲಾಖೆಯ ಎಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಟ್ಟಡಗಳು ಮತ್ತು ಕಾಂಪೌಂಡ್‌ಗಳ ಸುಸ್ಥಿರತೆ, ಸುಭದ್ರತೆ, ಸಾಮರ್ಥ್ಯ ಹಾಗೂ ನ್ಯೂನ್ಯತೆಯನ್ನು ಮೇಲ್ವಿಚಾರಣೆ ಮಾಡುವುದು ಎಂಜಿನಿಯರ್‌ಗಳ ಕರ್ತವ್ಯವಾಗಿದೆ. ಈ ಕರ್ತವ್ಯದಲ್ಲಿ ಲೋಪ ಎಸಗಿರುವುದು ಕಂಡುಬಂದಿರುವುದರಿಂದ ನಾಗರಾಜ್ ಅವರ ವಿರುದ್ಧ ಇಲಾಖೆ ವಿಚಾರಣೆಯನ್ನು ಬಾಕಿ ಇರಿಸಿ, ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಜಂಕ್ಷನ್‌ಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿ; 376 ಮರ ಧರೆಗೆ

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಶುಕ್ರವಾರ ಸಂಜೆ ಬಿರುಗಾಳಿಯೊಂದಿಗೆ ಮಳೆಯಾಯಿತು. ಹಲವು ಪ್ರದೇಶಗಳಲ್ಲಿ ಮಧ್ಯರಾತ್ರಿಯವರೆಗೂ ತುಂತುರು ಮಳೆಯಾಯಿತು.

ಬನ್ನೇರುಘಟ್ಟ ರಸ್ತೆ ಸಾಗರ ಜಂಕ್ಷನ್, ಆರ್‌ಎಂ ರಸ್ತೆಯಿಂದ ಹಳೆಯ ವಿಮಾನ ನಿಲ್ದಾಣ, ಕೋರಮಂಗಲದ ಎನ್‌ಜಿವಿ ರಸ್ತೆ, ಜೆ.ಪಿ ನಗರದ 24ನೇ ಮುಖ್ಯರಸ್ತೆ, ಮಹಾರಾಣಿ ಕಾಲೇಜಿನ ಅಂಡರ್‌ಪಾಸ್, ಆರ್.ವಿ ಜಂಕ್ಷನ್‌ನಿಂದ ಲಾಲ್‌ಬಾಗ್, ಅರವಿಂದ ಜಂಕ್ಷನ್‌ನಿಂದ ಶಾಲಿನಿ ಜಂಕ್ಷನ್‌ಗಳಲ್ಲಿ ನೀರು ನಿಂತು ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಜಯನಗರದ ಕಾರ್ಮೆಲ್ ಕಾನ್ವೆಂಟ್ ಬಸ್‌ನಿಲ್ದಾಣದ ಬಳಿ ಮರ ಬಿದ್ದು ತಿಲಕ್‌ನಗರದ ಕಡೆಗಿನ ಸಂಚಾರ ಸ್ಥಗಿತಗೊಂಡಿತ್ತು.

ವನ್ನಾರಪೇಟೆಯಲ್ಲಿ 3.1 ಸೆಂ.ಮೀ, ಪಟ್ಟಾಭಿರಾಮನಗರದಲ್ಲಿ 2.8 ಸೆಂ.ಮೀ, ದೊರೆಸಾನಿಪಾಳ್ಯದಲ್ಲಿ 2.75 ಸೆಂ.ಮೀ, ಕೋರಮಂಗಲ, ದೊಡ್ಡಬಿದಿರೆಕಲ್ಲು, ಕೋಣನಕುಂಟೆಯಲ್ಲಿ ತಲಾ 2 ಸೆಂ.ಮೀ, ಹೆಮ್ಮಿಗೆಪುರ, ವಿಶ್ವೇಶ್ವರಪುರ, ವಿದ್ಯಾಪೀಠ, ಅರಕೆರೆಯಲ್ಲಿ ತಲಾ ಒಂದು ಸೆಂ.ಮೀ ಮಳೆಯಾಗಿದೆ.

ಹೇರೋಹಳ್ಳಿ, ಮಹಾಲಕ್ಷ್ಮಿ ಲೇಔಟ್, ಗಂಗಾನಗರ, ಮನೋರಾಯನಪಾಳ್ಯ, ಕುಶಾಲನಗರ, ಸುಬ್ರಹ್ಮಣ್ಯನಗರ, ಲಕ್ಷ್ಮೀದೇವಿನಗರ, ಕಮ್ಮನಹಳ್ಳಿ, ರಾಮಸ್ವಾಮಿಪಾಳ್ಯ, ಕಾವಲ್‌ಭೈರಸಂದ್ರ ಸುತ್ತಮುತ್ತಲಿನ ಪ್ರದೇಶದಲ್ಲಿ ತುಂತುರು ಮಳೆಯಾಯಿತು.

ಏಪ್ರಿಲ್ 29ರಿಂದ ಮೇ 1ರ ಸಂಜೆಯವರೆಗೆ ನಗರದಲ್ಲಿ ಒಟ್ಟು 376 ಮರಗಳು ಧರೆಗುರುಳಿದ್ದು, 318 ಮರಗಳನ್ನು ತೆರವು ಮಾಡಲಾಗಿದೆ. 981 ರೆಂಬೆ–ಕೊಂಬೆಗಳು ಬಿದ್ದಿದ್ದು, ಅದರಲ್ಲಿ 799 ರೆಂಬೆ–ಕೊಂಬೆಗಳನ್ನು ತೆರವುಗೊಳಿಸಲಾಗಿದೆ ಎಂದು ಜಿಬಿಎ ತಿಳಿಸಿದೆ.



ವಿಠ್ಠಲ ಮಲ್ಯ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸವಾರರು ಪರದಾಡಿದರು ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್.ಜಿ.

ನಗರ ಪಾಲಿಕೆ	ಮರ ಧರೆಗೆ	ತೆರವು	ಬಿದ್ದ ಕೊಂಬೆ	ತೆರವು
ಕೇಂದ್ರ	121	97	204	159
ಪೂರ್ವ	6	6	8	8
ಪಶ್ಚಿಮ	152	124	481	367
ದಕ್ಷಿಣ	62	56	186	171
ಉತ್ತರ	35	35	102	94
ಒಟ್ಟು	376	318	981	799

'ಮುಖ್ಯಮಂತ್ರಿ ನೇರ ಕಾರಣ'

'ಬೆಂಗಳೂರಿನಲ್ಲಿ 15 ದಿನಕ್ಕೊಮ್ಮೆ ನಗರ ಪ್ರದಕ್ಷಿಣೆ ಮಾಡುತ್ತೇನೆ ಎಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೂರು ತಿಂಗಳಿಗೊಮ್ಮೆಯೂ ನಗರ ಪ್ರದಕ್ಷಿಣೆ ಮಾಡಲಿಲ್ಲ. ಮಳೆಹಾನಿಗೆ ಯಾವುದೇ ಸಿದ್ಧತೆ ಮಾಡಿಕೊಳ್ಳದ ಕಾರಣ ಏಳು ಜೀವಗಳ ಬಲಿಯಾಗಿದೆ. ಒಂದು ತಿಂಗಳ ಮುನ್ನ ಸಭೆ ನಡೆಸಿ ವರದಿ ಪಡೆದು ದುರಸ್ತಿ ಮಾಡಿಸಬೇಕಿತ್ತು. ಆಸ್ಪತ್ರೆ ಮುಖ್ಯಸ್ಥರು ರೋಗಿಗಳಿಗೆ ಹೇಗೆ ಚಿಕಿತ್ಸೆ ನೀಡಬೇಕೆಂದು ನೋಡುತ್ತಾರೆಯೋ ಹೊರತು, ಕಾಂಪೌಂಡ್ ದುರಸ್ತಿ ಮಾಡುವುದು ಅವರ ಜವಾಬ್ದಾರಿಯಲ್ಲ. ಈ ಸಾವುಗಳಿಗೆ ಮುಖ್ಯಮಂತ್ರಿಯೇ ನೇರ ಕಾರಣ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ದೇಸಿ ಉತ್ಪನ್ನಗಳ 'ಮಿನಿ ಭಾರತ' ಅನಾವರಣ

ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್ ಮೇಳ ಆರಂಭ 'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್' ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ನಾನಾ ರಾಜ್ಯಗಳ ಕೈಮಗ್ಗದ ಉಡುಪುಗಳು, ಹಸ್ತ ಶಿಲ್ಪ, ಪಾರಂಪರಿಕ ಕಲೆ, ಅಲಂಕಾರಿಕ ಆಭರಣ, ಮಕ್ಕಳ ಆಟಿಕೆಗಳು, ಸಾಂಪ್ರದಾಯಿಕ ಪೀಠೋಪಕರಣ ಸೇರಿ ದೇಸಿ ಉತ್ಪನ್ನಗಳನ್ನು ಒಂದೇ ವೇದಿಕೆಯಲ್ಲಿ ತಂದಿರುವ ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್ (ಟಿಐಎಚ್) ಮೇಳ ನಗರದಲ್ಲಿ ಆರಂಭಗೊಂಡಿದೆ.

ಜಯಮಹಲ್‌ನ ಪ್ಯಾಲೇಸ್ ಹೋಟೆಲ್ ಆವರಣದಲ್ಲಿ ಹತ್ತು ದಿನ (ಮೇ 10ರವರೆಗೆ) ನಡೆಯಲಿರುವ ಈ ಮೇಳ ಉತ್ತರ ಹಾಗೂ ದಕ್ಷಿಣ ಭಾರತದ 150ಕ್ಕೂ ಹೆಚ್ಚು ಕಲಾವಿದರ ಪ್ರತಿಭೆ ಒಳಗೊಂಡ 'ಮಿನಿ ಭಾರತ'ದಂತೆಯೇ ಇದೆ. 'ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಈ ಮೇಳ ನಡೆಯುತ್ತಿದೆ.

ಕಾಶ್ಮೀರದ ನವಿರಾದ ಶಾಲು, ಡ್ರೈಫ್ರೂಟ್ಸ್, ಹಾಗೂ ಇತರೆ ಉತ್ಪನ್ನಗಳು, ರಾಜಸ್ಥಾನದ ಚರ್ಮದ ಚಪ್ಪಲಿ, ಉಡುಪುಗಳು, ರುಚಿಕರ ಉಪ್ಪಿನಕಾಯಿ, ಪಶ್ಚಿಮ ಬಂಗಾಳದ ಸಮುದ್ರ ಚಿಪ್ಪು ಹಾಗೂ ಮುತ್ತಿನ ಆಭರಣಗಳು, ಉತ್ತರ ಪ್ರದೇಶ, ಮಧ್ಯ ಪ್ರದೇಶದ ಅಲಂಕಾರಿಕ ವಸ್ತುಗಳು, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ವೈಭವದ ಸೀರೆ, ಕಲ್ಲಿನ ಕಲಾಕೃತಿಗಳು, ಕರ್ನಾಟಕದ ಸೀರೆ, ಕಲೆ ಹಾಗೂ ಚನ್ನಪಟ್ಟಣದ ಚಂದದ ಬೊಂಬೆಗಳು ಕಲಾಪ್ರಿಯರನ್ನು ಆಕರ್ಷಿಸುತ್ತಿವೆ.

ಬಗೆಬಗೆಯ ಉಡುಪು

ಬಿಹಾರದ ಬಗಲ್‌ಪುರಿ ಸೀರೆ, ಒಡಿಶಾದ ಸಂಬಾಲ್ಪುರ್ ಸೀರೆ, ಪಶ್ಚಿಮ ಬಂಗಾಲದ ಕೈಮಗ್ಗ ಸೀರೆ, ಜಾಮದಾನಿ ಸೀರೆ, ತೆಲಂಗಾಣದ ಇಕ್ಕತ್ ಸೀರೆ, ತಮಿಳುನಾಡು ಕಾಂಚೀಪುರಂ ಸೀರೆಗಳು ಅಲ್ಲಿನ ಕರಕುಶಲಕರ್ಮಿಗಳ ಕೈಯಲ್ಲಿ ವಿಭಿನ್ನ ಶೈಲಿಯೊಂದಿಗೆ ರೂಪುಗೊಂಡಿವೆ. ಹಲವು ಬಣ್ಣ, ಅಲಂಕಾರದ ಸೀರೆ ಆಯ್ಕೆಗಳು ಇಲ್ಲಿವೆ. ಇದಲ್ಲದೇ ಹೊಸ ತಲೆಮಾರು ಇಷ್ಟಪಡುವ ಉಡುಪುಗಳೂ ಇವೆ.

ವಸ್ತು ಪ್ರದರ್ಶನದಲ್ಲಿ ರಾಜಸ್ಥಾನದ ಕಲಾವಿದರು ನೃತ್ಯ ಪ್ರಸ್ತುತಪಡಿಸಿದರು

ಪ್ರಜಾವಾಣಿ ಚಿತ್ರಗಳು

> ನಾನಾ ರಾಜ್ಯಗಳ ಕರಕುಶಲಕರ್ಮಿಗಳು, ಕಲಾವಿದರು ತಮ್ಮ ವೈವಿಧ್ಯಮಯ ವಸ್ತುಗಳನ್ನು ಪ್ರದರ್ಶನಕ್ಕೆ ಇರಿಸಿದ್ದಾರೆ
>
> **ನಾಗರಾಜ ಹುಂಡೇಕರ್**, ಸಂಸ್ಥಾಪಕ, ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್

> ರಾಜಸ್ಥಾನದ ಬೀಕಾನೇರ್‌ನಲ್ಲಿ ಸಾಂಪ್ರದಾಯಿಕವಾಗಿ ಉಪ್ಪಿನಕಾಯಿ ತಯಾರಿಸಿ ಅಲ್ಲಿನ ರುಚಿಯನ್ನು ಬೆಂಗಳೂರಿಗರಿಗೂ ಉಣಬಡಿಸುತ್ತಿದ್ದೇವೆ
>
> **ಅಂಜಲಿ,** ಯುವ ಉದ್ಯಮಿ, ರಾಜಸ್ಥಾನ

ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೂ ಪ್ರದರ್ಶನ ಇರಲಿದೆ. ಪ್ರತಿ ನಿತ್ಯ ರಾಜಸ್ಥಾನದ ಗಾಯಕ ಉಸ್ತಾದ್ ಲತೀಫ್ ಖಾನ್ ಮತ್ತು ತಂಡದವರಿಂದ ಸಂಗೀತ ರಸದೌತಣ ಇರಲಿದೆ

ಕರ್ನಾಟಕದ ವಿಶೇಷವೂ ಉಂಟು

ಮೇಳದಲ್ಲಿ 25ಕ್ಕೂ ಹೆಚ್ಚು ರಾಜ್ಯಗಳ ಜೊತೆಗೆ ಕರ್ನಾಟಕದ ಲೋಕವೂ ಅನಾವರಣಗೊಂಡಿದೆ. ಇಳಕಲ್‌ನ ಸಾಂಪ್ರದಾಯಿಕ ಸೀರೆಗಳು ಇಲ್ಲಿನ ಆಕರ್ಷಣೆಯಾಗಿವೆ. ಹಲವಾರು ವರ್ಷಗಳಿಂದ ಇಳಕಲ್ ಸೀರೆಗಳನ್ನು ತಯಾರಿಸುವ ಕುಟುಂಬಗಳು ಭಾಗಿಯಾಗಿವೆ.

ಸುರಪುರದ ವಿಶೇಷ ಎನ್ನಿಸುವ ಸುಣ್ಣದ ಕಲೆಯಿಂದ ತಯಾರಿಸಿದ ಹಲವಾರು ಕಲಾಕೃತಿಗಳು ಇಲ್ಲಿ ಉಂಟು. ಕರ್ನಾಟಕದ ಟೆರಾಕೋಟ ಆಭರಣ, ಲಂಬಾಣಿ ಆಭರಣಗಳು ಕೂಡ ಗಮನ ಸೆಳೆಯುತ್ತವೆ.

ಚನ್ನಪಟ್ಟಣದ ಆಟಿಕೆಗಳ ಲೋಕವೇ ತೆರೆದುಕೊಂಡಿದೆ. ಕೆಲ ವರ್ಷದಿಂದ ಬೊಂಬೆ ತಯಾರಿಸಿ ಮಾರಾಟ ಮಾಡುವ ಗೌತಮ್ ಅವರು ಹೊಸ ಬಗೆಯ, ಮಕ್ಕಳ ಆಟ ಮಾತ್ರವಲ್ಲದೇ ಬೌದ್ಧಿಕ ಕಸರತ್ತು ನೀಡುವ ಆಟಿಕೆಗಳನ್ನು ರೂಪಿಸಿದ್ದಾರೆ. ಕಾಳು ತಿನ್ನುವ ಕೋಳಿ, ಮೊಲ, ಫ್ರಿಡ್ಜ್‌ಗೆ ಅಳವಡಿಸಬಲ್ಲ ಮ್ಯಾಗ್ನೆಟ್ ಕಲಾಕೃತಿ ಕೂಡ ಇವೆ.

ವಸ್ತು ಪ್ರದರ್ಶನದಲ್ಲಿ ಗಮನ ಸೆಳೆದ ಆಂಧ್ರಪ್ರದೇಶದ ಕರಕುಶಲ ವಸ್ತುಗಳು

ಸುದ್ದಿ 2 ನಿಮಿಷ

'ಮುಸ್ಲಿಮರನ್ನು ತಣಿಸಲು ಅನುದಾನ'

ಬೆಂಗಳೂರು: ದಾವಣಗೆರೆ ಉಪಚುನಾವಣೆ ಬಳಿಕ ಮುಸ್ಲಿಮರು ತಿರುಗಿಬಿದ್ದ ಕಾರಣ ಅವರನ್ನು ಸಮಾಧಾನಪಡಿಸಲು ₹600 ಕೋಟಿ ಅನುದಾನ ನೀಡಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿ, ತಮ್ಮ ಮತ ಬ್ಯಾಂಕ್ ಕೈತಪ್ಪಿ ಹೋಗಬಾರದು ಎಂಬ ಕಾರಣಕ್ಕೆ ಈ ತಂತ್ರ ಅನುಸರಿಸಿದ್ದಾರೆ ಎಂದರು. ಸರ್ವರಿಗೂ ಸಮಪಾಲು ಎಂದು ಹೇಳುವ ಕಾಂಗ್ರೆಸ್ ಪಕ್ಷ ಮುಸ್ಲಿಮರಿಗೆ ಮಾತ್ರ ವಿಶೇಷ ಅನುದಾನ ಏಕೆ ನೀಡಬೇಕು? ದಲಿತರು, ಹಿಂದುಳಿದ ವರ್ಗಕ್ಕೂ ನೀಡಬೇಕಿತ್ತಲ್ಲ ಎಂದು ಪ್ರಶ್ನಿಸಿದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್‌ನ ಮೂರನೇ ಬಾಗಿಲಿಗೆ ಶಂಕುಸ್ಥಾಪನೆ ಮಾಡಿದ್ದಾರೆ. ಈ ಮೂಲಕ ಅವರು ಮುಖ್ಯಮಂತ್ರಿ ಆಗುವ ಚರ್ಚೆ ಶುರುವಾಗಿದೆ. ಇದುವರೆಗೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಅಭಿಪ್ರಾಯವಿತ್ತು. ಈಗ ಎಲ್ಲರೂ ಖರ್ಗೆ ಕಡೆಗೆ ತಿರುಗಿ ನೋಡುತ್ತಿದ್ದಾರೆ. ಖರ್ಗೆ ಸಿಎಂ ಆದರೂ ಬಳಿಕ ಜನರು ಗೇಟ್‌ಪಾಸ್ ನೀಡುವುದು ಖಚಿತ' ಎಂದು ವ್ಯಂಗ್ಯವಾಡಿದರು.

'ಹೈಕಮಾಂಡ್ ತಿರಸ್ಕಾರ ಮಾಡಿದ ನಂತರ ಡಿ.ಕೆ.ಶಿವಕುಮಾರ್‌ಗೆ ಬೇರೆ ದಾರಿಯೇ ಇಲ್ಲ. ತಲೆಬಾಗಿ ಅಲ್ಲ, ಮಂಡಿಯೂರಿ ತೆವಳಿಕೊಂಡು ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆಯನ್ನು ಸ್ವೀಕಾರ ಮಾಡಬೇಕಾಗುತ್ತದೆ. ಖರ್ಗೆ ಏನೇನು ಕಿಲಾಡಿ ಆಟ ಆಡುತ್ತಾರೋ ನೋಡೋಣ' ಎಂದರು.



ಇರಾನ್ ಹಾಗೂ ಅಮೆರಿಕದ ನಡುವಿನ ಯುದ್ಧ ಇನ್ನೂ ಸ್ಥಗಿತಗೊಂಡಿಲ್ಲ. ಅಡುಗೆ ಅನಿಲ ಸೇರಿದಂತೆ ತೈಲ ಸಮಸ್ಯೆ ಎಲ್ಲ ದೇಶಗಳಿಗೆ ತಟ್ಟಿದೆ. ಸಹಜವಾಗಿ ಅಡುಗೆ ಅನಿಲದ ಬೆಲೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಪ್ರಧಾನಿ ಮೋದಿ ಬೆಲೆಯನ್ನು ಇಳಿಕೆ ಮಾಡಲು ಕ್ರಮ ವಹಿಸಬಹುದು. ಯುದ್ಧ ನಿಂತ ಕೂಡಲೇ ಈ ಸಮಸ್ಯೆ ನಿವಾರಣೆಯಾಗುವ ವಿಶ್ವಾಸವಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

44 ನವಿಲು ಸಾವು: ಹಕ್ಕಿಜ್ವರ ದೃಢ

ತುಮಕೂರು: ತಾಲ್ಲೂಕಿನ ವಿವಿಧೆಡೆ ಎಚ್5ಎನ್1 (ಹಕ್ಕಿಜ್ವರ) ವೈರಾಣು ಸೋಂಕಿನಿಂದ ನವಿಲುಗಳು ಮೃತಪಟ್ಟಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

ಏಪ್ರಿಲ್ 16ರಿಂದ 21ರವರೆಗೆ ತಾಲ್ಲೂಕಿನ ಊರ್ಡಿಗೆರೆ ಹೋಬಳಿ ಬೊಮ್ಮನಹಳ್ಳಿ, ಕೋಳಿಹಳ್ಳಿ ಹಾಗೂ ಗೂಳೂರು ಹೋಬಳಿ ಬೈರಸಂದ್ರ, ಹುಲ್ಲೇನಹಳ್ಳಿ ಸುತ್ತಮುತ್ತ 44 ನವಿಲು ಮೃತಪಟ್ಟಿದ್ದವು.

ನವಿಲುಗಳ ಮೃತ ದೇಹದ ಮಾದರಿಯನ್ನು ಪರೀಕ್ಷೆಗಾಗಿ ಮಧ್ಯ ಪ್ರದೇಶದ ಭೋಪಾಲ್‌ನಲ್ಲಿರುವ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈಗ ಪ್ರಯೋಗಾಲಯದ ವರದಿ ಬಂದಿದ್ದು, ಹಕ್ಕಿಜ್ವರ ಸೋಂಕಿನಿಂದ ನವಿಲುಗಳು ಮೃತಪಟ್ಟಿರುವುದು ಖಚಿತವಾಗಿದೆ.

ಎರಡು ಹೋಬಳಿ ವ್ಯಾಪ್ತಿಯಲ್ಲಿ 31 ಕೋಳಿ ಅಂಗಡಿ, 10 ಕೋಳಿ ಫಾರಂಗಳಿವೆ. ನವಿಲುಗಳು ಮೃತಪಟ್ಟ ಪ್ರದೇಶದಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ತೀವ್ರ ನಿಗಾ ವಹಿಸಲಾಗಿದೆ. ಈ ಭಾಗದ ಮಾಂಸ ಮಾರಾಟದ ಅಂಗಡಿಗಳನ್ನು ಮುಚ್ಚಿ, ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಕೋಳಿ ಸಾಕಾಣಿಕೆದಾರರಿಗೆ ಜಿಲ್ಲಾ ಆಡಳಿತ ನಿರ್ದೇಶಿಸಿದೆ. 10 ದಿನಗಳಿಂದ ನವಿಲು ಸಾವು ಸಂಭವಿಸಿಲ್ಲ. ತಜ್ಞ ವೈದ್ಯರು ಜಿಲ್ಲಾ ಆಡಳಿತದ ಜತೆಗೆ ಚರ್ಚಿಸಿ, ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕರಿಗೆ ಸನ್ಮಾನ ಮಾಡಲಾಯಿತು

'ದೇಶಕ್ಕೆ ಶ್ರಮಿಕರ ಕೊಡುಗೆ ಅಪಾರ'

ಬೆಂಗಳೂರು: 'ದೇಶ ಅಭಿವೃದ್ಧಿಯ ಪಥದಲ್ಲಿ ಸಾಗಲು ಮಹತ್ವದ ಕೊಡುಗೆ ನೀಡುತ್ತಿರುವ ಶ್ರಮಿಕ ವರ್ಗದ ಕಲ್ಯಾಣಕ್ಕಾಗಿ ಕೇಂದ್ರದ ಬಿಜೆಪಿ ಸರ್ಕಾರವು ಹಲವು ಯೋಜನೆಗಳನ್ನು ರೂಪಿಸಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಾರ್ಮಿಕ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು 29 ಹಳೆಯ ಕಾರ್ಮಿಕ ಕಾನೂನುಗಳನ್ನು ಸರಳೀಕರಿಸಿ 4 ಹೊಸ ಕಾರ್ಮಿಕ ಸಂಹಿತೆಗಳನ್ನು ರೂಪಿಸಿತು. ಇದರಿಂದ ಕಾರ್ಮಿಕರಿಗೆ ಸಾಕಷ್ಟು ಅನುಕೂಲವಾಗಿದೆ. ಎನ್‌ಡಿಎ ಸರ್ಕಾರದ ಈ ನಿರ್ಧಾರ ಮಹತ್ವದಾಗಿದೆ' ಎಂದರು.

'ದೇಶ ಹಾಗೂ ಸಮಾಜಕ್ಕೆ ಶ್ರಮಿಕವರ್ಗದ ಕೊಡುಗೆಯನ್ನು ಎಂದಿಗೂ ಮರೆಯಲಾಗದು. 2047ರ ಹೊತ್ತಿಗೆ ವಿಕಸಿತ ಭಾರತ ಸೃಷ್ಟಿಸುವಲ್ಲಿ ಕಾರ್ಮಿಕರು ಮಹತ್ವದ ಪಾತ್ರ ವಹಿಸಲಿದ್ದಾರೆ. ಹೀಗಾಗಿ ಅವರ ಕಲ್ಯಾಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ' ಎಂದು ಹೇಳಿದರು.

ತಂತ್ರಜ್ಞಾನ ಅಳವಡಿಸಿಕೊಂಡರೆ ಭವಿಷ್ಯ ಭದ್ರ: ನಂಜಾವಧೂತ ಸ್ವಾಮೀಜಿ

ಬೈಕ್ ಮೆಕ್ಯಾನಿಕ್‌ಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೈಕ್ ಮೆಕ್ಯಾನಿಕ್‌ಗಳು ಸಮಾಜದ ನಿರ್ಮಾತೃಗಳಾಗಿದ್ದು, ತಂತ್ರಜ್ಞಾನ ಅಳವಡಿಸಿಕೊಂಡರೆ ಭವಿಷ್ಯ ಇನ್ನಷ್ಟು ಭದ್ರವಾಗಲಿದೆ' ಎಂದು ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಹೇಳಿದರು.

ಕಾರ್ಮಿಕ ದಿನಾಚರಣೆಯ ಅಂಗವಾಗಿ ಕರ್ನಾಟಕ ದ್ವಿಚಕ್ರ ವಾಹನ ವರ್ಕ್‌ಶಾಪ್‌ಗಳ ಮಾಲೀಕರು ಮತ್ತು ತಂತ್ರಜ್ಞರ ಸಂಘವು ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಬೈಕ್ ಮೆಕ್ಯಾನಿಕ್‌ಗಳ ಸಮಾವೇಶದಲ್ಲಿ ಮಾತನಾಡಿದರು.

'ಸಹಸ್ರಾರು ಬೈಕ್ ಮೆಕ್ಯಾನಿಕ್‌ಗಳು ಒಂದೇ ವೇದಿಕೆಯಲ್ಲಿ ಸೇರುವುದು ಮಹತ್ವದ ಸಾಧನೆ. ನಿಮ್ಮ ಕೈಯಲ್ಲಿ ದೇಶದ ಚಾಲನಾ ಶಕ್ತಿ ಇದೆ. ಪ್ರತಿಯೊಂದು ಬೈಕ್ ಓಡಲು ನಿಮ್ಮ ಪರಿಶ್ರಮವೇ ಕಾರಣ. ಸಂಘಟಿತ ಶಕ್ತಿಯ ಮೂಲಕ ನಿಮ್ಮ ಹಕ್ಕುಗಳನ್ನು ಪಡೆದು ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡಬೇಕು' ಎಂದು ಹೇಳಿದರು.

ಬೆಂಗಳೂರಿನಲ್ಲಿ ಅಖಿಲ ಭಾರತ ಬೈಕ್ ಮೆಕ್ಯಾನಿಕ್‌ಗಳ ಸಮಾವೇಶದಲ್ಲಿ ಒಗ್ಗಟ್ಟು ಪ್ರದರ್ಶಿಸಲಾಯಿತು

'ಬೈಕ್ ಮೆಕ್ಯಾನಿಕ್ ಸಮುದಾಯಕ್ಕೆ ಹೊಸ ದಿಕ್ಕು ನೀಡುವಲ್ಲಿ ಈ ಸಮಾವೇಶ ಮಹತ್ವದ ಹೆಜ್ಜೆಯಾಗಿದೆ. ಈ ಸಂದರ್ಭದಲ್ಲಿ ಹೊಸ ತಂತ್ರಜ್ಞಾನ, ಆಧುನಿಕ ಸಾಧನಗಳು ಹಾಗೂ ಬೈಕ್ ಸರ್ವಿಸ್ ಕ್ಷೇತ್ರದ ಕುರಿತು ಚರ್ಚೆಗಳು ನಡೆದವು' ಎಂದು ಸಂಘದ ರಾಜ್ಯಾಧ್ಯಕ್ಷ ಕೆ.ಎಸ್.ಪ್ರಸನ್ನ ಕುಮಾರ್ ಗೌಡ ತಿಳಿಸಿದರು.

ಜಾಮಿಯಾ ಮಸ್ಜಿದ್ ನ ಮಹಮದ್ ಮಕ್ಸೂದ್ ಇಮ್ರಾನ್ ರಶೀದ್, ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಸಂಘದ ಕಾರ್ಯದರ್ಶಿ ಭಾಸ್ಕರ್.ಜಿ.ನಾಯ್ಡು ಮಾತನಾಡಿದರು. ರಾಜ್ಯ ಕಾರ್ಯದರ್ಶಿ ವೆಂಕಟ್ ಶ್ಯಾಮ್, ರಾಜ್ಯ ಸಲಹೆಗಾರ ನಾರಾಯಣ್ ಉಪಸ್ಥಿತರಿದ್ದರು.

ಸಮಾವೇಶದಲ್ಲಿ ವಿವಿಧ ರಾಜ್ಯಗಳಿಂದ 12,500ಕ್ಕೂ ಹೆಚ್ಚು ಬೈಕ್ ಮೆಕ್ಯಾನಿಕ್, ವರ್ಕ್‌ಶಾಪ್ ಮಾಲೀಕರು ಉಪಸ್ಥಿತರಿದ್ದರು.

'ಅನಾರೋಗ್ಯಕ್ಕೆ ಜೀವನಶೈಲಿ ಕಾರಣ'

ಬೆಂಗಳೂರು: 'ಬದಲಾದ ಜೀವನಶೈಲಿಯಿಂದಾಗಿ ಹೃದಯಾಘಾತ, ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯದಂತಹ ಸಾಂಕ್ರಾಮಿಕವಲ್ಲದ ರೋಗಗಳ ಪ್ರಕರಣಗಳು ಹೆಚ್ಚಳವಾಗುತ್ತಿವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಳವಳ ವ್ಯಕ್ತಪಡಿಸಿದರು. ಮಿಷನ್ ರಸ್ತೆಯಲ್ಲಿ ನಿರ್ಮಾಣವಾಗಿರುವ ಎನ್‌ಯು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿ, ಮಾತನಾಡಿದರು.

ದಿನೇಶ್ ಗುಂಡೂರಾವ್

'ಆರೋಗ್ಯ ಕೆಟ್ಟ ನಂತರ ಚಿಕಿತ್ಸೆಯ ಕಡೆಗೆ ಗಮನ ನೀಡುವ ಬದಲು, ಅನಾರೋಗ್ಯ ಸಮಸ್ಯೆಗಳು ಬರದಂತೆ ಎಚ್ಚರ ವಹಿಸಬೇಕು. ಹಿಂದೆ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದವು. ವೈದ್ಯಕೀಯ ಕ್ಷೇತ್ರದ ಪ್ರಗತಿಯಿಂದ ಆ ರೋಗಗಳನ್ನು ಗುಣಪಡಿಸಲು ಸಾಧ್ಯವಾಗಿದೆ. ಸಾಂಕ್ರಾಮಿಕವಲ್ಲದ ರೋಗಗಳಿಗೆ ಕಡಿವಾಣ ಹಾಕಲು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವುದು ಮುಖ್ಯವಾಗುತ್ತದೆ' ಎಂದರು.

'ವೈದ್ಯಕೀಯ ಕ್ಷೇತ್ರ ವೇಗವಾಗಿ ಬೆಳವಣಿಗೆ ಹೊಂದುತ್ತಿದೆ. ಹೊಸ ತಂತ್ರಜ್ಞಾನಗಳ ಅಳವಡಿಕೆಯ ಜತೆಗೆ, ಚಿಕಿತ್ಸೆಯಲ್ಲಿಯೂ ದೊಡ್ಡ ಮಟ್ಟದ ಕ್ರಾಂತಿಯಾಗಿದೆ' ಎಂದರು.

ಸಂಸದರಾದ ಡಾ.ಸಿ.ಎನ್. ಮಂಜುನಾಥ್, ಪಿ.ಸಿ.ಮೋಹನ್, ಚಿತ್ರನಟ ರಮೇಶ್ ಅರವಿಂದ್, ಎನ್‌ಯು ಆಸ್ಪತ್ರೆಯ ಅಧ್ಯಕ್ಷ ಡಾ. ವೆಂಕಟೇಶ್ ಕೃಷ್ಣಮೂರ್ತಿ, ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಸನ್ನ ವೆಂಕಟೇಶ್ ಉಪಸ್ಥಿತರಿದ್ದರು.

88 ಹುಲಿಗಳ ಸಾವಿನ ತನಿಖೆಗೆ ಇತಿಶ್ರೀ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬಹು ಸಮಯದಿಂದ ಇತ್ಯರ್ಥವಾಗದೆ ಉಳಿದಿರುವ 88 ಹುಲಿಗಳ ಸಾವಿನ ತನಿಖೆಯನ್ನು ಮುಕ್ತಾಯಗೊಳಿಸಲು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಮುಂದಾಗಿದೆ.

ದೇಶದಲ್ಲಿ 2020ರಲ್ಲಿ 106 ಹಾಗೂ 2021ರಲ್ಲಿ 127 ಹುಲಿಗಳು ಮೃತಪಟ್ಟಿದ್ದವು. ಈ ಪೈಕಿ, ಐದು ವರ್ಷ ಕಳೆದರೂ 88 ಹುಲಿಗಳ ಸಾವಿನ ತನಿಖೆ ಪೂರ್ಣಗೊಂಡಿಲ್ಲ. ಹುಲಿಗಳ ಮರಣೋತ್ತರ ಪರೀಕ್ಷೆ ವರದಿ, ವಿಧಿವಿಜ್ಞಾನ ವರದಿ, ಹಿಸ್ಟೊಪಾಥಾಲಜಿ (ಸೂಕ್ಷ್ಮ ದರ್ಶಕದ ಅಡಿಯಲ್ಲಿ ದೇಹದ ಅಂಗಾಂಶಗಳ ಪರೀಕ್ಷೆ) ವರದಿ ಮತ್ತಿತರ ವಿವರಗಳನ್ನು 15 ದಿನಗಳೊಳಗೆ ಸಲ್ಲಿಸದಿದ್ದರೆ ಈ ಪ್ರಕರಣಗಳನ್ನು ಮುಕ್ತಾಯಗೊಳಿಸುವುದಾಗಿ ಎನ್‌ಟಿಸಿಎ ತಿಳಿಸಿದೆ. ಈ ಸಂಬಂಧ ಕರ್ನಾಟಕ ಸೇರಿದಂತೆ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದೆ.

ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ 667 ಹುಲಿಗಳು ಮೃತಪಟ್ಟಿವೆ. ಕಳ್ಳಬೇಟೆಗೆ ಅನೇಕ ಹುಲಿಗಳು ಬಲಿಯಾಗಿವೆ. ಹುಲಿ ಸಂರಕ್ಷಣಾ ಕಾರ್ಯದಲ್ಲಿ ಅರಣ್ಯ ಇಲಾಖೆಯ ವೈಫಲ್ಯದಿಂದಾಗಿಯೂ ಹಲವು ಹುಲಿಗಳು ಸತ್ತಿವೆ. ಇಂತಹ ಪ್ರಕರಣಗಳ ತನಿಖೆಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯದೆ ಮುಕ್ತಾಯಗೊಳಿಸಲು ಮುಂದಾಗಿರುವುದು ಅಕ್ಷಮ್ಯ ಎಂದು ವನ್ಯಜೀವಿ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕಲೆ ಸೃಜನಶೀಲವಾಗಿರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಪನೆ ಕಲಾವಿದರ ಜೀವಾಳವಾಗಿದ್ದು, ಕಲೆ ಯಾವಾಗಲೂ ಸೃಜನಶೀಲವಾಗಿರಬೇಕು' ಎಂದು ಕಲಾವಿದ ಚಿ.ಸು.ಕೃಷ್ಣಸೆಟ್ಟಿ ಅಭಿಪ್ರಾಯಪಟ್ಟರು.

ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ನಗರದಲ್ಲಿ ಹಮ್ಮಿಕೊಂಡಿದ್ದ ಚಿತ್ತಾರ ಸಾಮೂಹಿಕ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ, ಮಾತನಾಡಿದರು. 'ಕಲಾವಿದರು ಸದಾ ಹೊಸತನ್ನು ಕಲಿಯುವ ತುಡಿತದಿಂದ ಎಲ್ಲೆಡೆ ನಡೆಯುವ ಚಿತ್ರಕಲಾ ಪ್ರದರ್ಶನಗಳಿಗೆ ಭೇಟಿ ಕೊಡಬೇಕು. ಇಲ್ಲಿನ ಕಲೆ ಹಾಗೂ ಕಲಾವಿದರಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಸಿಗಬೇಕು. ಆಗ ಮಾತ್ರ ಕಲೆ ಜೀವಂತವಾಗಿ ಉಳಿಯುತ್ತದೆ' ಎಂದು ಹೇಳಿದರು.

'ಕಲಾವಿದರಿಗೆ ತಮ್ಮ ಕಲಾಕೃತಿಗಳ ಬಗ್ಗೆ ಹೆಮ್ಮೆಯೂ ಇರಬೇಕು. ಅದೇ ಸಮಯದಲ್ಲಿ ಹೊಸತನ್ನು ಒಳಗಿಳಿಸಿಕೊಳ್ಳುವ ಅಂತಃಸತ್ವವೂ ಬೇಕು' ಎಂದು ಅಭಿಪ್ರಾಯಪಟ್ಟರು. ವಿಧಾನ ಪರಿಷತ್ತಿನ ಸದಸ್ಯ ಟಿ.ಎ. ಶರವಣ ಅವರು ಕಲಾವಿದರಿಗೆ ಶುಭ ಹಾರೈಸಿದರು.

ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಲ್. ನಟರಾಜ್, ಗೌರವಾಧ್ಯಕ್ಷ ಟಿ.ಎ.ಪಿ. ನಾಗರಾಜ್, ಪ್ರಧಾನ ಕಾರ್ಯದರ್ಶಿ ಟಿ.ಎನ್. ಅಶೋಕ್, ಖಜಾಂಚಿ ದೀಪಕ್ ಕಂಚಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗ ಶೆಟ್ಟಿ, ಸಾಹಿತ್ಯ ಅಕಾಡೆಮಿಯ ಸದಸ್ಯೆ ಸುಮಾ ಸತೀಶ್ ಉಪಸ್ಥಿತರಿದ್ದರು. 35ಕ್ಕೂ ಅಧಿಕ ಕಲಾವಿದರ 100ಕ್ಕೂ ಅಧಿಕ ಕಲಾಕೃತಿಗಳು ಪ್ರದರ್ಶನದಲ್ಲಿದ್ದವು.

ಕಾರ್ಯಕ್ರಮದಲ್ಲಿ ಚಿ.ಸು.ಕೃಷ್ಣಸೆಟ್ಟಿ ಅವರನ್ನು ಗೌರವಿಸಲಾಯಿತು. ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಲ್. ನಟರಾಜ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು

ನಗರದಲ್ಲಿ ಇಂದು

ವ್ಯಂಗ್ಯಚಿತ್ರ ಪ್ರದರ್ಶನ: ವ್ಯಂಗ್ಯ ಚಿತ್ರಕಾರ ಮಾರಿಯೊ ಡಿ. ಮಿರಾಂಡಾ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ 'ಮಾರಿಯೋ @ 100' ಶೀರ್ಷಿಕೆಯಡಿ ವ್ಯಂಗ್ಯಚಿತ್ರ ಪ್ರದರ್ಶನ, ಉದ್ಘಾಟನೆ: ಚಂದ್ರನಾಥ ಆಚಾರ್ಯ, ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ನಂ.1, ಮಿಡ್‌ಫೋರ್ಡ್ ಹೌಸ್, ಮಿಡ್‌ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಬೆಳಿಗ್ಗೆ 11

ಕಲಾ ವಿಕಸನ ಶಿಬಿರದ ಸಮಾರೋಪ ಸಮಾರಂಭ: ಅತಿಥಿಗಳು: ಮಂಗಳಾ ಎಂ. ನಾಡಿಗ್, ಮನೋಜವಂ ಆತ್ರೇಯ, ಸಚ್ಚಿದಾನಂದಮೂರ್ತಿ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಮನೋರಂಜಿನಿ ಸಭಾಂಗಣ, ಸಿದ್ಧಿ ಗಣಪತಿ ದೇವಾಲಯ, ಕೆಎಸ್‌ಆರ್‌ಟಿಸಿ ಲೇಔಟ್, ಚಿಕ್ಕಲ್ಲಸಂದ್ರ, ಸಂಜೆ 5.30

ಚಿಗುರು ರಂಗೋತ್ಸವ: 'ಪ್ರೀತಿಯಿಂದ' ನಾಟಕ ಪ್ರದರ್ಶನ, ತಂಡ: ರಂಗ ಶಾರೀರ, ಆಯೋಜನೆ: ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ ಪ್ರಯುಕ್ತ ಮಾಯಾರಾವ್ ನೃತ್ಯೋತ್ಸವ: ವಿವಿಧ ನೃತ್ಯ ಪ್ರದರ್ಶನ, ಮಾಯಾರಾವ್ ಸ್ಮರಣಾರ್ಥ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಶಿವರಾಜ ತಂಗಡಗಿ, ಪ್ರಶಸ್ತಿ ಪುರಸ್ಕೃತರು: ಚಂದ್ರಕುಮಾರ್ ಸಿಂಗ್, ಶಿವತಾಂಡವ ನೃತ್ಯ ರೂಪಕ, ಆಯೋಜನೆ: ಸೃಷ್ಟಿ ಸಂಸ್ಥೆ, ರೋಟರಿ ಡಿಸ್ಟ್ರಿಕ್ಟ್ 3191, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4ರಿಂದ

ಅಗ್ನಿಕುಂಡ ಮತ್ತು ಕರಗ ಉತ್ಸವ: ವಸಂತೋತ್ಸವ ಮತ್ತು ಧ್ವಜಾರೋಹಣ, ಆಯೋಜನೆ: ಧರ್ಮರಾಯ ಸ್ವಾಮಿ ಪೆರುಮಾಳ್ ದೇವಸ್ಥಾನ ಟ್ರಸ್ಟ್, ಸ್ಥಳ: ಧರ್ಮರಾಯಸ್ವಾಮಿ ಮತ್ತು ಪಾಂಚಾಲಿದೇವಿಯ ದೇವಸ್ಥಾನ, ಕಲಾಸಿಪಾಳ್ಯ, ಸಂಜೆ 4



ಪರಮೇಶ್ವರ ಹೆಗಡೆ

ಗಾಯನ-ಸನ್ಮಾನ-ಗಾಯನ: ಸಂಗೀತ ಕಛೇರಿ: ಚೈತನ್ಯ ಭಟ್ಟ, ವಿಘ್ನೇಶ ಕಾಮತ್, ಮಧುಸೂದನ ಭಟ್ಟ, ಸನ್ಮಾನ: ಪರಮೇಶ್ವರ ಹೆಗಡೆ, ಸಂಗೀತ ಕಛೇರಿ: ಭಾರತಿ ಪ್ರತಾಪ, ಜಗದೀಶ ಕುರ್ತಕೋಟಿ, ಅಶ್ವಿನ್ ವಾಲ್ವಾಲ್ಕರ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಪ್ರಥಮ ಪ್ರವೇಶ: ಜೈತ್ರಿಶ್ರೀ, ಮೋಕ್ಷಿತಾ ಯು., ಎಂ.ಶ್ರೀಸಂಯುಕ್ತಾ, ಎನ್. ಕಾನಿಷ್ಕ, ಧನ್ಯಶ್ರೀ ಎಚ್., ಜೀವಿಕಾ ವಿಕಾಸ್ ಘಾಗರೆ, ಆಯೋಜನೆ: ನಾಟ್ಯಮಯೂರಿ ಕ್ಲಾಸಿಕಲ್ ಡಾನ್ಸ್ ಇನ್‌ಸ್ಟಿಟ್ಯೂಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5.30

ಸಂಗೀತ ಕಛೇರಿ: ಮ್ಯಾಂಡೋಲಿನ್: ಎಸ್.ಎಂ.ಸುಭಾನಿ, ಪಿಟೀಲು: ಅಚ್ಯುತ್ ರಾವ್, ಮೃದಂಗ: ಕಾರ್ತಿಕೇಯ ಆದಿನಾರಾಯಣ ಶರ್ಮಾ, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ: ಭಾರತ್ ಕಲ್ಚರಲ್ ಅಸೋಸಿಯೇಷನ್, ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಪ್ರೊ.ಬಿ.ಆರ್. ಸುಬ್ಬರಾವ್ ಪದವಿಪೂರ್ವ ಕಾಲೇಜು ಸಭಾಂಗಣ, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಸಂಜೆ 5.45

ಸಂತ ಶಿಶುನಾಳ ಶರೀಫ, ಡಿ.ವಿ. ಗುಂಡಪ್ಪ, ಪು.ತಿ.ನ 'ಮರೆಯಲಾಗದ ಮಹನೀಯರು': ಉದ್ಘಾಟನೆ: ಆರ್. ಅಶೋಕ್, ನುಡಿ ಗೌರವ: ರೋಹಿಣಿ ಮೋಹನ, ವೈ.ಕೆ. ಮುದ್ದುಕೃಷ್ಣ, 'ಪದ್ಮಚರಣ್ ಮತ್ತು ರಾಜು ಅನಂತಸ್ವಾಮಿ' ಅವರಿಗೆ ಗೀತ ಗೌರವ: ವೈ.ಕೆ. ಮುದ್ದುಕೃಷ್ಣ, ನಗರ ಶ್ರೀನಿವಾಸ ಉಡುಪ, ಕಿಕ್ಕೇರಿ ಕೃಷ್ಣಮೂರ್ತಿ, ಪ್ರವೀಣ್ ಬಿ.ವಿ., ಪ್ರದೀಪ್ ಬಿ.ವಿ., ರವಿ ಕೃಷ್ಣಮೂರ್ತಿ, ಲಿಖಿತ್ ಕೃಷ್ಣ, ರೋಹಿಣಿ ಮೋಹನ್, ಮಂಗಳಾ ರವಿ, ನಾಗಚಂದ್ರಿಕಾ ಭಟ್, ಶೃತಿ ತುಮಕೂರು, ಮಧು ಮನೋಹರನ್, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಆರ್. ಅಶೋಕ್ ಅವರ ಶಾಸಕರ ಕಚೇರಿ, ಬೆಂಗಳೂರು ವಿಹಾರ ಕೇಂದ್ರದ ಹತ್ತಿರ, ಬನಶಂಕರಿ 2ನೇ ಹಂತ, ಸಂಜೆ 6

84ನೇ ವರ್ಷದ ಶಂಕರಾಚಾರ್ಯರ ಜಯಂತಿ ಪ್ರಯುಕ್ತ ಶಂಕರೋತ್ಸವ ಹಾಗೂ ರಂಗನಂದೋತ್ಸವ: 'ರಾಜಾ ವಿಕ್ರಮ' ಹರಿಕಥೆ: ವಿ. ಶ್ರೀನಿವಾಸ್ ಗುರೂಜಿ, ಹಾರ್ಮೋನಿಯಂ: ಚಿಕ್ಕರಾಜು, ತಬಲಾ, ವೆಂಕಟರಾಜು, ಆಯೋಜನೆ ಹಾಗೂ ಸ್ಥಳ: ಅನಸೂಯ ಆಶ್ರಮ, ರಾಜಾಜಿನಗರ, ಸಂಜೆ 6.30

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಅವರ 142ನೇ ಬ್ರಹ್ಮರಥೋತ್ಸವ: ಮೃಗಯಾತ್ರೋತ್ಸವ, ಆಯೋಜನೆ ಹಾಗೂ ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಾಲಯದ ಆವರಣ, ನಗರ್ತರಪೇಟೆ, ಸಂಜೆ 6.30

ಗಂಗಾಧರ ಕರಿಕೆರೆ ಅವರ 'ದೊಂಬೀರಾಯನ ದುರ್ಗ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ನಟರಾಜ್ ತಲಘಟ್ಟಪುರ, ಅತಿಥಿಗಳು: ಗಿರಿರಾಜ್ ಬಿ.ಎಂ., ಶ್ರೀನಿವಾಸ ಸಾದಲಿ, ಆಯೋಜನೆ: ಸಮಷ್ಟಿ, ಸ್ಥಳ: ಸುಚಿತ್ರ ಪುರಂವಕರ, ಬಿ.ವಿ. ಕಾರಂತ ರಸ್ತೆ, ಬನಂಶಕರಿ 2ನೇ ಹಂತ, ಸಂಜೆ 6.30

38ನೇ ಪ್ರತಿಷ್ಠಾಪನಾ ಮಹೋತ್ಸವ: ಭರತನಾಟ್ಯ: ಅನುರಾಧಾ ವಿಕ್ರಾಂತ್, ಆಯೋಜನೆ ಹಾಗೂ ಸ್ಥಳ: ವಿನಾಯಕ ದೇವಸ್ಥಾನ ಸಮಿತಿ, ಆರ್.ಟಿ.ನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಂದೇಶ ರವಾನಿಸಿ: ವಕೀಲರಿಗೆ ನ್ಯಾ.ದೀಕ್ಷಿತ್ ಕರೆ

'ನ್ಯಾಯಮೂರ್ತಿಗಳ ಅನುಚಿತ ನಡೆ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಹೈಕೋರ್ಟ್‌ಗೆ ಹೊರರಾಜ್ಯದಿಂದ ವರ್ಗಾವಣೆಯಾಗಿ ಬಂದಿರುವ ಯಾವ ನ್ಯಾಯಮೂರ್ತಿಗಳು ನಿಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೋ ಅಂತಹ ನ್ಯಾಯಮೂರ್ತಿಗಳಿಗೆ ನೀವು ಸರಿಯಾದ ಸಂದೇಶ ರವಾನಿಸಬೇಕು' ಎಂದು ಒಡಿಶಾ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ 'ಬೆಂಗಳೂರು ವಕೀಲರ ಸಂಘ'ಕ್ಕೆ ಕರೆ ನೀಡಿದರು.

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಗುರುವಾರ (ಏ.30) 'ಬೆಂಗಳೂರು ವಕೀಲರ ಸಂಘ' (ಎಎಬಿ) ಹಮ್ಮಿಕೊಂಡಿದ್ದ ವಾರ್ಷಿಕ ದಿನಾಚರಣೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 'ಬೇರೆ ರಾಜ್ಯಗಳಿಂದ ಕರ್ನಾಟಕ ಹೈಕೋರ್ಟ್‌ಗೆ ಬಂದಿರುವ ಕೆಲವು ನ್ಯಾಯಮೂರ್ತಿಗಳು ಕೋರ್ಟ್ ಕಲಾಪದಲ್ಲಿ ವಕೀಲರ ಜೊತೆ ಅನುಚಿತವಾಗಿ ನಡೆದುಕೊಳ್ಳುತ್ತಿದ್ದಾರೆ ಮತ್ತು ಈ ನ್ಯಾಯಮೂರ್ತಿಗಳ ಮುಂದೆ ಹೋಗಿ ನಾವು ಹೇಗೆ ವಾದ ಮಾಡಬೇಕು ಎಂದು ರಾಜ್ಯದ ವಕೀಲರು ಅಳಕುತ್ತಿದ್ದಾರೆ ಎಂಬ ಮಾತು ನನ್ನ ಕಿವಿಗೆ ಬಿದ್ದಿದೆ. ಇದು ತರವಲ್ಲ' ಎಂದು ಹೇಳಿದರು.

'ಕುಟುಂಬ ಇದ್ದಂತೆ'

'ನ್ಯಾಯಮೂರ್ತಿಗಳು ಮತ್ತು ವಕೀಲರು ಎಂದರೆ ಅದು ಒಂದು ಕುಟುಂಬ ಇದ್ದಂತೆ. ಹೊರಗಿನಿಂದ ಬಂದವರು ಎಂಬುದು ಒಂದು ಪ್ರಶ್ನೆಯೇ ಆಗಬಾರದು. ಅವರೆಲ್ಲಾ ಸ್ಥಳೀಯರಾಗೇ ನಡೆದುಕೊಳ್ಳಬೇಕು. ಕೋರ್ಟಿಗೆ ಹೋಗುವಾಗಲೇ ನಾನು ಹೋಗುವ ಕೋರ್ಟ್ ಹಾಲ್ ಇದಲ್ಲ ಎಂಬ ಭಾವನೆ ವಕೀಲರಿಗೆ ಬರಕೂಡದು. ಇಂಥವರ ಮುಂದೆ ಹೋಗಿ ವಾದ ಮಾಡಬಲ್ಲೆ ಎಂಬಂತಹ ಪ್ರೀತಿ ಅಡಗಿರಬೇಕು. ವಕೀಲರು ಯಾವುದೇ ನ್ಯಾಯಪೀಠದ ಮುಂದೆ ಒತ್ತಡದಲ್ಲಿ ಹೋಗಿ ವಾದ ಮಂಡಿಸುವಂತಹ ಸ್ಥಿತಿ ಬರಬಾರದು. ಇದರಿಂದ ಕಕ್ಷಿದಾರರಿಗೆ ಅನ್ಯಾಯವಾಗುತ್ತದೆ' ಎಂದು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹೇಳಿದರು.

ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್

'ಹೊರಗಿನಿಂದ ಬಂದ ನ್ಯಾಯಮೂರ್ತಿಗಳು ಎಂದರೆ ಅವರೇನೂ ಪಾಕಿಸ್ತಾನ, ಅಫ್ಗಾನಿಸ್ತಾನದಿಂದ ಬಂದಿರುವುದಿಲ್ಲ. ಭಾರತದ ಮತ್ತೊಂದು ಭಾಗದಿಂದಲೇ ಇಲ್ಲಿಗೆ ಬಂದಿರುತ್ತಾರೆ. ಇಲ್ಲಿಗೆ ಬಂದ ಮೇಲೆ ಅವರು ಇಲ್ಲಿಯವರಾಗೇ ನಡೆದುಕೊಳ್ಳಬೇಕು' ಎಂದು ಹೇಳಿದರು.

'ಕರ್ನಾಟಕ ಹೈಕೋರ್ಟ್‌ಗೆ ಬರುವ ನ್ಯಾಯಮೂರ್ತಿಗಳು ತಾವು ಕನ್ನಡದ ನೆಲದಲ್ಲಿ ಇರುತ್ತೇವೆ ಎಂಬುದನ್ನು ಮರೆಯಬಾರದು; ನಿಮಗೆಲ್ಲಾ ಹಸಿವಾದರೆ ಇಲ್ಲಿನ ಅಕ್ಕಿ, ಗೋಧಿ, ಕಾಳು–ಕಡಿ ಬೇಕು. ಬಾಯಾರಿಕೆಯಾದರೆ ಕುಡಿಯಲು ಕಾವೇರಿ ನೀರು ಬೇಕು... ಇವೆಲ್ಲಾ ಬೇಕಾದ ಮೇಲೆ ಕನ್ನಡದ ಭಾಷೆ ಬೇಡ ಅಂದರೆ ಹೇಗೆ?' ಎಂದು ಪ್ರಶ್ನಿಸಿದ ನ್ಯಾ.ದೀಕ್ಷಿತ್ ಅವರು, 'ಇಲ್ಲಿಗೆ ಬಂದ ಅನೇಕ ಮಹನೀಯರು ಕನ್ನಡ ಭಾಷೆ ಕಲಿತು ಹೋಗಿದ್ದಾರೆ. ನ್ಯಾಯಮೂರ್ತಿಗಳು ಮಾತ್ರವಲ್ಲ, ಹೊರಗಿನಿಂದ ಬರುವ ವಕೀಲರೂ ಕನ್ನಡ ಕಲಿಯಬೇಕು' ಎಂದು ತಾಕೀತು ಮಾಡಿದರು.

'ಯಾವುದೇ ನ್ಯಾಯಮೂರ್ತಿ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅಲ್ಲಿನ ಭಾಷೆಯನ್ನು ಗ್ರಹಿಸಲೇಬೇಕು. ನಾನು ಕರ್ನಾಟಕ ಹೈಕೋರ್ಟ್‌ನಿಂದ ಒಡಿಶಾ ಹೈಕೋರ್ಟ್‌ಗೆ ವರ್ಗವಾಗಿ ಹೋದ ಮೇಲೆ ಒರಿಯಾ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಸಫಲವಾಗಿದ್ದೇನೆ' ಎಂದರು.

'ತೆರೆದ ನ್ಯಾಯಾಲಯಗಳ ಕಲಾಪದಲ್ಲಿ ವಕೀಲರು ಹೇಳೋದಕ್ಕಿಂತ ಮೊದಲೇ ನ್ಯಾಯಮೂರ್ತಿಗಳು ಮುರಕೊಂಡು ಮೈಮೇಲೆ ಬಿದ್ದರೆ ಅವರು ಹೇಗೆ ತಾನೆ ವಾದ ಮಾಡಿಯಾರು? ರೈಟೊ–ರಾಂಗೋ ವಕೀಲರ ವಾದವನ್ನು ನ್ಯಾಯಮೂರ್ತಿಗಳು ಕೇಳುವಂತಾಗಬೇಕು. ಅಂತಿಮವಾಗಿ ಅವರು ಏನಾದರೂ ತೀರ್ಪು ಕೊಡಲಿ. ಅಷ್ಟಕ್ಕೂ, ಯಾವುದೇ ನ್ಯಾಯಮೂರ್ತಿ ತನ್ನ ತೀರ್ಪುಗಳನ್ನು ಸಿಟ್ಟು–ಸೆಡವಿನಿಂದ ಕೊಡುವಂತಾಗಬಾರದು' ಎಂದು ಪ್ರತಿಪಾದಿಸಿದರು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಎಎಬಿ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ ಗೌಡ ಮತ್ತು ಸಂಘದ ಪದಾಧಿಕಾರಿಗಳು ಸೇರಿದಂತೆ ವಕೀಲರು ಹಾಜರಿದ್ದರು.

ಮೆಟ್ರೊ ನಿಲ್ದಾಣದಲ್ಲಿ 'ಕಲಾ ಸೊಬಗು'

ಬಿಎಂಆರ್‌ಸಿಎಲ್ ಜತೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಮಾತುಕತೆ

• ವರುಣ ಹೆಗಡೆ

ಕಲಾಕೃತಿಗಳ ಪ್ರದರ್ಶನ, ಮಾರಾಟಕ್ಕೆ ಬಿಎಂಆರ್‌ಸಿಎಲ್‌ನಿಂದ ಸಕಾರಾತ್ಮಕ ಸ್ಪಂದನೆ ದೊರೆತಿದ್ದು, ಕೈಗೆಟಕುವ ದರದಲ್ಲಿ ಕಲಾಕೃತಿ ಒದಗಿಸಲಾಗುವುದು
ಪ.ಸ.ಕುಮಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ

ಬೆಂಗಳೂರು: ಜನಸಾಮಾನ್ಯರಲ್ಲಿ ವರ್ಣಚಿತ್ರಗಳ ಬಗ್ಗೆ ಅಭಿರುಚಿ ಮೂಡಿಸಲು ಕರ್ನಾಟಕ ಲಲಿತಕಲಾ ಅಕಾಡೆಮಿಯು ನಗರದ ಆಯ್ದ ಮೆಟ್ರೊ ನಿಲ್ದಾಣಗಳಲ್ಲಿ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮುಂದಾಗಿದೆ.

ಈ ಬಗ್ಗೆ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ಜತೆಗೆ ಅಕಾಡೆಮಿ ಮಾತುಕತೆ ನಡೆಸುತ್ತಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತು, ವೆಂಕಟಪ್ಪ ಆರ್ಟ್ ಗ್ಯಾಲರಿ ಸೇರಿ ನಗರದ ಕೆಲವೆಡೆ ಮಾತ್ರ ಕಲಾಕೃತಿಗಳ ಪ್ರದರ್ಶನ ನಡೆಯುತ್ತಿದ್ದು, ಆ ಸ್ಥಳಗಳಿಗೆ ಕಲಾವಿದರು ಹಾಗೂ ಕಲಾ ಪ್ರೇಮಿಗಳು ಮಾತ್ರ ಭೇಟಿ ನೀಡುತ್ತಿದ್ದಾರೆ. ಹೀಗಾಗಿ, ಜನಸಾಮಾನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಡೆ ಕಲಾಕೃತಿಗಳನ್ನು ಕೊಂಡೊಯ್ಯಲು ನಿರ್ಧರಿಸಿರುವ ಅಕಾಡೆಮಿ, ಮೆಟ್ರೊ ನಿಲ್ದಾಣದಲ್ಲಿ ಕಲಾ ಪ್ರದರ್ಶನಗಳನ್ನು ನಡೆಸಲು ಮುಂದಾಗಿದೆ.

ಈ ಯೋಜನೆಯ ಭಾಗವಾಗಿ ಮೊದಲ ಹಂತದಲ್ಲಿ ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್ ಹಾಗೂ ಇಂದಿರಾನಗರದ ಮೆಟ್ರೊ ನಿಲ್ದಾಣವನ್ನು ಗುರುತಿಸಿದೆ. ಬಿಎಂಆರ್‌ಸಿಎಲ್ ಅನುಮತಿ ದೊರೆತ ಬಳಿಕ ಈ ಕೇಂದ್ರಗಳಲ್ಲಿ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಅಕಾಡೆಮಿ ನಡೆಸಿದ ತರಬೇತಿ, ಕಾರ್ಯಾಗಾರ, ಶಿಬಿರಗಳಲ್ಲಿ ನೂರಾರು ಕಲಾವಿದರು ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು, ಆ ಕಲಾಕೃತಿಗಳನ್ನು ಅಕಾಡೆಮಿ ಕೇಂದ್ರದಲ್ಲಿ ದಾಸ್ತಾನು ಮಾಡುತ್ತಾ ಬರಲಾಗಿದೆ. ಕೆಲ ಅಪರೂಪದ ಕಲಾಕೃತಿಗಳು ಸೇರಿವೆ. ಸುಸ್ಥಿತಿಯಲ್ಲಿರುವ ಕಲಾಕೃತಿಗಳನ್ನು ನಿಗದಿತ ಮೆಟ್ರೊ ನಿಲ್ದಾಣದಲ್ಲಿ ತಿಂಗಳಿಗೆ ಒಂದು ಅಥವಾ ಎರಡು ದಿನ ಪ್ರದರ್ಶಿಸಿ, ಕೈಗೆಟಕುವ ದರಕ್ಕೆ ಜನರಿಗೆ ಮಾರಾಟ ಮಾಡಲು ಅಕಾಡೆಮಿ ಚಿಂತನೆ ನಡೆಸಿದೆ.

ಅಕಾಡೆಮಿಗೆ ಆದಾಯ: ಈ ಪ್ರದರ್ಶನದಿಂದ ಅಕಾಡೆಮಿಗೂ ಆದಾಯ ಬರಲಿದ್ದು, ಆ ಹಣವನ್ನು ವಿವಿಧ ಕಲಾ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಸಾಧ್ಯವಾಗಲಿದೆ. ಕಳೆದ ವರ್ಷ 'ಮನೆಗೊಂದು ಕಲಾಕೃತಿ' ಯೋಜನೆಯಡಿ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ ಕಲಾ ಪ್ರದರ್ಶನಲ್ಲಿ 65 ಕಲಾಕೃತಿಗಳು ಮಾರಾಟವಾಗಿದ್ದವು.ಆಗ 700 ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು.

ಕರ್ನಾಟಕ ಲಲಿತಕಲಾ ಅಕಾಡೆಮಿಯು 'ಮನೆಗೊಂದು ಕಲಾಕೃತಿ' ಯೋಜನೆಯಡಿ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಿದ್ದ ಕಲಾಕೃತಿಗಳು

ಕಲಾಕೃತಿಗಳ ಮಾರಾಟದಿಂದ ಅಕಾಡೆಮಿಗೆ ₹6 ಲಕ್ಷಕ್ಕೂ ಅಧಿಕ ಆದಾಯ ಬಂದಿತ್ತು. ಆ ಹಣದ ನೆರವಿನಿಂದ 'ಪ್ರತಿಭಾನ್ವೇಷಣೆ' ಯೋಜನೆ ರೂಪಿಸಿ, ಆಯ್ದ ಕಲಾ ವಿದ್ಯಾರ್ಥಿಗಳಿಗೆ ಕಲಾ ವೃತ್ತಿಯನ್ನು ಮುಂದುವರಿಸಲು ಆರ್ಥಿಕ ನೆರವು ಒದಗಿಸಲಾಗುತ್ತಿದೆ.

'ಮನೆಗೊಂದು ಕಲಾಕೃತಿ' ಯೋಜನೆಯಡಿ ಕಲಾಕೃತಿಗಳಿಗೆ ತಜ್ಞರ ಸಮಿತಿ ದರ ನಿಗದಿ ಮಾಡಿತ್ತು. ಡ್ರಾಯಿಂಗ್‌ಗಳಿಗೆ ₹1 ಸಾವಿರದಿಂದ ₹2 ಸಾವಿರ ನಿಗದಿಪಡಿಸಿದರೆ, ಪೇಂಟಿಂಗ್‌ಗಳಿಗೆ ₹3 ಸಾವಿರದಿಂದ ₹30 ಸಾವಿರದವರೆಗೆ ದರ ನಿಗದಿಪಡಿಸಲಾಗಿತ್ತು. ಅಕಾಡೆಮಿಯ ದಾಸ್ತಾನು ಕೇಂದ್ರದಲ್ಲಿ 3x3 ಅಡಿವರೆಗಿನ ಅಳತೆಯ ಕಲಾಕೃತಿಗಳೂ ಮಾರಾಟಕ್ಕೆ ಲಭ್ಯವಿದೆ. ಜಲವರ್ಣ, ಆ್ಯಕ್ರಿಲಿಕ್, ಮಧುಬನಿ, ತೈಲವರ್ಣ ಸೇರಿ ವಿವಿಧ ಪ್ರಕಾರದ ಕಲಾ ಕೃತಿಗಳನ್ನು ರಚಿಸಲಾಗಿದೆ. ಮೆಟ್ರೊ ನಿಲ್ದಾಣಗಳಲ್ಲಿ ನಡೆಯುವ ಪ್ರದರ್ಶನದಲ್ಲಿ ಈ ಹಿಂದೆ ಮಾರಾಟವಾಗದಿರುವ ಕಲಾಕೃತಿಗಳಿಗೆ ಇನ್ನಷ್ಟು ಕಡಿಮೆ ದರ ನಿಗದಿಪಡಿಸಲು ಅಕಾಡೆಮಿ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಕಲಾವಿದರ ಕಾಫಿ ಕೂಟ

ಅಕಾಡೆಮಿಯು ಕಲೆಯ ಬೆಳವಣಿಗೆ ದೃಷ್ಟಿಯಿಂದ 'ಕಲಾವಿದರ ಕಾಫಿ ಕೂಟ' ಎಂಬ ಯೋಜನೆಯನ್ನು ರೂಪಿಸಿದೆ. ಲಲಿತ ಕಲೆಯ ಬಗ್ಗೆ ಕಲಾವಿದರು ಹಾಗೂ ಸಂಬಂಧಪಟ್ಟವರು ಒಂದೆಡೆ ಸೇರಿ, ಕಾಫಿ ಕುಡಿಯುತ್ತಾ ಮುಕ್ತವಾಗಿ ಚರ್ಚಿಸುವ, ವಿಚಾರ ವಿನಿಮಯ ಮಾಡಿಕೊಳ್ಳುವ ಸಭೆ ಇದಾಗಿದೆ. ಹೊಸ ಕಲಾವಿದರು ಮತ್ತು ಅನುಭವಿ ಕಲಾವಿದರು ಪರಸ್ಪರ ಪರಿಚಿತರಾಗಲು, ಜ್ಞಾನ ಹಂಚಿಕೊಳ್ಳಲು ಈ ಕೂಟ ಉತ್ತಮ ಅವಕಾಶವನ್ನು ಒದಗಿಸಲಿದೆ.

ಬೆಂಗಳೂರು ಸೇರಿ ನಾಲ್ಕೂ ವಲಯಗಳಲ್ಲಿ ತಲಾ 25 ಸಭೆ ನಡೆಸಲು ಅಕಾಡೆಮಿ ನಿರ್ಧರಿಸಿದೆ. ಈ ರೀತಿ ಸಭೆ ನಡೆಸುವವರು ಅಕಾಡೆಮಿಗೆ ಅರ್ಜಿ ಸಲ್ಲಿಸಿ, ಅನುಮತಿ ಪಡೆದಲ್ಲಿ ಸಭೆಯಲ್ಲಿ ಪಾಲ್ಗೊಳ್ಳುವವರಿಗೆ ಒದಗಿಸುವ ಚಹಾ–ಕಾಫಿ ಹಾಗೂ ಬಿಸ್ಕತ್ತಿನ ವೆಚ್ಚವನ್ನು ಅಕಾಡೆಮಿ ಭರಿಸಲಿದೆ.

ಪೀಣ್ಯ ಮೇಲ್ಸೇತುವೆ ವಾಹನ ಸಂಚಾರ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ-4ರಲ್ಲಿರುವ ಪೀಣ್ಯ ಮೇಲ್ಸೇತುವೆಯಲ್ಲಿ 'ಲೋಡ್ ಟೆಸ್ಟಿಂಗ್' (ಭಾರ ಪರೀಕ್ಷೆ) ಮತ್ತು ಸುರಕ್ಷತಾ ಪರಿಶೀಲನೆ ನಡೆಯುವುದರಿಂದ ಮೇ 5ರ ಬೆಳಿಗ್ಗೆ 5ರಿಂದ ಮೇ 8ರ ಬೆಳಿಗ್ಗೆ 11ರವರೆಗೆ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಕೋರಿಕೆಯಂತೆ ನಾಲ್ಕು ದಿನ ಪೀಣ್ಯ ಮೇಲ್ಸೇತುವೆಯ ಕೆನ್ನಮೆಟಲ್ ವಿಡಿಯಾ ಅಪ್ ರ‍್ಯಾಂಪ್‌ನಿಂದ ಎಸ್‌ಆರ್‌ಎಸ್ ಡೌನ್ ರ‍್ಯಾಂಪ್‌ವರೆಗೆ ಎರಡೂ ಬದಿಯಲ್ಲಿ ವಾಹನ ಸಂಚಾರಕ್ಕೆ ಅವಕಾಶವಿಲ್ಲ. ವಾಹನ ಸವಾರರು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಮೇಲ್ಸೇತುವೆಯ 1,422 'ಪ್ರಿಸ್ಟ್ರೆಸ್ಸಿಂಗ್ ಕೇಬಲ್' ಬದಲಿಸಲಾಗಿದೆ. ಮೇಲ್ಸೇತುವೆಯಲ್ಲಿ ₹32 ಕೋಟಿ ವೆಚ್ಚದಲ್ಲಿ ಹೊಸ ಕೇಬಲ್‌ಗಳನ್ನು ಅಳವಡಿಸಿದ ಬಳಿಕ ಸೇತುವೆಯ ಸಾಮರ್ಥ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಭಾರ ಪರೀಕ್ಷೆ ಅಗತ್ಯವಾಗಿದೆ. ಭವಿಷ್ಯದಲ್ಲಿ ಕೇಬಲ್‌ಗಳಿಗೆ ಹಾನಿ ಉಂಟಾಗದಂತೆ ಬಹು–ಪದರದ ರಕ್ಷಣಾ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪರೀಕ್ಷೆ ಹೇಗೆ: ತಲಾ 32 ಟನ್ ಭಾರ ಹೊತ್ತ ಎಂಟು ಟ್ರಕ್‌ಗಳನ್ನು ಆಯ್ಕೆ ಮಾಡಲಾದ ನಾಲ್ಕು ನಿರ್ದಿಷ್ಟ ಸ್ಪ್ಯಾನ್‌ಗಳ ಮೇಲೆ ನಿಲ್ಲಿಸಿ ಪರೀಕ್ಷೆ ಮಾಡಲಾಗುವುದು. ಈ ವೇಳೆ ಸೇತುವೆಯ ರಚನಾತ್ಮಕ ಬದಲಾವಣೆಗಳನ್ನು ಗೇಜ್‌ಗಳ ಮೂಲಕ ಅಳೆಯಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೀಣ್ಯ ಮೇಲ್ಸೇತುವೆ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ರಾಜ್ಯದ 21 ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಗೂ ಸಂಪರ್ಕ ಕೊಂಡಿಯಾಗಿದೆ. ಮೇಲ್ಸೇತುವೆ ಬಂದ್ ಆಗುವುದರಿಂದ ಪರ್ಯಾಯ ಮಾರ್ಗದಲ್ಲಿ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ.

ಪರ್ಯಾಯ ಮಾರ್ಗ

ನೆಲಮಂಗಲ–ಬೆಂಗಳೂರು ಕಡೆಗೆ: ಕೆನ್ನಮೆಟಲ್ ಫ್ಯಾಕ್ಟರಿ ಹತ್ತಿರ ಮೇಲ್ಸೇತುವೆ ಕೆಳಭಾಗದ ಎನ್.ಎಚ್.-4 ಮತ್ತು ಸರ್ವಿಸ್ ರಸ್ತೆ ಮೂಲಕ 8ನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಎಸ್.ಆರ್.ಎಸ್. ಜಂಕ್ಷನ್, ಗೊರಗುಂಟೆಪಾಳ್ಯ ಮೂಲಕ ಸಾಗಬಹುದು.

ಸಿ.ಎಂ.ಟಿ.ಐ–ನೆಲಮಂಗಲ ಕಡೆಗೆ: ಮೇಲ್ಸೇತುವೆ ಕೆಳಭಾಗದ ಎನ್.ಎಚ್ 4 ಮತ್ತು ಸರ್ವಿಸ್ ರಸ್ತೆ ಮೂಲಕ ಎಸ್.ಆರ್.ಎಸ್. ಜಂಕ್ಷನ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ, 8ನೇ ಮೈಲಿ, ಪಾರ್ಲೆ ಜಿ ಟೋಲ್ ಮೂಲಕ ಸಾಗಬೇಕು.

ಪೀಣ್ಯ ಮೇಲ್ಸೇತುವೆ

ತಿಮರೋಡಿ ಅರ್ಜಿ ವಜಾ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿಗೆ ತನ್ನನ್ನು ಗಡಿಪಾರು ಮಾಡಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸಾಮಾಜಿಕ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪುತ್ತೂರು ವಿಭಾಗಾಧಿಕಾರಿ ಮೂರನೇ ಬಾರಿಗೆ ಹೊರಡಿಸಿದ್ದ ಗಡಿಪಾರು ಆದೇಶ ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

'ನಿಯಮಗಳ ಪ್ರಕಾರ ಅರ್ಜಿದಾರರು 2026ರ ಮಾರ್ಚ್ 13ರಂದು ಹೊರಡಿಸಲಾಗಿರುವ ಗಡಿಪಾರು ಆದೇಶ ಪ್ರಶ್ನಿಸಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಮೊದಲಿಗೆ ಗೃಹಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸಲಿ. ಇಲಾಖೆ ಮನವಿಯನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಿದೆ. ಆದ್ದರಿಂದ, ಈ ಅರ್ಜಿಯನ್ನು ಪುರಸ್ಕರಿಸಲಾಗದು' ಎಂದು ನ್ಯಾಯಪೀಠ ತಿಳಿಸಿದೆ.

ನೃತ್ಯ ಪ್ರಕಾರಗಳ ಸಂಗಮವಾದ 'ರಸಾನುಭವ'

ಕೂಚಿಪುಡಿ ನೃತ್ಯ ಪ್ರದರ್ಶಿಸಿದ ದೇವೇಶ್ ನಾಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟೇಶ ನೃತ್ಯಾಲಯ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ರಸಾನುಭವ' ಕಾರ್ಯಕ್ರಮದಲ್ಲಿ ವಿವಿಧ ಭಾರತೀಯ ನೃತ್ಯ ಪ್ರಕಾರಗಳು ಪ್ರದರ್ಶನಗೊಂಡವು.

ಶ್ರೀಹರಿ ಮತ್ತು ತಂಡದಿಂದ ಕಥಕ್, ನಯನಾ ಶ್ರೀನಿವಾಸನ್ ಅವರಿಂದ ಭರತನಾಟ್ಯ, ದೇವೇಶ್ ನಾಯರ್ ಅವರಿಂದ ಕೂಚಿಪುಡಿ ಮತ್ತು ಐಶ್ವರ್ಯ ಅವರಿಂದ ಒಡಿಸ್ಸಿ ನೃತ್ಯ ಪ್ರದರ್ಶನಗೊಂಡವು.

'ಪ್ರದರ್ಶನ ಕಲೆಗಳಲ್ಲಿ ಉದ್ಯೋಗಾವಕಾಶಗಳು' ಎಂಬ ವಿಷಯದ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಪ್ರಿಯಾಶ್ರೀ ರಾವ್, ಪ್ರದರ್ಶನ ಕಲೆ ಕ್ಷೇತ್ರದಲ್ಲಿ ವೃತ್ತಿ ನಿರ್ಮಾಣದ ಸಾಧ್ಯತೆಗಳು, ಸವಾಲುಗಳು ಮತ್ತು ಭವಿಷ್ಯದ ದಿಕ್ಕುಗಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಪಿ.ಪ್ರವೀಣ್ ಕುಮಾರ್ ಅವರ ಭರತನಾಟ್ಯ, ನೀನಾ ಪ್ರಸಾದ್ ಅವರ ಮೋಹಿನಿಯಾಟಂ ಮತ್ತು ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್ ತಂಡದಿಂದ ಪ್ರದರ್ಶಿಸಲ್ಪಟ್ಟ 'ಗೋವರ್ಧನ ಲೀಲೆ' ನೃತ್ಯರೂಪಕ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. 'ಗೋವರ್ಧನ ಲೀಲೆ' ಪ್ರದರ್ಶನವು ತನ್ನ ವೈಭವ, ನಿರೂಪಣೆ ಮತ್ತು ಭಾವಗಾಢತೆಯಿಂದ ಪ್ರೇಕ್ಷಕರ ಮೆಚ್ಚುಗೆಗೆ ಭಾಜನವಾಯಿತು.

70 ಕೆ.ಜಿ ಬೆಳ್ಳಿ ಸಾಮಗ್ರಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ರಸ್ತೆಯ ಹಾವನೂರು ಬಡಾವಣೆಯ ಎಂ.ಬಿ.ಜ್ಯೂವೆಲರ್ಸ್‌ನ ಮಳಿಗೆಯಲ್ಲಿ 70 ಕೆ.ಜಿ ಬೆಳ್ಳಿ ಆಭರಣ ಹಾಗೂ ನಗದು ಸೇರಿದಂತೆ ಅಂದಾಜು ₹1.20 ಕೋಟಿ ಮೌಲ್ಯದ ವಸ್ತುಗಳನ್ನು ಕಳ್ಳರು ದರೋಡೆ ಮಾಡಿ ಪರಾರಿ ಆಗಿದ್ದಾರೆ.

ಹಾವನೂರು ಬಡಾವಣೆಯ ಆರ್‌ಎಸ್‌ಕೆ ವಾಣಿಜ್ಯ ಸಮುಚ್ಚಯದಲ್ಲಿ ಎಂ.ಬಿ.ಜ್ಯೂವೆಲರ್ಸ್‌ಗೆ ಸೇರಿದ ಮಳಿಗೆಯಿದೆ. ಈ ಮಳಿಗೆಗೆ ಹೊಂದಿಕೊಂಡಂತೆಯೇ ಹಿಂಬದಿಯಲ್ಲಿ ಸೆರಾಮಿಕ್ಸ್ ಅಂಗಡಿಯ ಗೋದಾಮು ಇದ್ದು, ಏ.27ರಂದು ರಾತ್ರಿ ಕಳ್ಳರು ಸೆರಾಮಿಕ್ಸ್ ಗೋದಾಮಿನ ರೋಲಿಂಗ್ ಶೆಟರ್‌ಗೆ ಹಾಕಲಾಗಿದ್ದ ಬೀಗ ಒಡೆದು, ಗೋದಾಮಿನ ಒಳ ಭಾಗದಿಂದ ಚಿನ್ನಾಭರಣ ಮಳಿಗೆಯ ಗೋಡೆ ಕೊರೆದು ಒಳಗೆ ನುಗ್ಗಿ ಬೆಳ್ಳಿ ಸಾಮಗ್ರಿ ಹಾಗೂ ನಗದು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದಾರೆ ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಮಳಿಗೆ ಮಾಲೀಕ ಜೆ.ಮಹೇಂದ್ರಕುಮಾರ್ ಅವರು ಏ.27ರಂದು ವಹಿವಾಟು ಮುಗಿದ ಬಳಿಕ ಅಂಗಡಿಯ ಬಾಗಿಲು ಮುಚ್ಚಿ ಮನೆಗೆ ಹೋಗಿದ್ದರು. ಏ.28ರಂದು ಬೆಳಿಗ್ಗೆ ಅಂಗಡಿಗೆ ಬಂದಾಗ ಕಳವು ನಡೆದಿರುವುದು ಗೊತ್ತಾಗಿದೆ.

ಕಳ್ಳತನ ನಡೆದ ಎಂ.ಬಿ. ಚಿನ್ನಾಭರಣ ಮಳಿಗೆ

ಆರ್‌ಎಸ್‌ಕೆ ವಾಣಿಜ್ಯ ಸಮುಚ್ಚಯದಲ್ಲಿ ಮಹೇಂದ್ರಕುಮಾರ್ ಅವರು ಕಳೆದ 14 ವರ್ಷಗಳಿಂದ ಚಿನ್ನಾಭರಣ ಮಳಿಗೆ ಇಟ್ಟುಕೊಂಡಿದ್ದಾರೆ. ಹಗಲು ವೇಳೆಯಲ್ಲಿ ಮಾತ್ರ ಮಳಿಗೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಇರುತ್ತಿದ್ದರು. ಮಳಿಗೆಯ ಒಳ ಭಾಗದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಆದರೆ, ಅವರು ತಾಂತ್ರಿಕ ದೋಷದ ಕಾರಣಕ್ಕೆ ಸ್ಥಗಿತಗೊಂಡಿದ್ದವು ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಜೈಲಿನಿಂದಲೇ ಪತ್ನಿಗೆ ಕೈದಿ ವಿಡಿಯೊ ಕರೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬ ಜೈಲಿನಲ್ಲಿದ್ದಾಗ ಪತ್ನಿಗೆ ವಿಡಿಯೊ ಕರೆ ಮಾಡಿ ಮಾತನಾಡಿರುವ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಅಕ್ಬರ್ ಎಂಬಾತ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ಜೈಲಿನ ಅಧಿಕಾರಿಗಳ ಗಮನಕ್ಕೆ ಬಾರದಂತೆ ಮೊಬೈಲ್ ಬಳಸುತ್ತಿದ್ದ ಎಂಬ ಆರೋಪವಿದೆ. ಈತ ಜೈಲಿನಲ್ಲಿದ್ದಾಗಲೇ ಪತ್ನಿಗೆ ಮೊಬೈಲ್‌ನಲ್ಲಿ ವಿಡಿಯೊ ಕರೆ ಮಾಡಿ, ಮಾತುಕತೆ ನಡೆಸಿದ್ದಾನೆ. ವಿಡಿಯೊ ಕರೆ ಮಾಡಿದಾಗ ಪತ್ನಿ 'ಸ್ಕ್ರೀನ್ ರೆಕಾರ್ಡ್' ಮಾಡಿಕೊಂಡಿದ್ದರು.

ಏಪ್ರಿಲ್ 28ರಂದು ಆರೋಪಿ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆ ಆಗಿದ್ದ. ಬಿಡುಗಡೆಯಾದ ಮೇಲೆ ಮಹಿಳೆ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೊವನ್ನು ಅಪ್‌ಲೋಡ್ ಮಾಡಿದ್ದರು.

'ಇನ್‌ಸ್ಟಾಗ್ರಾಮ್ ಖಾತೆಯಿಂದ ವಿಡಿಯೊ ಡಿಲಿಟ್ ಮಾಡಲಾಗಿದೆ. ಯಾವ ಬ್ಯಾರಕ್‌ನಿಂದ ವಿಡಿಯೊ ಕರೆ ಮಾಡಲಾಗಿದೆ. ಯಾವ ದಿನಾಂಕ ಕರೆ ಮಾಡಲಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಪರಪ್ಪನ ಅಗ್ರಹಾರ ಜೈಲಿನದ್ದೇ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಜೈಲಿನ ಮೂಲಗಳು ಹೇಳಿವೆ.

ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕೃತ ನಿವಾಸ ಕಾವೇರಿಯಲ್ಲಿ ಶುಕ್ರವಾರ ಭೇಟಿ ಮಾಡಿ, ಚರ್ಚಿಸಿದರು

ನಿರ್ದೇಶಕರ ಅನರ್ಹತೆ ಆದೇಶ ರದ್ದು

ಬೆಂಗಳೂರು: ಹೆಸರಘಟ್ಟ ಹೋಬಳಿಯ ಕಡತನಮಲೆ ಹಾಲು ಉತ್ಪಾದಕ ಸಹಕಾರ ಸಂಘದ ನಿರ್ದೇಶಕ ಸ್ಥಾನದಿಂದ ಕೆ.ಆರ್.ಸತೀಶ್ ಅವರನ್ನು ಅನರ್ಹಗೊಳಿಸಿ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಕೆ.ಆರ್.ಸತೀಶ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವನ್ನು ಪುನಃ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ ಅವರಿಗೆ ವರ್ಗಾಯಿಸಿರುವ ನ್ಯಾಯಪೀಠ, 'ಎಲ್ಲಾ ಪಕ್ಷಗಾರರಿಗೆ ತಮ್ಮ ಅಹವಾಲು ಸಲ್ಲಿಸಲು ಅವಕಾಶ ನೀಡಿ ಹೊಸದಾಗಿ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸಬೇಕು. ವಿಳಂಬ ಮಾಡದೆ ವಿಚಾರಣೆಯನ್ನು ಶೀಘ್ರ ಪೂರ್ಣಗೊಳಿಸಬೇಕು' ಎಂದು ರಿಜಿಸ್ಟ್ರಾರ್ ಅವರಿಗೆ ನಿರ್ದೇಶಿಸಿದೆ.

ಮಾದಕ ವಸ್ತು ಸೇವನೆ ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನ: ಆರೋಪ

ಸುಳ್ಳು ಆರೋಪ: ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಎ.ಪಿ.ಆದಿತ್ಯನ್

ಬೆಂಗಳೂರು: ನಗರ ಹೊರವಲಯದ ಬೊಮ್ಮಸಂದ್ರದ ಕಾಲೇಜೊಂದರ ಹಾಸ್ಟೆಲ್‌ನಲ್ಲಿ ಕೇರಳದ ವಿದ್ಯಾರ್ಥಿ ಎ.ಪಿ.ಆದಿತ್ಯನ್(19) ಅವರ ಶವ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆ ಆಗಿದೆ. ಘಟನೆಯು ಏಪ್ರಿಲ್ 29ರಂದು ನಡೆದಿದೆ.

ಕಾಲೇಜು ಆಡಳಿತ ಮಂಡಳಿ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಮೃತ ವಿದ್ಯಾರ್ಥಿ ಆದಿತ್ಯನ್ ತಂದೆ ಪ್ರದೀಪ್ ಆರೋಪಿಸಿದ್ದಾರೆ.

ಆದಿತ್ಯನ್ ಎರಡನೇ ವರ್ಷದ ಬಿಎಸ್‌ಸಿ ನರ್ಸಿಂಗ್ ಓದುತ್ತಿದ್ದರು. ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಏಪ್ರಿಲ್ 29ರಂದು ಆದಿತ್ಯನ್ ವಾಸವಿದ್ದ ಕೊಠಡಿಯ ಬಾಗಿಲು ತೆರೆಯದೇ ಇದ್ದಾಗ ಸ್ನೇಹಿತರಿಗೆ ಅನುಮಾನ ಬಂದಿತ್ತು. ಬಾಗಿಲು ತಟ್ಟಿದಾಗ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ನಂತರ, ಬಾಗಿಲು ಒಡೆದು ಪರಿಶೀಲಿಸಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ತಕ್ಷಣ ವಿಷಯವನ್ನು ಹಾಸ್ಟೆಲ್ ವಾರ್ಡನ್ ಹಾಗೂ ಕಾಲೇಜು ಆಡಳಿತ ಮಂಡಳಿಯ ಗಮನಕ್ಕೆ ವಿದ್ಯಾರ್ಥಿಗಳು ತಂದಿದ್ದರು ಎಂದು ಮೂಲಗಳು ಹೇಳಿವೆ.

ಮಾದಕವಸ್ತು ಸೇವನೆ ಪ್ರಕರಣದಲ್ಲಿ ಪುತ್ರನನ್ನು ಸಿಲುಕಿಸಿ ವಿದ್ಯಾರ್ಥಿಗಳ ಮುಂದೆ ಅವಮಾನಿಸಲಾಗಿದೆ. ಮಾನಸಿಕ ಹಿಂಸೆ ನೀಡಲಾಗಿದೆ. ಇದರಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಪ್ರದೀಪ್ ಆರೋಪ ಮಾಡಿದ್ದಾರೆ.

'ಪೊಲೀಸರು ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಪುತ್ರ ಎಲ್ಲರ ಜತೆಗೆ ಬೆರೆಯುತ್ತಿದ್ದ. ಸುಳ್ಳು ಪ್ರಕರಣದಲ್ಲಿ ಸಿಲುಕಿಸಲು ಪ್ರಯತ್ನಿಸಲಾಗಿದೆ. ಅದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಅವರು ದೂರಿದ್ದಾರೆ. ಹೆಬ್ಬಗೋಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದು ತನಿಖೆ ಆರಂಭವಾಗಿದೆ.

ಮೇಘಾಲಯದ ಮಹಿಳೆ ಆತ್ಮಹತ್ಯೆ

ಬೆಂಗಳೂರು: ಕೊಡಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಸಂಜೀವಿನಿ ನಗರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಮೇಘಾಲಯದ ಮಹಿಳೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೇಘಾಲಯದ ಅಗತ ಬೈತಿಯಂಗುಂ(36) ಆತ್ಮಹತ್ಯೆ ಮಾಡಿಕೊಂಡವರು.

ಮಾನ್ಯತಾ ಟೆಕ್ ಪಾರ್ಕ್‌ನಲ್ಲಿರುವ ಕಂಪನಿಯೊಂದರಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಸಂಜೀವಿನಿ ನಗರದಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಮೂರು ದಿನಗಳ ಹಿಂದೆ ಅಗತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಶಂಕೆಯಿದೆ. ಆತ್ಮಹತ್ಯೆ ಮಾಡಿಕೊಳ್ಳಲು ನಿಖರವಾದ ಕಾರಣ ಗೊತ್ತಾಗಿಲ್ಲ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಮಣಿಪುರದ ನವಾಜ್ ಶರೀಫ್ ಜತೆಗೆ ಕಳೆದ ಮೂರು ವರ್ಷದಿಂದ ಅಗತ ಸಹ ಜೀವನ ನಡೆಸುತ್ತಿದ್ದರು. ದಿನ ಕಳೆದಂತೆ ಇಬ್ಬರ ನಡುವೆ ವೈಮನಸ್ಸು ಉಂಟಾಗಿ ನಿತ್ಯ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

ಅಗತಗೆ 36 ವರ್ಷ ವಯಸ್ಸಾಗಿತ್ತು. ನವಾಜ್ ಶರೀಫ್‌ಗೆ 20 ವರ್ಷ. ವಯಸ್ಸಿನ ಅಂತರದ ಕಾರಣಕ್ಕೆ ಇಬ್ಬರ ನಡುವೆ ಹೊಂದಾಣಿಕೆ ಇರಲಿಲ್ಲ ಎನ್ನಲಾಗಿದೆ. ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ಇಬ್ಬರೂ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂಬುದಾಗಿ ಅಕ್ಕಪಕ್ಕದ ಮನೆಯವರು ಮಾಹಿತಿ ನೀಡಿದ್ದಾರೆ. ನವಾಜ್ ಷರೀಫ್ ಫೋನ್‌ನಲ್ಲಿ ಯಾರೊಂದಿಗಾದರೂ ಮಾತನಾಡುತ್ತಿರುವಾಗ ಅಗತ ಜಗಳ ಮಾಡುತ್ತಿದ್ದರು. ಬುಧವಾರ ರಾತ್ರಿಯೂ ಫೋನ್‌ನಲ್ಲಿ ಮಾತನಾಡುತ್ತಿರುವ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆದಿದೆ. ಅದಾದ ಮೇಲೆ ಅಗತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಪಘಾತ: ವಿದ್ಯಾರ್ಥಿ ಸಾವು

ಬೆಂಗಳೂರು: ಹೆಣ್ಣೂರು–ಬಾಗಲೂರು ಮುಖ್ಯರಸ್ತೆ ದಾಟುತ್ತಿದ್ದ ವೇಳೆ ಖಾಸಗಿ ಬಸ್ ಡಿಕ್ಕಿಯಾಗಿ ವಿದ್ಯಾರ್ಥಿಯೊಬ್ಬ ಶುಕ್ರವಾರ ಮೃತಪಟ್ಟಿದ್ದಾನೆ.

ವರುಣ್(15) ಮೃತಪಟ್ಟ ವಿದ್ಯಾರ್ಥಿ. ಘಟನೆಯ ಸಂಬಂಧ ಬಸ್ ಚಾಲಕ ಇಮ್ರಾನ್ ಖಾನ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ವರುಣ್, ನೀರು ತರಲೆಂದು ಗೆದ್ದಲಹಳ್ಳಿ ಹೋಟೆಲ್ ಎದುರು ಶುಕ್ರವಾರ ಬೆಳಿಗ್ಗೆ 11.30ರ ಸುಮಾರಿಗೆ ನಡೆದುಕೊಂಡು ಹೋಗುತ್ತಿದ್ದ. ಹೆಣ್ಣೂರು–ಬಾಗಲೂರು ಮುಖ್ಯರಸ್ತೆ ದಾಟುತ್ತಿದ್ದಾಗ ಹೆಣ್ಣೂರು ಕಡೆಯಿಂದ ಬಂದ ಖಾಸಗಿ ಬಸ್, ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಬಾಲಕ ಮೃತಪಟ್ಟಿದ್ದಾನೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಹೆಣ್ಣೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ತಡೆ ನಡೆಸಿ ಪ್ರತಿಭಟನೆ: ಘಟನೆ ಸಂಬಂಧ ಆಕ್ರೋಶ ವ್ಯಕ್ತಪಡಿಸಿರುವ ಕುಟುಂಬಸ್ಥರು ಹಾಗೂ ಸ್ಥಳೀಯರು ಹೆಣ್ಣೂರು–ಬಾಗಲೂರು ಮುಖ್ಯರಸ್ತೆಯನ್ನು ತಡೆದು ಪ್ರತಿಭಟನೆ ನಡೆಸಿದರು. ರಸ್ತೆತಡೆ ಹಿನ್ನೆಲೆಯಲ್ಲಿ ಬಾಗಲೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.

ವೈಟ್ ಟಾಪಿಂಗ್ ಕಾಮಗಾರಿಯನ್ನು ನಿಧಾನವಾಗಿ ನಡೆಸಲಾಗುತ್ತಿದ್ದು, ಇದರಿಂದಲೇ ರಸ್ತೆ ಅಪಘಾತವಾಗಿದೆ ಎಂದು ಸ್ಥಳೀಯರು ಆಕ್ರೋಶ ಹೊರ ಹಾಕಿದರು.

ಗಾಂಜಾ ಕಳ್ಳಸಾಗಣೆ: ಇಬ್ಬರ ಬಂಧನ

ಬೆಂಗಳೂರು: ಒಡಿಶಾದಿಂದ ರೈಲಿನ ಮೂಲಕ ನಗರಕ್ಕೆ ಗಾಂಜಾ ಕಳ್ಳಸಾಗಣೆ ಮಾಡಿದ್ದ ಇಬ್ಬರನ್ನು ಬಂಧಿಸಿರುವ ಅಬಕಾರಿ ಪೊಲೀಸರು 35 ಕೆ.ಜಿ ಗಾಂಜಾ ವಶಕ್ಕೆ ಪಡೆದಿದ್ದಾರೆ.

'ಒಡಿಶಾದಿಂದ ರೈಲಿನ ಮೂಲಕ ಗಾಂಜಾ ತರುತ್ತಿರುವುದರ ಬಗ್ಗೆ ಇದ್ದ ಖಚಿತ ಮಾಹಿತಿಯ ಮೇರೆಗೆ ಅಬಕಾರಿ ಜಂಟಿ ಆಯುಕ್ತ ಫಿರೋಜ್ ಕಿಲ್ಲೇದಾರ್ ನೇತೃತ್ವದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಅಬಕಾರಿ ಪೊಲೀಸರು ನಗರ ಕೇಂದ್ರ ರೈಲು ನಿಲ್ದಾಣದ ಬಳಿ ಗಸ್ತಿನಲ್ಲಿದ್ದರು. ಭುವನೇಶ್ವರಿಂದ ರೈಲಿನಲ್ಲಿ ಬಂದು ಇಳಿದ ಇಬ್ಬರು ವ್ಯಕ್ತಿಗಳು, ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದರು' ಎಂದು ಅಬಕಾರಿ ಪೊಲೀಸ್ ಮೂಲಗಳು ತಿಳಿಸಿವೆ.

'ಗಸ್ತಿನಲ್ಲಿದ್ದ ಸಿಬ್ಬಂದಿಯು ಆ ಇಬ್ಬರನ್ನು ಹಿಂಬಾಲಿಸಿ, ಶ್ರೀರಾಂಪುರ ಬಳಿ ಜಕ್ಕಯ್ಯನಕೆರೆ ಬಳಿ ತಡೆದು ನಿಲ್ಲಿಸಿದರು. ಈ ವೇಳೆ ಆರೋಪಿಗಳು ಓಡಿಹೋಗಲು ಯತ್ನಿಸಿದರು. ಅವರನ್ನು ಬಂಧಿಸಿ, ತಪಾಸಣೆ ನಡೆಸಿದಾಗ ಇಬ್ಬರ ಬಳಿಯೂ ಸುಮಾರು 35 ಕೆ.ಜಿ.ಯಷ್ಟು ಗಾಂಜಾ ಪತ್ತೆಯಾಯಿತು' ಎಂದಿವೆ. 'ಒಡಿಶಾದಿಂದ ಇಲ್ಲಿಗೆ ಗಾಂಜಾ ಕಳ್ಳಸಾಗಣೆ ಮಾಡುವ ಜಾಲ ಸಕ್ರಿಯವಾಗಿದೆ. ಬಂಧಿತರೂ ಈ ಜಾಲಕ್ಕೆ ಸಂಬಂಧಿಸಿದವರೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಮಾಹಿತಿ ನೀಡಿವೆ.

'ಬುದ್ಧನ ಬದುಕು ಕಾವ್ಯೌಷಧ'

ಸಿ.ಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬುದ್ಧನ ಬದುಕೇ ಲೌಕಿಕ ಜಗತ್ತಿಗೆ ಅಗತ್ಯವಾಗಿ ಬೇಕಿರುವ ಕಾವ್ಯೌಷಧವಾಗಿದೆ. ಸಿದ್ಧಾರ್ಥನು ಬುದ್ಧನಾಗುವ ಮಾರ್ಗದಲ್ಲಿ ಪದ ಪಾಂಡಿತ್ಯ, ಶಬ್ದ ಚಮತ್ಕಾರಕ್ಕಿಂತ ಸತ್ಯ ಮತ್ತು ಸರಳತೆ ಬುದ್ಧನ ಆಯ್ಕೆಯಾಗಿತ್ತು' ಎಂದು ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಬುದ್ಧ ಪೂರ್ಣಿಮೆ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ 'ಕಾವ್ಯ ಬೆಳದಿಂಗಳು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಬುದ್ಧ, ಕಾವ್ಯ ಮತ್ತು ಬೆಳದಿಂಗಳ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ಬುದ್ಧನ ಶಾಂತತೆ, ಕಾವ್ಯದ ಸೌಂದರ್ಯ ಮತ್ತು ಬೆಳದಿಂಗಳ ತಂಪು ಇವೆಲ್ಲವೂ ಸಮಾಜಕ್ಕೆ ಮತ್ತು ಮನುಷ್ಯನ ಮನಸ್ಸಿಗೆ ನೆಮ್ಮದಿಯನ್ನು ನೀಡುವ ಅಂಶಗಳು. ಸಿದ್ಧಾರ್ಥನಿಂದ ಬುದ್ಧನಾದ ಆ ಮಹಾಚೇತನದ ಪಯಣವೇ ಒಂದು ಅದ್ಭುತ ಕಾವ್ಯವಾಗಿದೆ' ಎಂದರು.

'ಅಧಿಕಾರ ಮತ್ತು ಅರಮನೆಯ ಸುಖವನ್ನು ತೊರೆದ ಸಿದ್ಧಾರ್ಥ, ಸತ್ಯವನ್ನು ಅರಸಿ ಹೊರಟ ಹೆಜ್ಜೆಗಳು ಇಂದಿಗೂ ಮನುಕುಲಕ್ಕೆ ದಾರಿದೀಪ. ಈ ಮಹಾಚೇತನದ ಪಯಣವೇ ಒಂದು ಅದ್ಭುತ ಕಾವ್ಯ' ಎಂದು ಬಣ್ಣಿಸಿದರು.

ಮುಖ್ಯಮಂತ್ರಿ ಅವರ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ, ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ, ಪತ್ರಕರ್ತ ಜಿ.ಎನ್.ಮೋಹನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕೆ.ವಿ. ಪ್ರಭಾಕರ್ ಮಾತನಾಡಿದರು

ರಾಷ್ಟ್ರೋತ್ಥಾನ ಪರಿಷತ್, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಿಂದ ಕಾರ್ಯಕ್ರಮ

'ಜತೆಗಿದ್ದವರನ್ನೂ ಬೆಳೆಸಿದ ರಾಮಸ್ವಾಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದುಕಿದ್ದರೆ ಹೀಗೆ ಬದುಕಬೇಕು ಎಂದು ತೋರಿಸಿದ ಎಸ್.ಆರ್. ರಾಮಸ್ವಾಮಿ ಅವರು ತಾವು ಬೆಳೆದು ತಮ್ಮರನ್ನು ಬೆಳೆಸಿದರು' ಎಂದು ಸಾಹಿತಿ ಟಿ.ವಿ.ವೆಂಕಟಾಚಲಶಾಸ್ತ್ರಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಶುಕ್ರವಾರ ಕೇಶವ ಶಿಲ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಎಸ್.ಆರ್.ರಾಮಸ್ವಾಮಿ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ರಾಮಸ್ವಾಮಿ ಅವರ ವ್ಯಕ್ತಿತ್ವ ತುಂಬಾ ಆಳವಾದದ್ದು. ಅವರಲ್ಲಿನ ಕೌಶಲ, ವಿದ್ವತ್ತು, ವೈಚಾರಿಕ ಮನೋಭಾವ, ಸಂಘಟನಾ ಮನೋಭಾವ ಅವರ ಬೆಳವಣಿಗೆಗೆ ದಾರಿಯಾಯಿತು. ಸಮಾಜದ ಏಳಿಗೆಗೆ ಅಲ್ಲಿನ ಬುದ್ಧಿಜೀವಿಗಳ ಕೊಡುಗೆ ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ಇವರನ್ನು ನೋಡಿ ಕಲಿಯಬಹುದಿತ್ತು' ಎಂದರು.

ಶತಾವಧಾನಿ ಆರ್ ಗಣೇಶ್ ಮಾತನಾಡಿ, 'ರಾಮಸ್ವಾಮಿ ಅವರು ಯಾವುದೇ ನಿರೀಕ್ಷೆ ಇಟ್ಟುಕೊಳ್ಳದೇ ಎಲ್ಲರಿಗೂ ಪ್ರೀತಿ ಹಂಚುತ್ತಿದ್ದರು. ಜೊತೆಗೆ ಅವರಲ್ಲಿದ್ದ ದಕ್ಷತೆ, ಪ್ರಾಮಾಣಿಕತೆ ಅವರ ವ್ಯಕ್ತಿತ್ವದ ಇನ್ನೊಂದು ಮುಖ. ಯಾವ ಕೆಲಸ ಹಾಗೂ ಯಾರನ್ನೂ ನಿಕೃಷ್ಟವಾಗಿ ನೋಡಿದವರಲ್ಲ. ಇದರಿಂದಲೇ ದೊಡ್ಡದಾಗಿ ಬೆಳೆದರು' ಎಂದರು.

'ರಾಮಸ್ವಾಮಿ ಅವರನ್ನು ಗೌರವಿಸಿ, ನೆನೆಯುವುದರ ಜೊತೆಗೆ ಅವರಂತಹ ವ್ಯಕ್ತಿತ್ವ ಎಲ್ಲಾ ಕಾಲಕ್ಕೂ ರೂಪುಗೊಳ್ಳಲು ಯುವಜನರನ್ನು ಪ್ರೇರೇಪಿಸಬೇಕು' ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹ ಸರ ಕಾರ್ಯನಿರ್ವಾಹಕ ಸಿ.ಆರ್. ಮುಕುಂದ ಮಾತನಾಡಿ, 'ರಾಮಸ್ವಾಮಿ ಅವರು ಹೊರ ಜಗತ್ತಿಗೆ ಲೇಖಕ, ಚಿಂತಕರಾಗಿದ್ದರೂ ಸಂಘದಲ್ಲಿ ಅವರು ಆದರ್ಶ ಕಾರ್ಯಕರ್ತರಾಗಿದ್ದರು. ಸ್ವಯಂಪ್ರೇರಿತರಾಗಿ ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ತೊಡಗಿಕೊಂಡರು' ಎಂದು ತಿಳಿಸಿದರು.

'ಸಂಘಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ತಮ್ಮ ವೈಚಾರಿಕತೆ ಮೂಲಕ ಸಮಾಜ ಹಾಗೂ ಹೊರ ಜಗತ್ತಿಗೆ ಅರ್ಥ ಮಾಡಿಸುವ ಕೆಲಸ ಮಾಡಿದರು. ಯಾವುದಕ್ಕೂ ಅಪೇಕ್ಷೆ ಪಡದೇ ನಿರಪೇಕ್ಷಿತರಾಗಿ ಬದುಕುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟರು' ಎಂದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಎಸ್‌ ಆರ್‌ ರಾಮಸ್ವಾಮಿ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಶತಾವಧಾನಿ ಆರ್‌ ಗಣೇಶ್‌, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಸಿ. ಆರ್‌, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯದರ್ಶಿ ವಿ. ನಾಗರಾಜ್‌, ಲೇಖಕ ಟಿ. ವಿ. ವೆಂಕಟಾಚಲ ಶಾಸ್ತ್ರಿ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ. ಪಿ. ಕುಮಾರ್ ಅವರು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಕೆಲಸ ನನ್ನದು ಸಂಬಳ ಅವರದು!

ಕಷ್ಟಪಟ್ಟು ಓದಿ, ಕೆಲಸ ಗಿಟ್ಟಿಸಿ, ಕೈತುಂಬಾ ಸಂಬಳ ಪಡೆಯುತ್ತಿರುವ ನಮ್ಮ ನಡುವಿನ ಎಷ್ಟು ಮಹಿಳೆಯರಿಗೆ ಆ ಹಣವನ್ನು ತಮ್ಮಿಷ್ಟದಂತೆ ಖರ್ಚು ಮಾಡುವ ಸ್ವಾತಂತ್ರ್ಯ ಇದೆ? ಬಹುತೇಕರಿಗೆ ಅಂತಹ ಸ್ವಾತಂತ್ರ್ಯ ಇಲ್ಲ ಎನ್ನುತ್ತದೆ, ಬೆಂಗಳೂರಿನ ಇಬ್ಬರು ಅಧ್ಯಾಪಕಿಯರು ನಡೆಸಿರುವ ಸಮೀಕ್ಷೆಯ ವರದಿ!

• ದೀಕ್ಷಾ ಜೆ., ಸ್ಮಿತಾ ಫಿಲಿಪ್

ಯಶೋದಾ ಶಿಕ್ಷಣ ಸಂಸ್ಥೆಯೊಂದರಲ್ಲಿ ಸಹಾಯಕ ಪ್ರಾಧ್ಯಾಪಕಿ. ಜೀವನದಲ್ಲಿ ಅಂದುಕೊಂಡಿದ್ದನ್ನು ಸಾಧಿಸಿದ ಖುಷಿ ಅವರದು. ಒಳ್ಳೆಯ ವೇತನವೂ ಇದೆ. ಆದರೆ, ತಾವು ದುಡಿದ ಹಣವನ್ನು ಖರ್ಚು ಮಾಡಲು ಹಲವಾರು ತಕರಾರು. ಹಣದ ವಿಚಾರದಲ್ಲಿ ಬಹುಪಾಲು ನಿರ್ಧಾರವನ್ನು ಅವರ ಪತಿಯೇ ತೆಗೆದುಕೊಳ್ಳುತ್ತಾರೆ. ಪ್ರಶ್ನಿಸಲು ಹೋದರೆ, ಮನೆಯವರ ಚುಚ್ಚುಮಾತಿನ ಜೊತೆಗೆ ಹಿಂಸೆಯನ್ನೂ ಅನುಭವಿಸಬೇಕಾದ ಪರಿಸ್ಥಿತಿ. ವೃತ್ತಿಗೆ ಸೇರಿ ದಶಕ ಕಳೆದರೂ ಪರಿಸ್ಥಿತಿ ಮಾತ್ರ ಬದಲಾಗಿಲ್ಲ.

ಇದು ಯಶೋದಾ ಒಬ್ಬರ ಕಥೆಯಲ್ಲ. ಹಲವು ಸವಾಲುಗಳ ಮಧ್ಯೆಯೇ ವೃತ್ತಿ ಬದುಕು ಕಟ್ಟಿಕೊಂಡಿರುವ ಎಷ್ಟೋ ಮಹಿಳೆಯರಿಗೆ, ಹಣದ ಖರ್ಚಿನ ವಿಚಾರದಲ್ಲಿ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ.

ಆಧುನಿಕ ಜಗತ್ತಿನಲ್ಲಿ ಮಹಿಳೆಯರು ವೃತ್ತಿಪರವಾಗಿ ಮತ್ತು ಆರ್ಥಿಕವಾಗಿ ಅಭೂತಪೂರ್ವ ಸಾಧನೆ ಮಾಡುತ್ತಿದ್ದಾರೆ; ಕೈತುಂಬಾ ಸಂಬಳ, ಉನ್ನತ ಹುದ್ದೆ ತಂದುಕೊಡುವ ಆರ್ಥಿಕ ಸ್ವಾವಲಂಬನೆ ಮಹಿಳೆಯರನ್ನು ಸಬಲೀಕರಣದತ್ತ ಕೊಂಡೊಯ್ಯುತ್ತದೆ ಎಂಬುದು ಸಾರ್ವತ್ರಿಕ ನಂಬಿಕೆ. ಆದರೆ, ಕೆಲ ದಿನಗಳ ಹಿಂದೆ ನಾವು ನಡೆಸಿದ 'ಸಬಲೆ, ಆದರೆ ಶೋಷಿತೆ' (ಎಂಪವರ್ಡ್ ಬಟ್ ಎಕ್ಸ್‌ಪ್ಲಾಯಿಟೆಡ್) ಎಂಬ ಸಂಶೋಧನಾ ವರದಿಯು ಈ ನಂಬಿಕೆಯನ್ನೇ ಪ್ರಶ್ನಿಸುವಂತೆ ಮಾಡಿದೆ. ಉದ್ಯೋಗಸ್ಥ ಮಹಿಳೆಯರು ಕಚೇರಿಯ ಒತ್ತಡವನ್ನಷ್ಟೇ ಅಲ್ಲ, ಮನೆಯ ನಾಲ್ಕು ಗೋಡೆಗಳ ಮಧ್ಯೆ ನಡೆಯುವ 'ಅದೃಶ್ಯ' ಆರ್ಥಿಕ ದೌರ್ಜನ್ಯವನ್ನೂ ಎದುರಿಸುತ್ತಿದ್ದಾರೆ ಎಂದು ಈ ವರದಿ ಎಚ್ಚರಿಸಿದೆ. ಸಾಮಾನ್ಯವಾಗಿ ಕೌಟುಂಬಿಕ ಹಿಂಸೆ ಎಂದರೆ ದೈಹಿಕ ಅಥವಾ ಮಾನಸಿಕ ಕಿರುಕುಳ ಎಂಬ ಭಾವನೆ ನಮ್ಮಲ್ಲಿದೆ. ಆದರೆ ಆರ್ಥಿಕ ಹಕ್ಕುಗಳನ್ನು ಕಸಿದುಕೊಳ್ಳುವುದು ಕೂಡ ಅಷ್ಟೇ ಭೀಕರವಾದ ಹಿಂಸೆ. ಈ ಸಮೀಕ್ಷೆಯು ವಿಶೇಷವಾಗಿ 25ರಿಂದ 40 ವರ್ಷ ವಯಸ್ಸಿನ ಮಹಿಳೆಯರನ್ನು ಒಳಗೊಂಡಿತ್ತು. ಈ ಮಹಿಳೆಯರು ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿ ಇದ್ದರೂ, ಮನೆಯಲ್ಲಿ ಅವರ ಆರ್ಥಿಕ ನಿರ್ಧಾರಗಳ ಮೇಲೆ ಕುಟುಂಬದ ಸದಸ್ಯರು ಅಥವಾ ಸಂಗಾತಿ ಹೇಗೆ ನಿಯಂತ್ರಣ ಸಾಧಿಸಿರುತ್ತಾರೆ ಎಂಬುದನ್ನು ಅಧ್ಯಯನ ಮಾಡುವುದು ಸಮೀಕ್ಷೆಯ ಹಿನ್ನೆಲೆ ಮತ್ತು ಉದ್ದೇಶವಾಗಿತ್ತು.

ಆರ್ಥಿಕ ದೌರ್ಜನ್ಯದ ವಿವಿಧ ಮುಖಗಳು

ಈ ಅಧ್ಯಯನದ ಪ್ರಕಾರ, ಆರ್ಥಿಕ ದೌರ್ಜನ್ಯವು ಬರೀ ಹಣವನ್ನು ಕಸಿದುಕೊಳ್ಳುವುದಕ್ಕೆ ಸೀಮಿತವಾಗಿಲ್ಲ; ಇದು ಹಲವು ಸೂಕ್ಷ್ಮ ಹಂತಗಳಲ್ಲಿ ನಡೆಯುತ್ತದೆ:

1 **ಹಣಕಾಸಿನ ಮೇಲೆ ಕಣ್ಗಾವಲು:** ಮಹಿಳೆಯು ಎಷ್ಟು ಖರ್ಚು ಮಾಡುತ್ತಾಳೆ, ಎಲ್ಲಿಗೆ ಹಣ ವರ್ಗಾಯಿಸುತ್ತಾಳೆ ಎಂಬುದರ ಮೇಲೆ ಮನೆಯವರು ನಿರಂತರ ನಿಗಾ ಇಟ್ಟಿರುತ್ತಾರೆ. ಆಕೆಯ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ಅವಳ ಅನುಮತಿ ಇಲ್ಲದೆ ಪರಿಶೀಲಿಸುವುದು ಸಾಮಾನ್ಯವಾಗಿರುತ್ತದೆ.

2 **ನಿರ್ಧಾರದ ಹಕ್ಕಿನ ಹರಣ:** ಮನೆಯ ದೊಡ್ಡ ಆರ್ಥಿಕ ಹೂಡಿಕೆಗಳು ಅಥವಾ ಆಸ್ತಿ ಖರೀದಿಗಳಲ್ಲಿ ಮಹಿಳೆಯ ಹಣವನ್ನು ಬಳಸಿಕೊಂಡರೂ ಅವುಗಳಿಗೆ ಸಂಬಂಧಿಸಿದ ಅಂತಿಮ ನಿರ್ಧಾರಗಳಲ್ಲಿ ಆಕೆಗೆ ಯಾವುದೇ ಸ್ಥಾನ ಇರುವುದಿಲ್ಲ.

3 **ಅಗತ್ಯಗಳಿಗೂ ಸಂಕಟ:** ಸ್ವಂತ ದುಡಿಮೆ ಇದ್ದರೂ ಬಟ್ಟೆ, ಆರೋಗ್ಯ ಅಥವಾ ಸಣ್ಣ ವೈಯಕ್ತಿಕ ಅಗತ್ಯಗಳಿಗೂ ಹಣ ಖರ್ಚು ಮಾಡುವ ಮೊದಲು ಮನೆಯವರ ಅನುಮತಿಗಾಗಿ ಕಾಯಬೇಕಾದ ಅನಿವಾರ್ಯ ಸ್ಥಿತಿ ಅನೇಕ ಮಹಿಳೆಯರದು.

4 **ಭಾವನಾತ್ಮಕ ಬ್ಲ್ಯಾಕ್‌ಮೇಲ್:** 'ಕುಟುಂಬದ ಹಿತದೃಷ್ಟಿ' ಅಥವಾ 'ಮಕ್ಕಳ ಭವಿಷ್ಯ' ಎಂಬ ಹೆಸರಿನಲ್ಲಿ ಮಹಿಳೆಯ ಸಂಪೂರ್ಣ ಸಂಬಳವನ್ನು ಕಸಿದುಕೊಳ್ಳುವುದು ಅಥವಾ ಆಕೆಯನ್ನು ಆರ್ಥಿಕವಾಗಿ ಪರಾವಲಂಬಿಯನ್ನಾಗಿ ಮಾಡುವುದು ಕಂಡುಬಂದಿದೆ.

ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಹಣಕಾಸಿನ ಅಧಿಕಾರವು ಸಾಂಪ್ರದಾಯಿಕವಾಗಿ ಪುರುಷರ ಅಥವಾ ಮನೆಯ ಹಿರಿಯರ ಕೈಯಲ್ಲಿ ಇರುತ್ತದೆ. ಉದ್ಯೋಗಸ್ಥ ಮಹಿಳೆಯು ಈ ಪದ್ಧತಿಯನ್ನು ಪ್ರಶ್ನಿಸಿದಾಗ, ಅದನ್ನು 'ಸಂಪ್ರದಾಯ ವಿರೋಧಿ' ಎಂದು ಬಿಂಬಿಸಲಾಗುತ್ತದೆ. ಇಂತಹ ವಾತಾವರಣವು ಮಹಿಳೆಯರಲ್ಲಿ ತೀವ್ರ ಮಾನಸಿಕ ಒತ್ತಡವನ್ನು ಉಂಟುಮಾಡುತ್ತದೆ. ತಾನು ಸಂಪಾದಿಸಿದರೂ ತನಗಾಗಿ ಏನನ್ನೂ ಮಾಡಿಕೊಳ್ಳಲಾಗದ ಅಸಹಾಯಕತೆ ಆಕೆಯನ್ನು ಖಿನ್ನತೆಗೆ ದೂಡುತ್ತದೆ. ಇದು ಬರೀ ವೈಯಕ್ತಿಕ ಸಮಸ್ಯೆಯಲ್ಲ, ಬದಲಾಗಿ ಮಹಿಳೆಯ ವೃತ್ತಿಜೀವನದ ದಕ್ಷತೆಯ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

ಸಮೀಕ್ಷೆಯು ಸ್ಪಷ್ಟಪಡಿಸಿರುವಂತೆ, ಆರ್ಥಿಕ ಸಬಲೀಕರಣವು ಉದ್ಯೋಗ ಪಡೆಯುವುದರಿಂದಷ್ಟೇ ಪೂರ್ಣಗೊಳ್ಳುವುದಿಲ್ಲ. ಬದಲಾಗಿ, ಗಳಿಸಿದ ಹಣದ ಮೇಲೆ ಪೂರ್ಣ ಅಧಿಕಾರ ಹೊಂದಿದಾಗ ಮಾತ್ರ ಮಹಿಳೆ ನಿಜವಾದ ಸಬಲೆಯಾಗುತ್ತಾಳೆ. ಸರ್ಕಾರಗಳು ಮತ್ತು ಸಂಘ-ಸಂಸ್ಥೆಗಳು ಆರ್ಥಿಕ ದೌರ್ಜನ್ಯವನ್ನು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಇನ್ನಷ್ಟು ಗಂಭೀರವಾಗಿ ಪರಿಗಣಿಸಬೇಕು. ಕೆಲಸದ ಸ್ಥಳಗಳಲ್ಲಿ ಮತ್ತು ಸಮಾಜದಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ. ಮಾನಸಿಕ ಆರೋಗ್ಯ ತಜ್ಞರು ಇಂತಹ ಮಹಿಳೆಯರಿಗೆ ಆರ್ಥಿಕ ಸಾಕ್ಷರತೆ ಮತ್ತು ಆತ್ಮವಿಶ್ವಾಸವನ್ನು ತುಂಬುವ ಕೆಲಸ ಮಾಡಬೇಕಾಗಿದೆ.

ಅಂತಿಮವಾಗಿ, ಈ ವರದಿಯು ಸಮಾಜಕ್ಕೆ ಒಂದು ಕನ್ನಡಿ ಹಿಡಿದಿದೆ. ಮಹಿಳೆಯ ಕೈಗೆ ಹಣ ನೀಡಿದರೆ ಸಾಲದು, ಆ ಹಣವನ್ನು ಬಳಸುವ ಗೌರವ ಮತ್ತು ಸ್ವಾತಂತ್ರ್ಯವನ್ನೂ ನೀಡಬೇಕಿದೆ ಎಂಬುದನ್ನು ಒತ್ತಿ ಹೇಳಿದೆ.

ಲೇಖಕಿಯರು: ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಸೈಕಲಾಜಿಕಲ್ ಸೈನ್ಸಸ್, ಕ್ರೈಸ್ಟ್ ವಿಶ್ವವಿದ್ಯಾಲಯ, ಬೆಂಗಳೂರು

ಆಕೆ ಸಿಇಒ, ಕೈಯಲ್ಲಿ ನಯಾಪೈಸೆಯಿಲ್ಲ!

ಅವರು ಒಂದು ದೊಡ್ಡ ಕಂಪನಿಯ ಸಿಇಒ. ಕೆಲಸದಲ್ಲಿ ಕಟ್ಟುನಿಟ್ಟು, ಸಿಬ್ಬಂದಿಯೊಂದಿಗೆ ಸೌಹಾರ್ದದ ನಡವಳಿಕೆ. ಅಧೀನ ಸಿಬ್ಬಂದಿಗೆ ಆಕೆಯ ಬಗ್ಗೆ ವಿಶೇಷ ಗೌರವ. ಮನೆಯಿಂದ ಕಚೇರಿಗೆ ಕರೆತರಲು, ವಾಪಸ್ ಬಿಡಲು ಕಚೇರಿಯಿಂದ ಕಾರಿನ ವ್ಯವಸ್ಥೆ. ಒಮ್ಮೆ ಮುಖ್ಯವಾದ ಮೀಟಿಂಗ್ ಮುಗಿಸಿ ಕಚೇರಿಯಿಂದ ಹೊರಡುವಷ್ಟರಲ್ಲಿ ತಡರಾತ್ರಿ. ಅರ್ಧದಾರಿಯಲ್ಲಿ ಕಾರು ಕೈಕೊಡುತ್ತದೆ. ಡ್ರೈವರ್ ಹೇಳುತ್ತಾನೆ 'ಮೇಡಂ, ಇದು ರಿಪೇರಿ ಆಗುವವರೆಗೆ ಕಾಯುವುದು ಬೇಡ. ನೀವು ಕ್ಯಾಬ್ ಮಾಡಿಕೊಂಡು ಹೊರಟುಬಿಡಿ'. ಆ ಮಾತು ಕೇಳಿ ಸಿಇಒ ಬೆಚ್ಚಿಬೀಳುತ್ತಾರೆ. ಏನು ಹೇಳುವುದೆಂದು ತೋಚದೆ ತಡಬಡಾಯಿಸುತ್ತಾರೆ. ಏಕೆಂದರೆ, ಕ್ಯಾಬ್ ಬುಕ್ ಮಾಡಲು ಆಕೆಯ ಬಳಿ ಹಣವೇ ಇರುವುದಿಲ್ಲ!

'ಹೇಗಿದ್ದರೂ ಆಫೀಸ್ ಕ್ಯಾಬ್‌ನಲ್ಲಿ ತಾನೇ ನೀನು ಬರುವುದು, ಇನ್ನು ಊಟಕ್ಕೆ ಡಬ್ಬಿ ಕೊಂಡೋಗಿರುತ್ತಿ. ಮತ್ತೆ ನಿನಗೆ ದುಡ್ಡು ಯಾಕೆ ಬೇಕು' ಎನ್ನುವ ಪತಿ, ಸಂಬಳ ಬರುತ್ತಲೇ ಬಿಡಿಗಾಸೂ ಬಿಡದಂತೆ ವಸೂಲು ಮಾಡಿರುತ್ತಾನೆ. ಆಕೆಯ ಪಾಸ್‌ಬುಕ್, ಎಟಿಎಂ ಕಾರ್ಡ್ ಎಲ್ಲದರ ಬಳಕೆದಾರ ಅವನೇ. ಹೀಗಿರುವಾಗ ಕ್ಯಾಬ್ ಡ್ರೈವರ್‌ಗೆ ಕೊಡಲು ಅವರಿಗೆ ಎಲ್ಲಿಂದ ತಾನೇ ದುಡ್ಡು ಬರಬೇಕು? ಹೆಸರಿಗೆ ದೊಡ್ಡ ಕಂಪನಿಯ ಉನ್ನತ ಅಧಿಕಾರಿ, ಕೈತುಂಬಾ ಸಂಬಳ, ಆದರೆ ಖರ್ಚು ಮಾಡುವ ಸ್ವಾತಂತ್ರ್ಯ ಮಾತ್ರ ಒಂದಿನಿತೂ ಇಲ್ಲ.

ಇದು ಯಾವುದೋ ಚರ್ವಿತಚರ್ವಣ ಕತೆಯಲ್ಲ. ಮಾಧ್ಯಮವೊಂದರಲ್ಲಿ ಪ್ರಕಟವಾಗಿದ್ದ ನೈಜ ಪ್ರಕರಣ. ಇದನ್ನು ಓದಿದ ದೀಕ್ಷಾ ಮತ್ತು ಸ್ಮಿತಾ ಫಿಲಿಪ್ ಅವರ ಮನ ಕಲಕಿತು. ಇಂತಹ ಎಷ್ಟೋ ಹೆಣ್ಣುಮಕ್ಕಳು ನಮ್ಮ ನಡುವೆ ಇರಬಹುದು ಎಂಬ ಅವರ ಕಳಕಳಿಯೇ ಆ ಬಗ್ಗೆ ಸಮೀಕ್ಷೆ ನಡೆಸಲು ಅವರನ್ನು ಪ್ರೇರೇಪಿಸಿತು.

ನೀವೇ ಪರೀಕ್ಷೆ ಮಾಡಿಕೊಳ್ಳಿ

ಈ ಸಮೀಕ್ಷೆಯಲ್ಲಿ ಆರ್ಥಿಕ ದೌರ್ಜನ್ಯ ಮಾಪನ (ಫೈನಾನ್ಷಿಯಲ್ ಅಬ್ಯೂಸ್ ಸ್ಕೇಲ್) ಮಹತ್ವದ ಪಾತ್ರ ವಹಿಸಿದೆ. ಅಂದರೆ, ಆರ್ಥಿಕ ದೌರ್ಜನ್ಯವನ್ನು ಅಳೆಯಲು ಇಲ್ಲಿ 22 ಅಂಶಗಳ ಹೊಸ ಮಾಪನವನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳಲಾಗಿದೆ. ಈ ಮಾಪನದ ಮೂಲಕ ಮಹಿಳೆಯರು, ತಾವು ಸಹ ಆರ್ಥಿಕವಾಗಿ ಶೋಷಣೆಗೆ ಒಳಗಾಗುತ್ತಿದ್ದೇವೆಯೇ ಎಂಬುದನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಬಹುದು. ವೈಯಕ್ತಿಕ ಬ್ಯಾಂಕ್ ಖಾತೆಗಳ ನಿರ್ವಹಣೆ, ಹೂಡಿಕೆಯ ಸ್ವಾತಂತ್ರ್ಯ ಮತ್ತು ಆರ್ಥಿಕ ಗೋಪ್ಯತೆಯನ್ನು ಕಾಪಾಡಿಕೊಳ್ಳುವುದು ಮಹಿಳೆಯ ಹಕ್ಕು ಎಂದು ಈ ಮಾಪನ ಒತ್ತಿಹೇಳುತ್ತದೆ. ಮಾಪನ ಒಳಗೊಂಡಿದ್ದ ಪ್ರಶ್ನೆಗಳು ಹೀಗಿವೆ:

- ನನ್ನ ಕುಟುಂಬದ ಸದಸ್ಯರು ನನ್ನ ಖರ್ಚು–ವೆಚ್ಚ ಮುಂದಿಟ್ಟು ನನ್ನನ್ನು ನಿಯಂತ್ರಿಸುತ್ತಾರೆ.
- ಹಣಕಾಸಿಗೆ ಸಂಬಂಧಪಟ್ಟಂತೆ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯ ನನಗಿಲ್ಲ.
- ಮನೆಗೆ ಸಂಬಂಧಪಟ್ಟ ಬಹುತೇಕ ಹಣಕಾಸು ನಿರ್ವಹಣೆಯು ಮನೆಯ ಸದಸ್ಯರದೇ ಆಗಿರುತ್ತದೆ.
- ನನ್ನ ಮನೆಗೆ ಸಂಬಂಧಿಸಿದ ಎಲ್ಲ ಬಗೆಯ ಹಣಕಾಸು ವ್ಯವಹಾರಗಳೂ ನನ್ನ ಗಮನಕ್ಕೆ ಬಂದಿರುವುದಿಲ್ಲ.
- ನನ್ನ ದುಡಿಮೆಯ ಹಣವನ್ನು ನನಗೆ ಬೇಕಾದಂತೆ ಖರ್ಚು ಮಾಡುವ ಸ್ವಾತಂತ್ರ್ಯ ನನಗಿಲ್ಲ.
- ಅಗತ್ಯ ಬಂದಾಗ ನನಗೆ ಆರ್ಥಿಕ ಬೆಂಬಲ ಸಿಗುವುದಿಲ್ಲ.
- ನನ್ನ ದುಡಿಮೆಯ ಹೆಚ್ಚಿನ ಹಣವನ್ನು ಮನೆಯ ಖರ್ಚಿಗೆ ಕೊಡುವಂತೆ ನನ್ನ ಮೇಲೆ ಒತ್ತಡ ಹೇರಲಾಗುತ್ತದೆ.
- ನನ್ನ ಕ್ರೆಡಿಟ್ ಕಾರ್ಡ್ ಮತ್ತು ಬ್ಯಾಂಕ್ ಅಕೌಂಟ್‌ಗಳನ್ನು ಬಳಸುವುದರ ಮೇಲೆ ನನ್ನ ಕುಟುಂಬದ ಸದಸ್ಯರು ನಿರ್ಬಂಧ ಹೇರುತ್ತಾರೆ.
- ನನಗೆ ಕೈತುಂಬಾ ಸಂಬಳ ಬರುತ್ತಿದ್ದರೂ ಆರ್ಥಿಕವಾಗಿ ನಾನು ಕುಟುಂಬದ ಸದಸ್ಯರ ಮೇಲೆ ಅವಲಂಬಿತ ಆಗಿದ್ದೇನೆ ಎಂಬ ಭಾವನೆ ನನಗಿದೆ.
- ನನ್ನನ್ನು ನಿಯಂತ್ರಿಸಲು ನನ್ನ ಮನೆಯವರು ಹಣವನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಾರೆ.
- ವೈಯಕ್ತಿಕ ಗುರಿಗಳು ಮತ್ತು ಆಸೆ ಆಕಾಂಕ್ಷೆಗಳಿಗಾಗಿ ಹಣ ಉಳಿಸಲು ನನಗೆ ಸಾಧ್ಯವಾಗುತ್ತಿಲ್ಲ.
- ನನ್ನ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನನ್ನ ಅನುಮತಿಯಿಲ್ಲದೆ ಕುಟುಂಬದ ಸದಸ್ಯರು ಆಗಾಗ್ಗೆ ಪರಿಶೀಲಿಸುತ್ತಾರೆ.
- ನನ್ನ ಸ್ವಂತ ಹೂಡಿಕೆಗಳನ್ನು ನಿರ್ವಹಿಸಲು ನನಗೆ ಅನುಮತಿ ಇಲ್ಲ.
- ನನಗಾಗಿ ನಾನು ಖರ್ಚು ಮಾಡಿಕೊಂಡಾಗಲೆಲ್ಲಾ ಇತರರು ಈ ಬಗ್ಗೆ ನನ್ನನ್ನು ಪ್ರಶ್ನೆ ಮಾಡುತ್ತಾರೆ.
- ಕೆಲಸ ಮಾಡಿ ಹೆಚ್ಚು ಹಣ ಗಳಿಸುವಂತೆ ಕುಟುಂಬದವರು ನನ್ನ ಮೇಲೆ ಒತ್ತಡ ಹೇರುತ್ತಾರೆ.
- ನನ್ನ ಹಣಕಾಸು ವ್ಯವಹಾರಗಳನ್ನು ನಿರ್ವಹಿಸಲು ನನಗೆ ಅವಕಾಶ ಇಲ್ಲ.
- ನನ್ನ ಕುಟುಂಬ ಸದಸ್ಯರ ವಿಪರೀತ ಖರ್ಚು ಮಾಡುವ ಗುಣದಿಂದ ನಾನು ಆರ್ಥಿಕ ಸಂಕಷ್ಟ ಎದುರಿಸಿದ ಸಂದರ್ಭಗಳು ಇವೆ.
- ಹಣಕಾಸಿಗೆ ಸಂಬಂಧಿಸಿದ ದಾಖಲೆಗಳಿಗೆ ನನ್ನ ಇಚ್ಛೆಗೆ ವಿರುದ್ಧವಾಗಿ ಸಹಿ ಹಾಕಲು ಕುಟುಂಬದ ಸದಸ್ಯರು ನನ್ನ ಮೇಲೆ ಒತ್ತಡ ಹೇರಿದ್ದಾರೆ.
- ನನ್ನ ಆತ್ಮವಿಶ್ವಾಸ ಕುಗ್ಗಿಸುವ ಸಲುವಾಗಿ ಕುಟುಂಬದ ಸದಸ್ಯರು ನನ್ನ ಆದಾಯದ ಮೇಲೆ ನಿಯಂತ್ರಣ ಹೊಂದಿದ್ದಾರೆ.
- ಮೂಲಭೂತ ಅವಶ್ಯಕತೆಗಳಿಗೆ ಹಣ ವ್ಯಯಿಸಲು ಸಹ ನಾನು ಅನುಮತಿ ಕೇಳಬೇಕಾಗಿದೆ.
- ಹಣಕಾಸಿಗೆ ಸಂಬಂಧಿಸಿದ ವಿಷಯಗಳನ್ನು ನನ್ನ ಕುಟುಂಬದವರೊಟ್ಟಿಗೆ ಮುಕ್ತವಾಗಿ ಮಾತನಾಡಲು ನಾನು ಹಿಂಜರಿಯುತ್ತೇನೆ.
- ನನ್ನ ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ನನ್ನ ಕುಟುಂಬದ ಸದಸ್ಯರು ಬಳಸುತ್ತಾರೆ ಮತ್ತು ನಿರ್ವಹಿಸುತ್ತಾರೆ.

ಪೊಳಜ್ಯ, ಪೋಡಿಯ ಮೋಡಿ

ರಸಾಸ್ವಾದ

ಬಸಳೆಸೊಪ್ಪಿನ ಪೋಡಿ, ಕುಟ್ಟವಲಕ್ಕಿ, ಕಾಳುಮೆಣಸಿನ ಹಾಲುಸಾರು, ಜಜ್ಜು ಮೂಲಂಗಿ ಗೊಜ್ಜು, ಭೂತ ಕೊದ್ದಿಲು, ಬೋಳು ಹುಳಿ, ಕಂಚಿಕಾಯಿ ನೀರ್‌ಗೊಜ್ಜು, ಸಮಾರಾಧನೆ ಕೂಟು, ಬ್ರಾಹ್ಮಣರ ಶೈಲಿಯ ಮುದ್ದಿಪಲ್ಯ, ಬಾಳೆಕಾಯಿ ನೀರ್ ಪೊಳಜ್ಯ, ಮಾವಿನಮಿಡಿ ಸಾರುಬೇಳೆ, ಜೀಗುಜ್ಜೆ ಪೋಡಿ, ಗೆಣಸೆಲೆ, ಬೆಲ್ಲದ ಗುಡನ್ನ...

ಅರೆ! ಇವನ್ನೆಲ್ಲ ಎಲ್ಲೋ ಕೇಳಿದಂತಿದೆಯೇ? ಕೇಳಿ ಮರೆತುಬಿಟ್ಟಿದ್ದೀರಾ? ಹೆಸರು ನೆನಪಿದ್ದರೂ ಮಾಡೋದು ಹೇಗೆ ಎಂದು ತಿಳಿದಿಲ್ಲವೇ? ಹಾಗಿದ್ದರೆ 'ಸಂತೃಪ್ತಿ ಕಿಚನ್' ಯೂಟ್ಯೂಬ್ ಚಾನೆಲ್‌ಗೆ ಭೇಟಿ ಕೊಡಿ. ಅಲ್ಲಿ ಪವಿತ್ರಾ ಹಿರೇಗಂಗೆ ಅವರು ಮರೆತುಹೋದ ಸಾಂಪ್ರದಾಯಿಕ ಅಡುಗೆಗಳ ದರ್ಶನ ಮಾಡಿಸುತ್ತಾರೆ. ಮೃದು ಧ್ವನಿಯಲ್ಲಿ, ಸ್ಪಷ್ಟ ಕನ್ನಡದಲ್ಲಿ, ಅಷ್ಟೇ ನಾಜೂಕಾಗಿ ತಮ್ಮ ಚಾನೆಲ್‌ಗೆ ಆಹ್ವಾನವೀಯುವ ಪವಿತ್ರಾ, ಅನೇಕ ಸಾಂಪ್ರದಾಯಿಕ ಅಡುಗೆಗಳನ್ನು ನಮ್ಮ ಮುಂದೆ ಹರವಿದ್ದಾರೆ. ಅಜ್ಜಿ, ಅಮ್ಮಂದಿರ ಕಾಲಕ್ಕೆ ಕೊನೆಗೊಂಡಿರುವ ಖಾದ್ಯಗಳನ್ನು ಮತ್ತೆ ಮೆಲುಕು ಹಾಕುತ್ತ, ಅವುಗಳನ್ನು ಜೀವಂತವಾಗಿ ಇರಿಸುವ ಕಾಯಕದಲ್ಲಿ ನಿರತರಾಗಿದ್ದಾರೆ.

ಇವರು ಹೇಳಿಕೊಟ್ಟಿರುವ ಬಾಳೆಹಣ್ಣಿನ ಶಾವಿಗೆ, ಅರಸಿನ ಎಲೆಯ ಗೆಣಸೆಲೆ, ಅತ್ರಸ, ಹಲಸಿನ ಹಣ್ಣಿನ ಕಡುಬು, ಗೊಡ್ಡು ಖಾರ, ಸಿಹಿ ಗೋಲಿ ಕಡುಬು, ಮುಷ್ಟಿ ಕಡುಬು, ನಿಂಬೆ ಗೊಜ್ಜು, ಕೆಂಡದಲ್ಲಿ ಸುಟ್ಟ ಬಾಳೆಕಾಯಿ ಚಟ್ನಿ, ಮೆಂತೆಹಿಟ್ಟಿನ ಗೊಜ್ಜು... ಹೀಗೆ ಅನೇಕ ಖಾದ್ಯಗಳು ಇಂದಿನ ಯುವಜನರ ಕಿವಿಗೇ ಬಿದ್ದಿರಲಿಕ್ಕಿಲ್ಲ; ಇನ್ನು ಸವಿದಿರುವುದು ದೂರದ ಮಾತೇ ಬಿಡಿ. ಅಂತಹ ಖಾದ್ಯಗಳಿಗೆ ಬೆಳಕು ಹಿಡಿದಿದ್ದಾರೆ ಪವಿತ್ರಾ.

ಪವಿತ್ರಾ ಹಿರೇಗಂಗೆ

ಹವ್ಯಕ ಬ್ರಾಹ್ಮಣ ಶೈಲಿಯ ಖಾದ್ಯಗಳು, ಬಹುಕಾಲ ಮಿಂಚಿ ಮೆಲ್ಲಗೆ ಅಡುಗೆಮನೆಯಿಂದ ಮರೆಯಾಗಿರುವ ಪಾಕಗಳು, ಸುಲಭದಲ್ಲಿ, ಸರಳವಾಗಿ ತಯಾರಿಸುವ ಅಡುಗೆಯ ಬಗೆಗಳನ್ನು ಲಗುಬಗೆಯಲ್ಲಿ ಮಾಡುವುದನ್ನು ಹೇಳಿಕೊಡುತ್ತಾರೆ ಅವರು.

ಮನೆಯಲ್ಲಿ ಇದ್ದುಕೊಂಡೇ ಏನಾದರೂ ಕೆಲಸ ಮಾಡಬೇಕು, ಮನೆಯ ಆರ್ಥಿಕ ಅಗತ್ಯಗಳಿಗೆ ಹೆಗಲು ಕೊಡಬೇಕು ಎಂದು ಕೆಲಸ ಅರಸುತ್ತಿದ್ದ ಪವಿತ್ರಾ ಅವರನ್ನು ಸೆಳೆದದ್ದು ಯೂಟ್ಯೂಬ್. ಕೋವಿಡ್‌ಗೂ ಮುನ್ನ ಯೂಟ್ಯೂಬ್ ಕದ ತಟ್ಟಿದ ಅವರು ಬಗೆಬಗೆಯ ಸಾಂಪ್ರದಾಯಿಕ ರೆಸಿಪಿಗಳನ್ನು ಚಾನೆಲ್ ಮೂಲಕ ಹಂಚಿಕೊಂಡರು. ಯೂಟ್ಯೂಬ್‌ಗಿಂತಲೂ ಫೇಸ್‌ಬುಕ್ ಹೆಚ್ಚು ಜನರನ್ನು ಸೆಳೆಯಲು ಅವರಿಗೆ ಸಹಕರಿಸಿತು. ಈಗ ಯೂಟ್ಯೂಬ್‌ನಲ್ಲಿ 2 ಲಕ್ಷಕ್ಕೂ ಹೆಚ್ಚು ಸಬ್‌ಸ್ಕ್ರೈಬರ್‌ಗಳು ಇದ್ದರೆ, ಫೇಸ್‌ಬುಕ್‌ನಲ್ಲಿ 3 ಲಕ್ಷಕ್ಕೂ ಹೆಚ್ಚು ಫಾಲೋವರ್‌ಗಳು ಇದ್ದಾರೆ.

'ಗೃಹಿಣಿಯರಿಗೆ ಅಡುಗೆ ಮನೆ ಹೊರತಾಗಿ ಸಾಕಷ್ಟು ಕೆಲಸಗಳು ಇರುತ್ತವೆ. ಹಾಗಾಗಿ ಸುಲಭದಲ್ಲಿ, ಥಟ್ಟಂತ ಅಡುಗೆ ಮಾಡಿ ಮುಗಿಸಿದರೆ ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳಬಹುದು' ಎನ್ನುವ ಇಂಗಿತ ಪವಿತ್ರಾ ಅವರದ್ದು. ಆ ದೃಷ್ಟಿಯಿಂದಲೇ ಇವರ ಬಹುತೇಕ ಖಾದ್ಯಗಳು ರೂಪುಗೊಂಡಿವೆ. ಅಜ್ಜಿ, ಅಮ್ಮ, ಅತ್ತೆ ಮಾಡುತ್ತಿದ್ದ, ಈಗ ಬಹುತೇಕ ಮರೆಯಾಗಿರುವ ಖಾದ್ಯಗಳು ಇವರ ಚಾನೆಲ್‌ನಲ್ಲಿ ಪ್ರಾಧಾನ್ಯ ಪಡೆದಿವೆ.

ದಿನವೂ ಸಾಂಬಾರ್ ಮಾಡುವುದು ಗೃಹಿಣಿಯರಿಗೆ ಪ್ರಯಾಸವೇ ಸರಿ. ಬೇಳೆ ಬೇಯಿಸಿ, ಮಸಾಲೆ ರುಬ್ಬಿ ಸಾಂಬಾರ್ ಮಾಡಬೇಕೆಂದರೆ ಬಹುತೇಕರಿಗೆ ತಲೆನೋವಿನ ಸಂಗತಿ. ಅಂತಹವರಿಗೆಂದೇ ಪವಿತ್ರಾ ಸುಲಭದಲ್ಲಿ ತಯಾರಿಸಬಹುದಾದ ಸಾರಿನ ರೆಸಿಪಿಗಳನ್ನು ಹೇಳಿಕೊಟ್ಟಿದ್ದಾರೆ. ಅಲ್ಲದೆ, ಬೇಸಿಗೆಯಲ್ಲಿ ಉದರಕ್ಕೆ ತಂಪನ್ನೀಯುವ ಬಗೆಬಗೆ ತಂಬುಳಿ, ಚಳಿಗಾಲಕ್ಕೆ ಸೂಕ್ತವೆನಿಸುವ ವೈವಿಧ್ಯಮಯ ರಸಂಗಳು... ಹೀಗೆ ಅನ್ನದ ಜೊತೆ ಸವಿಯುವ ಅಡುಗೆ ರೆಸಿಪಿಗಳು ಇಲ್ಲಿ ಹೆಚ್ಚು ಆದ್ಯತೆ ಪಡೆದಿವೆ. ಇನ್ನು ಮಾವಿನಕಾಯಿ, ಬಾಳೆಕಾಯಿ, ಬದನೆಕಾಯಿ, ಜೀಗುಜ್ಜೆ ಬಳಸಿ ಮಾಡುವ ವಿಶೇಷ ಖಾದ್ಯಗಳು ಇವರ ಅಡುಗೆಮನೆಯಲ್ಲಿ ತಯಾರಾಗಿವೆ.

ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರದವರಾದ ಪವಿತ್ರಾ, ಅಪ್ಪನ ಉದ್ಯೋಗ, ಮದುವೆ, ಪತಿಯ ಕೆಲಸದ ನಿಮಿತ್ತ ಹಾಸನ, ಧಾರವಾಡ, ಗೋಕರ್ಣ ಸೇರಿದಂತೆ ಹಲವೆಡೆ ಸುತ್ತಿದ್ದಾರೆ. ಜತೆಗೆ ಅಲ್ಲಿಯ ಖಾದ್ಯಗಳನ್ನೂ ಕಲಿತಿದ್ದಾರೆ. ಹೀಗಾಗಿ, ಇವರ ಚಾನೆಲ್‌ನಲ್ಲಿ ಮಲೆನಾಡಿನ ರೆಸಿಪಿಯೊಟ್ಟಿಗೆ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಕರಾವಳಿ ಭಾಗದ ಖಾದ್ಯಗಳನ್ನೂ ಕಲಿಯುವ ಭಾಗ್ಯ ವೀಕ್ಷಕರದ್ದು. ಇದಲ್ಲದೇ ಇವರು ಅಡುಗೆ ಮನೆಯಲ್ಲಿ ಹಲವು ಪ್ರಯೋಗಗಳಿಗೂ ಇಳಿದಿದ್ದಾರೆ. ಕಲ್ಲಂಗಡಿ ಹಣ್ಣಿನ ಸಿಪ್ಪೆಯಲ್ಲಿ ತಾಲಿಪಟ್ಟು, ಕಬ್ಬಿನಹಾಲಿನಲ್ಲಿ ದೋಸೆ, ನೆಲ್ಲಿಕಾಯಿ ಪುಳಿಯೋಗರೆ, ಹಲಸಿನಹಣ್ಣಿನ ಬನ್ಸ್, ಬೂದುಗುಂಬಳ ದೋಸೆ, ಸ್ಟಫ್ಡ್ ಇಡ್ಲಿ, ಟೊಮೆಟೊ ಇಡ್ಲಿ, ದಾಸವಾಳ ಸೊಪ್ಪಿನ ಇಡ್ಲಿ, ಟೊಮೆಟೊ ಪೂರಿ, ಕಾರ್ನ್ ಕಡುಬು... ಹೀಗೆ ಆರೋಗ್ಯದಾಯಕ ಹೊಸ ಅಡುಗೆಗಳ ಸ್ವಾದವನ್ನೂ ಉಣಬಡಿಸಿದ್ದಾರೆ ಪವಿತ್ರಾ. ಮಲೆನಾಡಿನ ವಿಶೇಷ ಖಾದ್ಯವಾದ ಕಡುಬಿನ ವಿವಿಧಾವಳಿಗಳು ಇವರ ಯೂಟ್ಯೂಬ್ ಅಂಗಳದಲ್ಲಿವೆ.

ಸುಮಾ ಬಿ.

ಬಿಸಿ ಅನ್ನದೊಂದಿಗೆ ತಿಂದು ನೋಡಿ ಅಪ್ಪೇ ಸಾರು

ಮಲೆನಾಡಿನಲ್ಲಿ ತೆರೆಮರೆಗೆ ಸರಿದಿರುವ, ಹವ್ಯಕ ಬ್ರಾಹ್ಮಣರ ಮನೆಗಳಲ್ಲಿ ಈಗಲೂ ಘಮ್ಮೆನ್ನುವ ಮಾವಿನಮಿಡಿ ಸಾರುಬೇಳೆ ಅಥವಾ ಅಪ್ಪೇ ಸಾರನ್ನು ಪವಿತ್ರಾ ನೆನಪಿಸಿದ್ದಾರೆ. ದಿಢೀರ್ ಆಗಿ ಹತ್ತೇ ನಿಮಿಷದಲ್ಲಿ ಈ ಸಾರನ್ನು ಮಾಡಿಕೊಳ್ಳಬಹುದು.

ಹೀಗೆ ಮಾಡಿ: ಐದು ಮಿಡಿ ಉಪ್ಪಿನಕಾಯಿಗಳನ್ನು ತೆಗೆದುಕೊಂಡು, ಮೇಲಿನ ಖಾರವನ್ನು ತೊಳೆದು ಎಲ್ಲವನ್ನೂ ಸಣ್ಣದಾಗಿ ಹೆಚ್ಚಿಕೊಳ್ಳಬೇಕು. ಮಿಡಿಕಾಯಿಯ ಮಧ್ಯದಲ್ಲಿರುವ ಬೀಜವನ್ನು ತೆಗೆಯಬೇಕು. ಮಿಕ್ಸಿಗೆ ಹೆಚ್ಚಿದ ಮಿಡಿಕಾಯಿ, ಅರ್ಧ ಚಮಚ ಜೀರಿಗೆ, ನಾಲ್ಕೈದು ಕಾಳುಮೆಣಸು, ಒಂದು ಒಣಮೆಣಸಿನಕಾಯಿ ಹಾಕಿ ಸಣ್ಣಗೆ ರುಬ್ಬಿಕೊಳ್ಳಬೇಕು.

ಬಾಣಲೆಯನ್ನು ಗ್ಯಾಸ್ ಮೇಲಿಟ್ಟು ಒಂದು ಚಮಚ ತುಪ್ಪ ಹಾಕಿ, ಬಿಸಿಯಾದ ಬಳಿಕ ಅರ್ಧ ಚಮಚ ಸಾಸಿವೆ, ಅರ್ಧ ಚಮಚ ಜೀರಿಗೆ, ಕಾಲು ಚಮಚ ಇಂಗು, ಸ್ವಲ್ಪ ಕರಿಬೇವು ಹಾಕಿ ಒಗ್ಗರಣೆ ಸಿಡಿಸಿಕೊಳ್ಳಬೇಕು. ಬಳಿಕ ಆ ಬಾಣಲೆಗೆ ರುಬ್ಬಿಟ್ಟುಕೊಂಡ ಮಿಡಿ ಮಾವಿನಕಾಯಿ ಮಿಶ್ರಣ ಹಾಕಬೇಕು. ಸಾರಿನ ಹದಕ್ಕೆ ಬೇಕಾಗುವಷ್ಟು ನೀರು, ರುಚಿಗೆ ತಕ್ಕಷ್ಟು ಉಪ್ಪು, ಸ್ವಲ್ಪ ಬೆಲ್ಲ ಹಾಕಿ ಕುದಿಸಬೇಕು. ಬಿಸಿ ಅನ್ನದೊಂದಿಗೆ ಈ ಸಾರು ಸೇರಿಸಿ ಸವಿದರೆ ಪರಮಾನ್ನ ತಿಂದ ಅನುಭವ. ಮನೆಯಲ್ಲಿ ಮಿಡಿ ಮಾವಿನಕಾಯಿ ಇದ್ದರೆ ಯಾವ ಸಮಯದಲ್ಲಾದರೂ ಸುಲಭವಾಗಿ ಈ ಸಾರು ಮಾಡಬಹುದು. ಮಿಡಿಕಾಯಿ ಇಲ್ಲದಿದ್ದರೆ ಬೇರೆ ತರಹದ ಮಾವಿನಕಾಯಿಯ ಉಪ್ಪಿನಕಾಯಿಯನ್ನು ಹಾಕಿಯೂ ಈ ಸಾರು ಮಾಡಬಹುದು. ಮಿಡಿಕಾಯಿ ಹಾಕಿದರೆ ರುಚಿ ಹೆಚ್ಚು ಎನ್ನುತ್ತಾರೆ ಪವಿತ್ರಾ.

ಅಕ್ಷರ ಮಲ್ಲಿ

ವ್ಯಕ್ತಿ ಟ್ರೆಂಡಿಂಗ್

ಓರಗೆಯವರು ಮೊಬೈಲ್‌ನಲ್ಲಿ ಗೇಮ್ ಆಡುತ್ತಾ, ಟಿ.ವಿ.ಯಲ್ಲಿ ಕಾರ್ಟೂನ್ ನೋಡುತ್ತಾ ಕಾಲ ಕಳೆಯುತ್ತಿದ್ದರೆ, ಅವಳು ಮಾತ್ರ ಕಾಪಿ ಪುಸ್ತಕ ಹಿಡಿದು ಅಕ್ಷರ ತಿದ್ದುತ್ತಿದ್ದಳು, ಖಾಲಿ ಹಾಳೆಯಲ್ಲಿ ಇನ್ನಷ್ಟು ಮತ್ತಷ್ಟು ದುಂಡಗೆ ಬರೆಯಲು ಹವಣಿಸುತ್ತಿದ್ದಳು, ಗಂಟೆಗಟ್ಟಲೆ ಬರೆದೂ ಬರೆದೂ ಕೈ ಸೋತಾಗಷ್ಟೇ ಅವಳು ಮೇಲಕ್ಕೆ ಏಳುತ್ತಿದ್ದುದು.

'ಅಯ್ಯೋ ಈ ಡಿಜಿಟಲ್ ಯುಗದಲ್ಲಿ ಕೈಬರಹ ಹೇಗಿದ್ದರೇನು?' ಎಂದು ಮೂಗು ಮುರಿಯುವವರೂ ಒಮ್ಮೆ ಅವಳ ಅಕ್ಷರ ನೋಡಿದ ಕೂಡಲೇ ದಂಗಾಗುತ್ತಾರೆ. ಇದೇನು ಕೈಯಲ್ಲಿ ಬರೆದದ್ದೋ ಅಥವಾ ಕಂಪ್ಯೂಟರ್ ಅಚ್ಚೋ ಎಂಬ ಗೊಂದಲದಲ್ಲಿ ತಿರುಗಿಸಿ ಮುರುಗಿಸಿ ನೋಡಿ ಕಕ್ಕಾಬಿಕ್ಕಿಯಾಗುತ್ತಾರೆ.

ಹೌದು, ನೇಪಾಳದ ಯುವತಿ ಪ್ರಕೃತಿ ಮಲ್ಲ ಕೈಬರಹಕ್ಕೆ ಮನಸೋಲದವರೇ ಇಲ್ಲ. ಕಂಪ್ಯೂಟರ್ ಪ್ರಿಂಟ್‌ಔಟ್‌ನಲ್ಲಿನ ಅಕ್ಷರಗಳಂತೆಯೇ ಶಿಸ್ತುಬದ್ಧವಾಗಿ, ಮುದ್ದಾಗಿ ಇರುತ್ತದೆ ಅದು. ಅಕ್ಷರಗಳ ನಡುವೆ ಬಿಟ್ಟ ಸ್ಥಳವಾಗಲಿ, ಬರೆಯುವ ಶೈಲಿಯಾಗಲಿ ಎಲ್ಲವೂ ಅತ್ಯಂತ ನಿಖರ ಮತ್ತು ಮನಮೋಹಕ.


Name: Prakriti Malla
Class: 8 (Eight)
Sec: B
School: Sainik Awasiya Mahavidyalaya

Handwriting is an essential skill for both children and adults (Feder & Majnemer, 2007). Even in the age of technology, it remains the primary tool of communication and knowledge assessment for students in the classroom. The demands for it are great, whether in the classroom or beyond. A 1992 study (McHale & Cermak) found that 85 percent of all fine motor time in second-, fourth- and sixth-grade classrooms was spent on paper and pencil activities. A more recent study (Marr, Cermack, Cohn & Henderson, 2003) noted that kindergarten children are now spending 42 percent of their fine motor time on paper and pencil activities.

ಅಷ್ಟಕ್ಕೂ ಈಕೆ ಯಾರು ಅಂದುಕೊಂಡಿರಿ? 'ಜಗತ್ತಿನ ಅತ್ಯಂತ ಸುಂದರವಾದ ಕೈಬರಹ' ಎಂಬ ಬಿರುದು ಪಡೆದಾಕೆ.

ಪ್ರಕೃತಿಯು ಹೊರಜಗತ್ತಿಗೆ ಪರಿಚಯವಾದದ್ದೇ ಆಕಸ್ಮಿಕವಾಗಿ. 2017ರಲ್ಲಿ 8ನೇ ತರಗತಿಯಲ್ಲಿದ್ದಾಗ ಆಕೆ ಮಾಡಿದ್ದ ಹೋಮ್‌ವರ್ಕ್ ಕಂಡವರು ಯಾರೋ ಆ ಅಕ್ಷರಗಳ ಮೋಡಿಗೆ ಒಳಗಾಗುತ್ತಾರೆ. 'ವ್ಹಾವ್! ಎಷ್ಟೊಂದು ಸುಂದರವಾದ ಕೈಬರಹ' ಎಂದುಕೊಂಡು ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುತ್ತಾರೆ. ನೋಡನೋಡುತ್ತಿದ್ದಂತೆಯೇ ಒಬ್ಬರಿಂದೊಬ್ಬರಿಗೆ ಶೇರ್ ಆಗುತ್ತಾ ಆಗುತ್ತಾ ಅದು ಜಗತ್ತಿಗೇ ವ್ಯಾಪಿಸುತ್ತದೆ. ಎಲ್ಲ ಮೂಲೆಗಳಿಂದಲೂ ಪ್ರಶಂಸೆಯ ಸುರಿಮಳೆ ಪ್ರಕೃತಿಯತ್ತ ಹರಿದುಬರುತ್ತದೆ.

ನೇಪಾಳ ಸರ್ಕಾರ ಆಯೋಜಿಸಿದ್ದ ಪೆನ್‌ಮ್ಯಾನ್‌ಷಿಪ್ ಸ್ಪರ್ಧೆಯ ಶೀರ್ಷಿಕೆ ಅನಾಯಾಸವಾಗಿ ಆಕೆಯ ಮುಡಿಗೇರುತ್ತದೆ. ದೇಶದ ಸೇನಾಪಡೆ 'ಪ್ರಕೃತಿ ನಮ್ಮ ಹೆಮ್ಮೆ' ಎಂದು ಶ್ಲಾಘಿಸುತ್ತದೆ. 2022ರಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) 51ನೇ ರಾಷ್ಟ್ರೀಯ ದಿನಾಚರಣೆಯ ಪ್ರಯುಕ್ತ ಆಡಳಿತಕ್ಕೆ ಶುಭ ಕೋರಿ ಕೈಬರಹದಲ್ಲಿ ಆಕೆ ಬರೆದಿದ್ದ ಪತ್ರ ಅಲ್ಲಿನ ಆಡಳಿತಗಾರರನ್ನು ಇನ್ನಿಲ್ಲದಂತೆ ಸೆಳೆಯುತ್ತದೆ. ಅದೇ ದಿನಾಚರಣೆಯ ಕಾರ್ಯಕ್ರಮಕ್ಕೆ ಆಕೆಯನ್ನು ಕರೆಸಿ ಸನ್ಮಾನ ಮಾಡುವ ಆಡಳಿತವರ್ಗ, 'ವಿಶ್ವದ ಅತ್ಯುತ್ತಮ ಕೈಬರಹ' ಎಂಬ ಬಿರುದನ್ನು ದಯಪಾಲಿಸಿ ಆಕೆಯನ್ನು ಪುರಸ್ಕರಿಸುತ್ತದೆ.

ಇಷ್ಟೆಲ್ಲ ಜಗತ್ಪ್ರಸಿದ್ಧಳಾಗಿದ್ದರೂ ಪ್ರಕೃತಿಯ ವೈಯಕ್ತಿಕ ಮಾಹಿತಿ ಮಾತ್ರ ಸಾರ್ವಜನಿಕವಾಗಿ ಲಭ್ಯವಾಗಿಲ್ಲ. 2017ರಲ್ಲಿ ಆಕೆ 8ನೇ ತರಗತಿಯಲ್ಲಿ ಇದ್ದುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಈ 9 ವರ್ಷಗಳಲ್ಲಿ ಆಕೆ ಸ್ನಾತಕೋತ್ತರ ಪದವಿಯನ್ನು ಓದಿ ಮುಗಿಸಿರಬಹುದು ಎಂದು ಅಂದಾಜಿಸಲಾಗಿದೆ.

ಇಷ್ಟು ಸೊಗಸಾದ ಕೈಬರಹ ಪ್ರಕೃತಿಗೆ ಜನ್ಮಜಾತವಾಗಿ ಬಂದದ್ದೇನಲ್ಲ. ಚಿಕ್ಕಂದಿನಿಂದ ಪ್ರತಿದಿನವೂ ಕನಿಷ್ಠ 2 ಗಂಟೆ ಅಭ್ಯಾಸ ಮಾಡಿದ್ದಕ್ಕೆ ದಕ್ಕಿದ ಪ್ರತಿಫಲ ಅದು. ಹೀಗಾಗಿ, ಯಾವುದೂ ಸುಲಭವಾಗಿ ದಕ್ಕುವುದಿಲ್ಲ, ಕಷ್ಟಪಟ್ಟರೆ ಮಾತ್ರ ಪ್ರತಿಫಲ ಎಂಬುದಕ್ಕೆ ಪ್ರಕೃತಿಯೇ ಸೂಕ್ತ ನಿದರ್ಶನ.

ಪ್ಲಸ್ ಸೈಜ್ ಉಡುಗೆ ಹೀಗಿರಲಿ

ದೇಹದ ತೂಕ ತುಸು ಏರುತ್ತಾ ಹೋದಂತೆ, ಯಾವ ಬಟ್ಟೆ ತೊಟ್ಟರೂ ತೃಪ್ತಿಯಾಗದು. ಪ್ಲಸ್ ಸೈಜ್ ಇರುವವರಿಗಾಗಿಯೇ ಆರಾಮದಾಯಕ ಮಾತ್ರವಲ್ಲ ಆತ್ಮವಿಶ್ವಾಸವನ್ನೂ ನೀಡಬಲ್ಲ ಹಲವು ಕ್ಯಾಷುಯಲ್ ಉಡುಗೆಗಳು ಈಗ ಮಾರುಕಟ್ಟೆಯಲ್ಲಿವೆ.

ನೀವು ಕುರ್ತಾ ಧರಿಸುವವರಾಗಿದ್ದರೆ 'ಎ–ಲೈನ್' ಕುರ್ತಾಗಳು, ಅಂದರೆ ಹೆಚ್ಚು ನೆರಿಗೆಗಳಿರುವ ಕುರ್ತಾಗಳನ್ನು ಧರಿಸಿ. ಇದರಿಂದ ಹೊಟ್ಟೆಯ ಬೊಜ್ಜು ಅಷ್ಟಾಗಿ ಕಾಣುವುದಿಲ್ಲ. ನಿತ್ಯ ಬಳಕೆಗೆ ಆದಷ್ಟೂ ಶುದ್ಧ ಹತ್ತಿಯ ಬಟ್ಟೆಯನ್ನು ಬಳಸಿ. ಇನ್ನು ವಿಶೇಷ ಸಮಾರಂಭಗಳಿಗಾಗಿ ಚಂದೇರಿ ಸಿಲ್ಕ್ ಅಥವಾ ಜರಿ ಎಂಬ್ರಾಯಿಡರಿ ಇರುವ ಅನಾರ್ಕಲಿ ಕುರ್ತಾಗಳನ್ನು ಧರಿಸಬಹುದು. ಹೆಚ್ಚಾಗಿ ತಿಳಿ ಬಣ್ಣದ ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು.

ಇನ್ನು ಆಫೀಸಿಗೆ ಡೆನಿಮ್ ಜೀನ್ಸ್ ಧರಿಸಿ. ಹೈ ವೇಸ್ಟ್ ಇದ್ದು, ಅಗಲವಾದ ಬಾಟಮ್ ಇರುವ ಜೀನ್ಸ್‌ಗಳಿಗೆ ಟಕ್ ಇನ್ ಮಾಡಿದ ಟೀ–ಶರ್ಟ್ ಅಥವಾ ಶರ್ಟ್ ಧರಿಸಬಹುದು. ಇದರ ಮೇಲೆ ದೊಗಲೆ ಸೈಜಿನ ಡೆನಿಂ ಜಾಕೆಟ್ ಧರಿಸಿದರೆ ಟ್ರೆಂಡಿ ಲುಕ್ ಸಿಗುತ್ತದೆ. ಮ್ಯಾಕ್ಸಿ ಡ್ರೆಸ್‌ಗಳು, ಪಾಕೆಟ್ ಇರುವ ದೋರಿ ಬಟ್ಟೆಗಳು ಆರಾಮದಾಯಕ ಎನಿಸಬಲ್ಲವು. ಹಗುರವಾದ ಮತ್ತು ನಿಟ್ ರಿಬ್ ಜರ್ಸಿ ಫ್ಯಾಬ್ರಿಕ್‌ನಲ್ಲಿ ತಯಾರಾದ ಕೋ–ಆರ್ಡ್ (ಟಾಪ್– ಬಾಟಂ ಒಂದೇ ಬಣ್ಣ) ಸೆಟ್‌ಗಳನ್ನು ತೊಟ್ಟು ಮುದ್ದಾಗಿ ಕಾಣಬಹುದು. ಟೇಪರ್ಡ್ ಪ್ಯಾಂಟ್‌ಗಳಿಗೆ ತೆಳ್ಳಗಿನ ಟೀ–ಶರ್ಟ್ ಹೊಂದಿಕೆಯಾಗುತ್ತದೆ. ಸರಳವಾದ ಸಾಲಿಡ್ ಶರ್ಟ್ ಡ್ರೆಸ್‌ಗಳು, ಅಗಲವಾದ ಪ್ಯಾಂಟ್‌ನ ಜಮ್ ಸೂಟ್‌ಗಳು ಆಧುನಿಕವಾಗಿರುವುದಷ್ಟೇ ಅಲ್ಲ ತೊಟ್ಟರೆ ಆರಾಮದಾಯಕ ಸಹ.

ಕೆನಡಾದಲ್ಲಿ ಆಪ್ತೇಷ್ಟರಿಂದ ನಡೆದ ಸೀಮಂತ ಕಾರ್ಯಕ್ರಮ

ಬಾರದ ಬಾಂಧವರು, ಕೈಹಿಡಿದ ಕನ್ನಡಿಗರು

ಭಾವಯಾನ

• ಮಲ್ಲಿಕಾರ್ಜುನ ಕನ್ನಿಹಳ್ಳಿ

ಚೊಚ್ಚಲ ಗರ್ಭಿಣಿ, ಅಪ್ಪ–ಅಮ್ಮ, ಅತ್ತೆ–ಮಾವ, ಬಂಧು ಬಳಗ ಎಲ್ಲರಿಗೂ ಆಹ್ವಾನ ನೀಡಿ ಅದ್ಧೂರಿಯಾಗಿ ಸೀಮಂತ ಸಮಾರಂಭ ಆಚರಿಸಿಕೊಳ್ಳಬೇಕು ಎಂಬ ಹಂಬಲ. ದಿನ ನಿಗದಿಪಡಿಸಿ ಎಲ್ಲರಿಗೂ ಆಹ್ವಾನ ನೀಡಲಾಯಿತು. ಅಷ್ಟರಲ್ಲಿ ಪಶ್ಚಿಮ ಏಷ್ಯಾ ಯುದ್ಧ ಆರಂಭ. ಯುದ್ಧ ನಿಲ್ಲುವ ಲಕ್ಷಣ ಕಾಣಲಿಲ್ಲ. ಮುನ್ಸೂಚನೆ ಇಲ್ಲದೆ ತಕ್ಷಣ ವಿಮಾನಗಳ ರದ್ದು. ಎಲ್ಲರಿಗೂ ಆತಂಕ, ನಿರಾಸೆ. 'ಭಾರತದಿಂದ ಬಂಧುಗಳು ಯಾರೂ ಬಾರದೆ ಸಮಾರಂಭ ಹೇಗೆ ಆಚರಿಸಿಕೊಳ್ಳಲಿ, ನನ್ನಂತಹ ದುರದೃಷ್ಟೆ ಇನ್ನೊಬ್ಬರಿಲ್ಲ' ಎಂದು ಆ ಗರ್ಭಿಣಿಯ ಕಣ್ಣಾಲಿಗಳು ತುಂಬಿ ಬಂದವು. ಆಹ್ವಾನಿಸಿದ್ದವರಿಗೆಲ್ಲ 'ಸಮಾರಂಭ ರದ್ದಾಗಿದೆ' ಎಂದು ತಿಳಿಸಲಾಯಿತು. ಆಗ ಆಕೆಗೆ ಆದ ನೋವು, ಆತಂಕ, ನಿರಾಸೆ ಕಂಡು ಭರವಸೆ ನೀಡಿದ್ದು ಹೊರನಾಡ ಕನ್ನಡಿಗರು.

ಸುಮಾರು ಅರವತ್ತಕ್ಕೂ ಹೆಚ್ಚು ಕುಟುಂಬಗಳ ಮಹಿಳೆಯರು ಸಾಂತ್ವನ ಹೇಳಿ, 'ಸಮಾರಂಭವನ್ನು ಅದ್ಧೂರಿಯಾಗಿ ಆಚರಿಸೋಣ, ನಾವೆಲ್ಲರೂ ನಿಮ್ಮ ಜೊತೆಗೆ ಇದ್ದೇವೆ. ವಿವಿಧ ಭಕ್ಷ್ಯಗಳನ್ನು ತಯಾರು ಮಾಡುತ್ತೇವೆ, ಸಂತೋಷವಾಗಿರಿ' ಎಂದು ಅಭಯ ನೀಡಿದರು.

ಇದು ಸಾವಿರಾರು ಕಿ.ಮೀ. ದೂರದ ಕೆನಡಾ ದೇಶದಲ್ಲಿನ ಲಾವೆಲ್ಲ ಪ್ರದೇಶದಲ್ಲಿ, ಉದ್ಯೋಗ ನಿಮಿತ್ತ ವಾಸವಾಗಿರುವ ತಾರಾ–ವೀರೇಶ್ ದಂಪತಿಯ ಮನೆಯಲ್ಲಿ ನಡೆದ ಘಟನೆ. ಸಮಾರಂಭದ ದಿನ ಹತ್ತಿರ ಬರತೊಡಗಿದಾಗ ದಂಪತಿಗೆ ಸಮಾರಂಭ ಯಶಸ್ವಿಯಾಗುವುದೋ ಇಲ್ಲವೋ ಎಂಬ ಆತಂಕ ಶುರುವಾಯಿತು. ಬಂಧು–ಬಳಗ ಯಾರೂ ಇಲ್ಲ, ದೇವರೇ ಕಾಪಾಡಬೇಕು ಎಂದು ದೈವಕ್ಕೆ ಶರಣಾದರು.

ಆಯೋಜಿಸಿದ ದಿನದಂದು ಮುಂಜಾನೆ ಅನಿವಾಸಿ ಕನ್ನಡಿಗರೆಲ್ಲ ಅಡುಗೆ ಮಾಡಲು ಸ್ಟೌ, ಪಾತ್ರೆಗಳು, ದಿನಸಿ ಸಾಮಾನು, ಊಟದ ತಟ್ಟೆ, ಲೋಟ, ವಿವಿಧ ಬಗೆಯ ಸಿಹಿತಿಂಡಿಗಳೊಂದಿಗೆ ನಿಗದಿತ ಸ್ಥಳಕ್ಕೆ ಬಂದಾಗ, ದಂಪತಿಯ ಮೊಗದಲ್ಲಿ ಹರ್ಷ ಮನೆಮಾಡಿತು. ಎಲ್ಲ ಮಹಿಳೆಯರು ಸರಸರನೆ ಸೀರೆಯನ್ನು ಸೊಂಟಕ್ಕೆ ಸಿಕ್ಕಿಸಿ, ಕಾಯಿ ಹೋಳಿಗೆ, ಕಾರದ ಹೋಳಿಗೆ, ಚಪಾತಿ, ದಾಲ್, ಅನ್ನ ಸಾಂಬಾರ್, ರಸಂ, ಎಣ್ಣೆಗಾಯಿ, ಕೋಸಂಬರಿ, ಆಲೂ ಕುರ್ಮಾ, ಬಜ್ಜಿ, ಹಪ್ಪಳ, ಬಾನ (ಮೊಸರು ಬುತ್ತಿ), ಪಾನ್‌ಬೀಡ ಎಲ್ಲವನ್ನೂ ಕೆಲವೇ ಗಂಟೆಗಳಲ್ಲಿ ತಯಾರಿಸಿದರು.

ಪ್ರಣೀತಾ, ಪ್ರಭಾ, ಲಕ್ಷ್ಮಿ, ಶ್ರುತಿ, ಸಿಂಧು, ಸುನಿತಾ, ಗೀತಾ, ಪಲ್ಲವಿ, ನವ್ಯ, ಶೀಲಾ, ನಂದಿನಿ, ರೋಹಿಣಿ, ಅರುಣಾ ಮೊದಲಾದ ಗೃಹಿಣಿಯರು ಅಡುಗೆ ತಯಾರಿಸಿದರೆ, ವೇದಿಕೆ ನಿರ್ಮಿಸಲು ಸಂತೋಷ್, ರಾಜೇಶ್, ಶಾಂತವೀರಯ್ಯ, ಪ್ರವೀಣ, ವಸಂತ್, ಸಂಜು ಅರೆಬಾವಿ, ಮಹಾಂತೇಶ್, ಮನೋಹರ್, ಮಹಮದ್ ಆವೇಜ್ ಮೊದಲಾದ ಪುರುಷರು ಕೈಜೋಡಿಸಿದರು.

ಯಾವುದೇ ಜಾತಿ, ಧರ್ಮದ ಭೇದವಿಲ್ಲದೆ, ಅಚ್ಚ ಕನ್ನಡತಿಯ ಸೀಮಂತ ಸಮಾರಂಭವನ್ನು ವಿದೇಶದಲ್ಲಿ ಅದ್ಧೂರಿಯಾಗಿ ಆಚರಿಸಿ, ಬಂಧು ಬಳಗ ಇಲ್ಲದ ಕೊರತೆಯನ್ನು ನೀಗಿಸಿದ ಹೊರನಾಡ ಕನ್ನಡಿಗರಿಗೆ ತಾರಾ–ವೀರೇಶ್ ದಂಪತಿ ಹೃದಯದಾಳದಿಂದ ಧನ್ಯವಾದ ಅರ್ಪಿಸಿದರು.

‘ಎಸ್‌.ಎಂ.ಕೃಷ್ಣ ಪ್ರಶಸ್ತಿ’ಗೆ ಕಿಮ್ಮನೆ ರತ್ನಾಕರ್ ಆಯ್ಕೆ

ಪ್ರಜಾವಾಣಿ ವಾರ್ತೆ

ಕಿಮ್ಮನೆ ರತ್ನಾಕರ್

ಮಂಡ್ಯ: ಕರ್ನಾಟಕ ಸಂಘವು ನೀಡುವ ಪ್ರಥಮ ವರ್ಷದ ‘ಎಸ್‌.ಎಂ. ಕೃಷ್ಣ ಪ್ರಶಸ್ತಿ’ಗೆ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅವರನ್ನು ಆಯ್ಕೆಮಾಡಲಾಗಿದೆ.

ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ಹೆಸರಿನಲ್ಲಿ ಅವರ ಹಿತೈಷಿಗಳು ಸಂಘದೊಂದಿಗೆ ಕೂಡಿ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ರಾಜಕೀಯ, ಸಂಗೀತ, ಕ್ರೀಡಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ತಿಳಿಸಿದ್ದಾರೆ.

‘ಕಾರ್ಮಿಕ ಸಂಹಿತೆ ಹಿಂಪಡೆಯಿರಿ’

ಕಾರ್ಮಿಕ ದಿನಾಚರಣೆ: ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಆಗ್ರಹಿಸಿದರು.

ಕರ್ನಾಟಕ ವರ್ಕರ್ಸ್ ಯೂನಿಯನ್ ಶುಕ್ರವಾರ ಬನ್ನಪ್ಪ ಪಾರ್ಕ್‌ನಲ್ಲಿ ಆಯೋಜಿಸಿದ್ದ ವಿಶ್ವ ಕಾರ್ಮಿಕರ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಕೂಡಲೇ ರದ್ದುಗೊಳಿಸಬೇಕು, ಅಸಂಘಟಿತ ವಲಯ ಕಾರ್ಮಿಕರಿಗೆ ಸೌಲಭ್ಯ ನೀಡಬೇಕು ಎಂದರು.

ದೇಶದಲ್ಲಿ ಶೇ 10 ರಷ್ಟಿರುವ ಶ್ರೀಮಂತರ ಪರವಾಗಿ ಕೇಂದ್ರ ಸರ್ಕಾರ ನಿಂತಿದ್ದು, ಉಳಿದ ಜನರ ಜೀವ ಹಿಂಡಲು ಕಾನೂನು ಜಾರಿ ಮಾಡುತ್ತಿದೆ. ದೇಶದ ಶೇಕಡ 77ರಷ್ಟು ಸಂಪತ್ತು ಶ್ರೀಮಂತರ ಬಳಿ ಇದೆ. ಆದರೆ, ಅವರು ಕೇವಲ ಶೇ 4ರಷ್ಟು ತೆರಿಗೆ ಪಾವತಿಸುತ್ತಾರೆ. ಬಡವರು, ಶ್ರಮಿಕರು ಇತರೆ ಶೇ 65ರಷ್ಟು ಜಿಎಸ್‌ಟಿ ಪಾವತಿಸುತ್ತಾರೆ ಎಂದು ವಿವರಿಸಿದರು.

ಕಾರ್ಮಿಕರು ಹೋರಾಟ ಮಾಡಬೇಕೆಂದರೆ ಕಾರ್ಖಾನೆಯ ಮಾಲೀಕರ ಅನುಮತಿ ಪಡೆಯಬೇಕೆಂಬ ಬ್ರಿಟಿಷ್ ಮಾದರಿ ಕಾನೂನು ಜಾರಿಗೆ ತರಲಾಗಿದೆ. ಇದನ್ನು ಒಪ್ಪುವಂತಿಲ್ಲ. ಪ್ರತಿಭಟನೆ ಮಾಡುವುದು ಪ್ರಜಾಪ್ರಭುತ್ವ ವಿರೋಧಿ ಕೃತ್ಯ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ದಿನದ 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಜಾರಿಗೆ ತಂದಿರುವುದು ಕಾರ್ಮಿಕರ ದಿನಾಚರಣೆಗೆ ಕೊಡಲಿ ಏಟು ಬಿದ್ದಂತಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ರೈತರ ಭೂಮಿ ಕಸಿಯುವುದು, ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಳ್ಳುವುದು ಸರಿಯಲ್ಲ ಎಂದರು.

ಯೂನಿಯನ್ ಪ್ರಧಾನ ಕಾರ್ಯದರ್ಶಿ ಇ. ಕೆ. ಎನ್. ರಾಜನ್, ‘ಬೆಂಗಳೂರು ನಗರದಲ್ಲಿಯೇ ಸುಮಾರು 50 ಲಕ್ಷ ಕಾರ್ಮಿಕರಿದ್ದಾರೆ. ಅನೇಕರ ಜೀವನ ಮಟ್ಟದ ದಯನೀಯವಾಗಿದೆ. ಗಾರ್ಮೆಂಟ್ಸ್ ಮಹಿಳೆಯರು ತೊಂದರೆ ಅನುಭವಿಸುತ್ತಿದ್ದಾರೆ. ಸಂಘಟಿತರಾದರೆ ಸಮಸ್ಯೆಗೆ ಪರಿಹಾರ ಸಿಗಲಿದೆ ’ ಎಂದು ಹೇಳಿದರು.

ಕಾರ್ಮಿಕ ಇಲಾಖೆ ನಿವೃತ್ತ ಹೆಚ್ಚುವರಿ ಆಯುಕ್ತ ವಸಂತ ಕುಮಾರ್ ಹಿಟ್ಟಣಗಿ ಮಾತನಾಡಿದರು. ಯೂನಿಯನ್ ಉಪಾಧ್ಯಕ್ಷ ರಾಮಮೂರ್ತಿ, ಜಂಟಿ ಕಾರ್ಯದರ್ಶಿ ಮೆಲ್ಕಿಯೋರ್ ಆರ್. ಡಿ. ಹಾಜರಿದ್ದರು.

ಕಾರ್ಮಿಕ ದಿನದ ಅಂಗವಾಗಿ ಕರ್ನಾಟಕ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಕಾರ್ಮಿಕರು ಮಿನರ್ವ ವೃತ್ತದಿಂದ ಕಾರ್ಪೊರೇಷನ್ ವೃತ್ತದ ಬನ್ನಪ್ಪ ಪಾರ್ಕ್‌ವರೆಗೆ ಜಾಥಾ ನಡೆಸಿದರು ಚಿತ್ರ: ಪ್ರಶಾಂತ್ ಎಚ್‌.ಜಿ.

ಅರ್ಜಿ ವಜಾಗೊಳಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧುರಂಧರ್-2 ಚಿತ್ರದ ಮೂಲಕಥೆ ನನ್ನದು. ಅದನ್ನು ಕಳವು ಮಾಡಲಾಗಿದೆ. ಆದ್ದರಿಂದ, ಚಿತ್ರಕ್ಕೆ ನೀಡಲಾಗಿರುವ ಪ್ರಮಾಣಪತ್ರವನ್ನು ರದ್ದುಗೊಳಿಸಲು; ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯೊಂದನ್ನು ಹೈಕೋರ್ಟ್ ವಜಾಗೊಳಿಸಿದೆ.

ನಗರದ ಕಥೆಗಾರ, ನಿರ್ದೇಶಕ, ನಿರ್ಮಾಪಕ ಆರ್‌.ಎಸ್‌.ಸಂತೋಷ ಕುಮಾರ್ (43) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್‌.ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರ ದೂರು ಕೃತಿಚೌರ್ಯ ವಿವಾದಕ್ಕೆ ಸಂಬಂಧಿಸಿದೆ. ಇದೊಂದು ಖಾಸಗಿ ಹಕ್ಕಿಗೆ ಸಂಬಂಧಿಸಿದ ಪ್ರಕರಣ. ಅಂತೆಯೇ, ಚಲನಚಿತ್ರವೊಂದಕ್ಕೆ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಕಥೆ ಕಳವು ಆರೋಪಗಳನ್ನು ಪರಿಶೀಲಿಸುವ ಅಧಿಕಾರ ಸಿಬಿಎಫ್‌ಸಿ ಇಲ್ಲ. ಇದು ಸಂಪೂರ್ಣ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿರುವ ಕಾರಣ; ಅರ್ಜಿದಾರರು ಕೃತಿಚೌರ್ಯದ ಆರೋಪದಡಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಸೂಕ್ತ ಪರಿಹಾರ ಪಡೆದುಕೊಳ್ಳಬಹುದು’ ಎಂದು ಸ್ಪಷ್ಟಪಡಿಸಿದೆ.

ಅರ್ಜಿಯಲ್ಲಿ ಏನಿತ್ತು?: ‘ದೇಶಭಕ್ತಿ ಪ್ರೇರಿತ, ಭಯೋತ್ಪಾದನೆ ವಿರುದ್ಧ ಹೋರಾಡುವ ಅಂಶಗಳ ಆಧಾರದಲ್ಲಿ ಹೆಣೆಯಲಾಗಿದ್ದ ‘ಡಿ ಸಾಹೇಬ್’ ಚಿತ್ರದ ಹಸ್ತಪ್ರತಿಯನ್ನು ನಾನು 2023ರಲ್ಲೇ ತಯಾರಿಸಿದ್ದೆ. ಇದರ ಕಥೆ, ಚಿತ್ರಕಥೆ, ಸಂಕ್ಷಿಪ್ತ ವರ್ಣನೆಗಳನ್ನು ಅಭಿವೃದ್ಧಿಪಡಿಸಿ; ಚಿತ್ರಕಥೆ ಲೇಖಕರ ಸಂಘವೂ (ಎಸ್‌ಡಬ್ಲ್ಯುಎ) ಸೇರಿದಂತೆ ಇತರೆ ಸಕ್ಷಮ ಪ್ರಾಧಿಕಾರಗಳಲ್ಲಿ ನೋಂದಣಿ ಮಾಡಿಸಿದ್ದೆ. ಇದನ್ನೇ ಕಳವು ಮಾಡಲಾಗಿದೆ. ಆದ್ದರಿಂದ, ಈ ಚಿತ್ರಕ್ಕೆ ನೀಡಲಾಗಿರುವ ಪ್ರಮಾಣಪತ್ರ ರದ್ದುಗೊಳಿಸಲು ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

190ನೇ ವರ್ಷದ ಲಕ್ಷ್ಮೀನರಸಿಂಹಸ್ವಾಮಿ ಉತ್ಸವ

ರಥೋತ್ಸವಕ್ಕೆ ದಲಿತ ಮುಖಂಡ ಚಾಲನೆ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ನಗರದಲ್ಲಿ 190ನೇ ವರ್ಷದ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವಕ್ಕೆ ದಲಿತ ಮುಖಂಡ ನಿಂಗರಾಜ್ ಮಲ್ಲಾಡಿ ಅವರು ಶುಕ್ರವಾರ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

ನಗರದ ಲಕ್ಷ್ಮಣತೀರ್ಥ ನದಿ ದಂಡೆಯಲ್ಲಿರುವ ದೇವಸ್ಥಾನದಲ್ಲಿ ನಡೆದ ಉತ್ಸವದಲ್ಲಿ ಮೊದಲ ಬಾರಿಗೆ ದಲಿತರಿಗೆ ಆದ್ಯತೆ ನೀಡಿ ಇತಿಹಾಸ ಸೃಷ್ಟಿಸಲಾಯಿತು. ನಂತರ, ಭಕ್ತರು ರಥ ಎಳೆದು ಹರಕೆ ತೀರಿಸಿದರು.

‘ಬ್ರಾಹ್ಮಣ ಸಮುದಾಯದವರು ಪೂಜೆ ನಡೆಸುವ ದೇವಸ್ಥಾನದಲ್ಲಿ ದಲಿತ ಸಮುದಾಯದವರನ್ನು ಆಹ್ವಾನಿಸಿ, ರಥೋತ್ಸವಕ್ಕೆ ಚಾಲನೆ ನೀಡಲು ಅವಕಾಶ ಕಲ್ಪಿಸಿ ವಿಶೇಷ ಸಂದೇಶ ರವಾನಿಸಿದ್ದಾರೆ. ಜಾತೀಯತೆ, ಅಸ್ಪೃಶ್ಯತೆ, ಮೇಲುಕೀಳು ಹೋಗಲಾಡಿಸಲು ಇಂಥ ಪ್ರಯತ್ನಗಳು ಮುಖ್ಯ. ರಥೋತ್ಸವವು ಸಂಕುಚಿತ ಮನಸ್ಸುಗಳನ್ನು ಬದಲಿಸಿ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಲಿದೆ’ ಎಂದು ನಿಂಗರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಾಮಾಜಿಕ ಅಸಮಾನತೆಯನ್ನು ಕಾನೂನು ಮೂಲಕ ನಿವಾರಿಸುವುದು ಕಷ್ಟಕರ. ಆದರೆ, ಮನಪರಿವರ್ತನೆಯಿಂದ ಸಾಧ್ಯವಾಗಿಸಬಹುದು ಎಂಬುದಕ್ಕೆ ರಥೋತ್ಸವವೇ ನಿದರ್ಶನ’ ಎಂದರು.

ಮುಖಂಡರಾದ ಹರೀಶ್ ಕುಮಾರ್, ಸ್ವಾಮಿಗೌಡ, ಬ್ರಾಹ್ಮಣ ಸಮುದಾಯದ ಮುಖಂಡ ಭಾಸ್ಕರ್ ಭಟ್, ಪ್ರಧಾನ ಅರ್ಚಕ ಗುರುರಾಜ್, ಚಂದ್ರಮೌಳಿ, ರಾಘವೇಂದ್ರ ಮಠದ ಪುರೋಹಿತ ನಾರಾಯಣಮೂರ್ತಿ ಭಾಗವಹಿಸಿದ್ದರು. ಶ್ರೀನಿಧಿ, ಕೃಷ್ಣಮೂರ್ತಿ ಕುಟುಂಬದವರು ಭಕ್ತರಿಗೆ ಮಜ್ಜಿಗೆ ವಿತರಿಸಿದರು.

ಹುಣಸೂರು ನಗರದಲ್ಲಿ 190ನೇ ವರ್ಷದ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವಕ್ಕೆ ದಲಿತ ಮುಖಂಡ ನಿಂಗರಾಜ್ ಮಲ್ಲಾಡಿ ಅವರು ಶುಕ್ರವಾರ ಚಾಲನೆ ನೀಡಿ ಮಾತನಾಡಿದರು

‘ಪ್ರಬಲರು ನಿಮ್ಮ ವರ್ಗ ಅಪ್ಪಿದ್ದರೆ ಮತಾಂತರ ಆಗುತ್ತಿರಲಿಲ್ಲ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ದೇವಸ್ಥಾನ ಪ್ರವೇಶಿಸಿದ ಕಾರಣಕ್ಕೆ ದೌರ್ಜನ್ಯಗಳು ನಡೆದಾಗ ತಳ ಸಮುದಾಯಗಳು ಸಹಜವಾಗಿಯೇ ಮತಾಂತರದ ಮೂಲಕ ಪ್ರತಿರೋಧ ವ್ಯಕ್ತಪಡಿಸುತ್ತವೆ. ನಿಮ್ಮ ವರ್ಗವನ್ನು ಪ್ರಬಲರು ಅಪ್ಪಿಕೊಂಡಿದ್ದರೆ ಇಂತಹ ಸಮಸ್ಯೆ ಎದುರಾಗುತ್ತಿರಲಿಲ್ಲ’ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕುಂಚಿಟಿಗ ಸಮಾಜದ ವತಿಯಿಂದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಪೂರ್ವಾಶ್ರಮದ ಪಾಲಕರಿಗೆ ಕುಟೀರ (ಮನೆ) ಸಮರ್ಪಣೆ ಅಂಗವಾಗಿ ಯರಗುಂಟೆಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮತಾಂತರ ಸೂಕ್ಷ್ಮ ವಿಚಾರ. ತಳ ಸಮುದಾಯ ಏಕೆ ಹೀಗೆ ವರ್ತಿಸುತ್ತಿದೆ ಎಂದು ಚಿಂತಿಸಬೇಕಿದೆ. ದೌರ್ಜನ್ಯವನ್ನೇ ನೆಪ ಮಾಡಿಕೊಂಡು ಕೆಲವರು ಅನ್ಯ ಧರ್ಮಕ್ಕೆ ಹೋಗುತ್ತಿದ್ದಾರೆ. ಆಸೆ, ಆಮಿಷ ಸೇರಿ ಮತಾಂತರಕ್ಕೆ ಹಲವು ಆಯಾಮಗಳಿವೆ. ಆರ್ಥಿಕ, ಸಾಮಾಜಿಕವಾಗಿ ಮುಖ್ಯವಾಹಿನಿಯಲ್ಲಿ ಇರುವವರು ತಳ ಸಮುದಾಯವನ್ನು ಜೊತೆಗೆ ಕರೆದೊಯ್ಯದಾಗ ಮತಾಂತರ ಸಮಸ್ಯೆಗೆ ಪರಿಹಾರ ಸಿಗಬಹುದು’ ಎಂದರು.

ಮರಳಿ ಕರೆತರಲು ಸಲಹೆ: ‘ಮತಾಂತರಗೊಂಡವರನ್ನು ಹಿಂದೂ ಧರ್ಮಕ್ಕೆ ಮರಳಿ ಕರೆತರುವ ಪ್ರಯತ್ನವನ್ನು ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿ ಮಾಡಿದ್ದರು. ಈ ಕಾರ್ಯವನ್ನು ಎಲ್ಲ ಮಠಾಧೀಶರು ಕೈಗೆತ್ತಿಕೊಳ್ಳಬೇಕು’ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಮಠಾಧೀಶರಾಗಿದ್ದೂ ಅರಿವಿಲ್ಲದೇ ಜಾತೀಯತೆಯ ಸೋಂಕು ಅನುಭವಿಸಿದ್ದೇವೆ. ಇದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಸಾಧ್ಯವಾಗುತ್ತಿಲ್ಲ
ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಮಾದಾರ ಚನ್ನಯ್ಯ ಗುರುಪೀಠ

‘ನಾಡಗೀತೆ: ಬೌದ್ಧ ಪದ ಸೇರ್ಪಡೆಗೆ ಕ್ರಮ’

ಬುದ್ಧ ಜಯಂತಿಯಲ್ಲಿ ಸಚಿವ ಶಿವರಾಜ ತಂಗಡಗಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಗೀತೆಯಲ್ಲಿ ಬೌದ್ಧ ಪದ ಸೇರ್ಪಡೆಗೆ ಈಗಾಗಲೇ ಕ್ರಮ ವಹಿಸಿದ್ದು, ಕಾನೂನು ಇಲಾಖೆ ಸಮ್ಮತಿ ನೀಡಿದ ಬಳಿಕ ಅದು ಸೇರ್ಪಡೆಯಾಗಲಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಭಗವಾನ್ ಬುದ್ಧ ಜಯಂತಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ನಾಡಗೀತೆಯಲ್ಲಿ ಬೌದ್ಧ ಪದ ಸೇರ್ಪಡೆ ಮಾಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೆ ಚರ್ಚಿಸಿ, ಕಾನೂನು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆ ಪದ ನಾಡಗೀತೆಯಲ್ಲಿ ಸೇರಬೇಕು. ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ’ ಎಂದು ಭರವಸೆ ನೀಡಿದರು.

‘ಬೌದ್ಧರ ಸ್ಮಾರಕಗಳ ರಕ್ಷಣೆ ಮತ್ತು ಪುನರ್ ನಿರ್ಮಾಣದ ಕೆಲಸವನ್ನು ಸರ್ಕಾರ ಈಗಾಗಲೇ ಕೈಗೆತ್ತಿಕೊಂಡಿದೆ. ಈ ಕಾರ್ಯ ಸನ್ನತಿಯಿಂದ ಆರಂಭಗೊಂಡಿದೆ’ ಎಂದರು.

ಇದಕ್ಕೂ ಮೊದಲು ಬುದ್ಧನ ಬಗ್ಗೆ ಉಪನ್ಯಾಸ ನೀಡಿದ ಕವಿ ವಡ್ಡಗೆರೆ ನಾಗರಾಜಯ್ಯ, ‘ನಾಡಗೀತೆಯಲ್ಲಿ ವಿವಿಧ ಧರ್ಮಗಳ ಪ್ರಸ್ತಾಪದ ವೇಳೆ ಜೈನರು ದ್ಯಾನ ಪದವಿದ್ದು, ಬೌದ್ಧ ಪದವನ್ನು ಕೈಬಿಡಲಾಗಿದೆ. ರಾಜ್ಯ ಸರ್ಕಾರವು ನಾಡಗೀತೆಯಲ್ಲಿ ಬೌದ್ಧರುದ್ಯಾನ ಎಂದೂ ಸೇರ್ಪಡೆ ಮಾಡಬೇಕು’ ಎಂದರು.

ನಿವೃತ್ತ ಇತಿಹಾಸ ಪ್ರಾಧ್ಯಾಪಕಿ ಎಂ.ವಿ. ಉಷಾದೇವಿ, ‘ಬೌದ್ಧ ಧರ್ಮದಲ್ಲಿ ಮಾತ್ರ ಯಾವುದೇ ಆಮಿಷವನ್ನು ಒಡ್ಡುವುದಿಲ್ಲ. ಆ ಧರ್ಮದಲ್ಲಿನ ತತ್ವದಿಂದ ಪ್ರಭಾವಿತರಾಗುವ ಜನರು, ಸ್ವಯಂಪ್ರೇರಿತವಾಗಿ ಸೇರ್ಪಡೆಯಾಗುತ್ತಿದ್ದಾರೆ’ ಎಂದು ಶ್ಲಾಘಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್‌. ಮಂಜುನಾಥ ಸ್ವಾಮಿ ಅವರು ಮಾತನಾಡಿದರು. ಭಾರತೀಯ ಬೌದ್ಧ ಮಹಾಸಭಾದ ಬೋಧಿದತ್ತ ಭಂತೇಜಿ ಅವರು ಸಾನ್ನಿಧ್ಯ ವಹಿಸಿದ್ದರು. ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ, ನಾಗಸೇನ ಬುದ್ಧ ವಿಹಾರದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ಸಾಮಾಜಿಕ ಹೋರಾಟಗಾರ ಎನ್‌.ಮೂರ್ತಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಎನ್‌. ಮೂರ್ತಿ, ಶಿವರಾಜ ತಂಗಡಗಿ, ವಡ್ಡಗೆರೆ ನಾಗರಾಜಯ್ಯ, ಎಂ. ವೆಂಕಟಸ್ವಾಮಿ ಅವರು ಬುದ್ಧನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಹೈಕಮಾಂಡ್ ತೀರ್ಮಾನವೇ ‘ಪ್ರಸಾದ’: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರ ತೀರ್ಮಾನವನ್ನು ಪ್ರಸಾದವೆಂದು ಸ್ವೀಕಾರಿಸುವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾಯಕತ್ವ ಬದಲಾವಣೆ ವಿಚಾರ ಕುರಿತು ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಬಗ್ಗೆ ಮಾಹಿತಿ ಇಲ್ಲ. ಅವರು ಪಕ್ಷದ ಅಧ್ಯಕ್ಷರು. ಅವರು ಹೇಳುವುದನ್ನು ಪಕ್ಷ ಕೇಳುತ್ತದೆ. ಎಲ್ಲವೂ ಪಕ್ಷದ ಹೈಕಮಾಂಡ್ ತೀರ್ಮಾನದಂತೆ ನಡೆಯುತ್ತದೆ. ಯಾವ ಗೊಂದಲವೂ ಇಲ್ಲ. ಜನರ ಆಶೀರ್ವಾದದಂತೆ ಕೆಲಸ ಮಾಡುತ್ತಿದ್ದೇವೆ. ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿದ್ದು, ಬೇರೆ ಚಿಂತನೆ ಇಲ್ಲ. ಪಕ್ಷದ ತೀರ್ಮಾನ ಕಾದು ನೋಡುತ್ತೇನೆ’ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು. ಅವರು ಏನು ಹೇಳುತ್ತಾರೊ ಅದರಂತೆ ಪಕ್ಷ ನಡೆದುಕೊಳ್ಳುತ್ತದೆ. ರಾಜ್ಯದಲ್ಲಿ ಸಿ.ಎಂ ಬದಲಾವಣೆ ಕುರಿತು ಪಕ್ಷವೇ ತೀರ್ಮಾನಿಸಲಿದೆ
ಡಿ.ಕೆ.ಸುರೇಶ್, ಮಾಜಿ ಸಂಸದ

ನಮ್ಮಲ್ಲಿ ಯಾವ ಗೊಂದಲವೂ ಇಲ್ಲ. ಅಧಿಕಾರ ಹಸ್ತಾಂತರವೋ, ಸಚಿವ ಸಂಪುಟ ಪುನರ್‌ರಚನೆಯೋ ಎಲ್ಲವೂ ಹೈಕಮಾಂಡ್‌ಗೆ ಬಿಟ್ಟಿದ್ದು
ಎನ್‌. ಚಲುವರಾಯಸ್ವಾಮಿ, ಕೃಷಿ ಸಚಿವ

ಹೈಕಮಾಂಡ್ ಮಾತೇ ಅಂತಿಮ: ಪರಮೇಶ್ವರ

ನಾಯಕತ್ವ ಬದಲಾವಣೆ ವಿಷಯದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ. ಸದ್ಯಕ್ಕೆ ಬದಲಾವಣೆ ಇಲ್ಲವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲಾ ಸೇರಿದಂತೆ ಖರ್ಗೆ ಅವರ ಮಾತಿಗೆ ಬಹಳ ಪ್ರಾಮುಖ್ಯತೆ ಇರುತ್ತದೆ. ಅಲ್ಲಿಗೆ ಮುಖ್ಯಮಂತ್ರಿ ಬದಲಾವಣೆ ಮುಗಿದ ಅಧ್ಯಾಯ. ಅದೇ ಮಾತುಗಳನ್ನು ಮತ್ತೆ ಮತ್ತೆ ಹೇಳುವುದರಲ್ಲಿ ಅರ್ಥ ಇಲ್ಲ. ಇಂತಹ ಚರ್ಚೆಗಿಂತ ಜನರಿಗೆ ನೀಡಿದ ಭರವಸೆ ಈಡೇರಿಸಲು ಗಮನ ಕೊಡಬೇಕು’ ಎಂದರು.

‘ಸಿ.ಎಂ ಬದಲಾವಣೆ ಇನ್ನೂ ತೀರ್ಮಾನವಾಗಿಲ್ಲ’

ಕಲಬುರಗಿ: ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡುವ ಕುರಿತು ಇನ್ನೂ ತೀರ್ಮಾನವಾಗಿಲ್ಲ. ಹೀಗಾಗಿ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಆಗುತ್ತದೆಯೋ ಇಲ್ಲವೋ ಎಂಬುದನ್ನು ಈಗಲೇ ಹೇಗೆ ಹೇಳಲಿ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿಎಂ ಬದಲಾವಣೆ ಕುರಿತು ಚರ್ಚಿಸಲು ಇನ್ನೂ ದಿನಾಂಕ ನಿಗದಿಯಾಗಿಲ್ಲ. ಸಮಯ ನಿಗದಿಯಾದ ಮೇಲೆ ನಾವು ಏನು ನಿರ್ಧಾರ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ’ ಎಂದರು.

‘ಸಿಎಂ ಬದಲಾವಣೆ ಕುರಿತು ಸುಮ್ಮನೆ ತಪ್ಪು ಸಂದೇಶ ಕೊಡಬೇಡಿ. ಯಾವ ನಿರ್ಣಯ ತೆಗೆದುಕೊಂಡರೆ ಪಕ್ಷಕ್ಕೆ ಏನು ಪರಿಣಾಮ ಆಗುತ್ತದೆ ಎನ್ನುವುದನ್ನು ಚರ್ಚಿಸಿ ನಿರ್ಧರಿಸುತ್ತೇವೆ. ರಾಜ್ಯದ ಹಿತದೃಷ್ಟಿಯಿಂದ ನಿರ್ಣಯ ತೆಗೆದುಕೊಳ್ಳುತ್ತೇವೆ. ಅದನ್ನು ಎಲ್ಲರೂ ಬೆಂಬಲಿಸಬೇಕು’ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ

ಕೇಂದ್ರ ಕಾರ್ಮಿಕರ ವಿರೋಧಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿಯಾಗಿದ್ದು, ಪ್ರತಿ ನೀತಿಯೂ ಕಾರ್ಪೊರೇಟ್ ಸಂಸ್ಥೆಗಳ ಪರವಾಗಿರುತ್ತದೆ. ರಾಜ್ಯ ಸರ್ಕಾರ ಎಂದಿಗೂ ಕಾರ್ಮಿಕರ ಪರವಾಗಿದ್ದು, ಕಾರ್ಮಿಕರ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ವಿಶ್ವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ‘ರಾಜ್ಯ ಸರ್ಕಾರ ಕಾರ್ಮಿಕರಿಗೆ ಹಲವು ಸೌಲಭ್ಯಗಳನ್ನು ನೀಡಿದೆ. ಕಾರ್ಮಿಕರು ಕೆಲಸದ ವೇಳೆ ಮೃತಪಟ್ಟರೆ ನೀಡುವ ಪರಿಹಾರ ಮೊತ್ತವನ್ನು ₹8 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಸಹಜ ಮರಣ ಹೊಂದಿದವರ ಸಂಸ್ಕಾರಕ್ಕೆ ನೀಡುವ ಹಣವನ್ನು ₹1.50 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅಪಘಾತದಲ್ಲಿ ಮರಣ ಹೊಂದಿದವರಿಗೆ ₹4 ಲಕ್ಷ ಪರಿಹಾರ ನೀಡಲು ತೀರ್ಮಾನಿಸಿದೆ’ ಎಂದರು

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಕಾರ್ಮಿಕರ ಬದುಕಿನಲ್ಲಿ ಬದಲಾವಣೆಯನ್ನೂ ತರಲು ಸಾಧ್ಯವಾಗಿಲ್ಲ. ಕಾರ್ಮಿಕರ ರಕ್ಷಣೆಗೆ ಕಾಂಗ್ರೆಸ್ ಬದ್ಧವಾಗಿದೆ. ಎಂದರು.

ವಿಧಾನ ಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ.ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ನಾರಾಯಣಮೂರ್ತಿ ಹೇಳಿಕೆಗೆ ಟೀಕೆ

ವಾರಕ್ಕೆ 72 ಗಂಟೆ ಕೆಲಸ ಮಾಡಬೇಕು ಎಂದಿದ್ದ ಇನ್ಫೋಸಿಸ್‌ನ ಎನ್‌.ಆರ್‌. ನಾರಾಯಣಮೂರ್ತಿ ಅವರ ಹೇಳಿಕೆ ವಿರುದ್ಧ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

‘ಯಾರೋ ಸಿಂಪಲ್ ಸುಧಾಮೂರ್ತಿ ಅಂತೆ, ಅವರ ಪತಿ ನಾರಾಯಣಮೂರ್ತಿ ಅವರು ಕಾರ್ಮಿಕರು ದಿನಕ್ಕೆ 12 ಗಂಟೆ ಕೆಲಸ ಮಾಡಬೇಕು ಎಂದಿದ್ದರು. ಅಂದರೆ ಅವರ ದೃಷ್ಟಿಯಲ್ಲಿ ಜನರು ಮನುಷ್ಯರಲ್ಲವೇ? ಪ್ರಾಣಿಗಳಾ’ ಎಂದು ಪ್ರಶ್ನಿಸಿದರು.

‘ಮಹಿಳಾ ಮೀಸಲಾತಿ’ ಮತ್ತೊಮ್ಮೆ ಮಂಡನೆ’

ಹುಬ್ಬಳ್ಳಿ: ‘ಮುಂದಿನ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಮೀಸಲಾತಿ ಮಸೂದೆ ಮತ್ತೊಮ್ಮೆ ಮಂಡಿಸುವ ಕುರಿತು ನಿರ್ಧರಿಸುವರು. ಅಲ್ಲಿಯವರೆಗೂ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿಜೆಪಿ ಮಹಿಳಾ ಘಟಕ ಹಮ್ಮಿಕೊಂಡಿದ್ದ ಕಾಂಗ್ರೆಸ್ ಮತ್ತು ಮಿತ್ರ ಪಕ್ಷ ವಿರುದ್ಧದ ಜನಾಕ್ರೋಶ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆಯಿಲ್ಲ. ಮಹಿಳೆಯರು ಕಾಂಗ್ರೆಸ್ ವಿರುದ್ಧ ತಿರುಗಿ ಬೀಳಲು ಹೆಚ್ಚು ಕಾಲ ಬೇಕಿಲ್ಲ’ ಎಂದರು.

ಹುಬ್ಬಳ್ಳಿಯಲ್ಲಿ ಶುಕ್ರವಾರ ನಡೆದ ‘ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ವಿರುದ್ಧದ ಜನಾಕ್ರೋಶ ಪಾದಯಾತ್ರೆ’ಯಲ್ಲಿ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ವಿರೋಧಪಕ್ಷದ ನಾಯಕ ಅರವಿಂದ ಬೆಲ್ಲದ ಮತ್ತಿತರರು ಪಾಲ್ಗೊಂಡಿದ್ದರು.

ಎಚ್ಚರಿಕೆ ಸಂದೇಶ: ಚಾಲನೆ ಇಂದು

ಒಂದನೇ ಪುಟದಿಂದ...

ಆತಂಕ ಬೇಕಿಲ್ಲ: ‘ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ನಿಮ್ಮ ಭಾಗದಲ್ಲಿ 2026ರ ಮೇ 2ರಂದು ‘ಸೆಲ್ ಬ್ರಾಡ್‌ಕಾಸ್ಟಿಂಗ್ ಅಲರ್ಟ್’ ತಾಂತ್ರಿಕ ಪರೀಕ್ಷೆಯನ್ನು ನಡೆಸುತ್ತಿದೆ. ನಿಮ್ಮ ಮೊಬೈಲ್‌ಗೆ ಈ ಸಂದೇಶ ಬಂದಾಗ, ಯಾರೂ ಯಾವ ಕ್ರಮ ತೆಗೆದುಕೊಳ್ಳುವ ಅಗತ್ಯವಿರುವುದಿಲ್ಲ. ಯಾರೂ ಆತಂಕಕ್ಕೆ ಒಳಗಾಗಬಾರದು’ ಎಂಬ ವಿವರ ಇರುವ ಸಂದೇಶ ಬಿತ್ತರವಾಗಲಿದೆ.

ಈ ವ್ಯವಸ್ಥೆ ಪೂರ್ಣ ಅನುಷ್ಠಾನಕ್ಕೆ ಬಂದ ನಂತರ, ಮೊಬೈಲ್‌ನಲ್ಲಿ ಬಿತ್ತರವಾಗುವ ಎಚ್ಚರಿಕೆ ಸಂದೇಶಗಳನ್ನು ಕಡ್ಡಾಯವಾಗಿ ಪರಿಗಣಿಸಬೇಕಾಗುತ್ತದೆ.

ತುರ್ತು ಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸುವ ಗುರಿ ಹೊಂದಿರುವ ಈ ಮಹತ್ವದ ಸಂವಹನ ವ್ಯವಸ್ಥೆಯ ಪ್ರಾಯೋಗಿಕ ಚಾಲನೆ ವೇಳೆ ಎಲ್ಲ ನಾಗರಿಕರು ಸಹಕರಿಸಬೇಕು
ಕೃಷ್ಣ ಬೈರೇಗೌಡ
ಕಂದಾಯ ಸಚಿವ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ,
ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು,
ಮೈಸೂರು ಜಿಲ್ಲೆ– 571105.
Phone/Fax:08222-252211, eeharangi@yahoo.co.in

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 03/2026–27
ದಿನಾಂಕ:30.04.2026 (ಕೆಪಿಪಿ ಪೋರ್ಟಲ್ ಮೂಲಕ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ KTPP ಅಧಿನಿಯಮ–1999 ನಿಯಮಗಳು 2000 ರ ನಿಯಮಗಳಂತೆ ಸ್ಟಾಂಡರ್ಡ್ ಡಾಕ್ಯುಮೆಂಟ್ KW-1 ರನ್ವಯ 5 ಕಾಮಗಾರಿ, KW-4 ರನ್ವಯ 1 ಕಾಮಗಾರಿ ಹಾಗೂ KC-3 ರನ್ವಯ 1 ಕಾಮಗಾರಿಗಳನ್ನು ಅರ್ಹ ವರ್ಗದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ **ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:11.05.2026 ಸಾ:4.00 ಗಂಟೆವರೆಗೆ ಮತ್ತು ಬಿಡ್ಡು ತೆರೆಯುವ ದಿನಾಂಕ:12.05.2026 ರ ಸಾ:4.30 ಗಂಟೆ ನಂತರ ನಿಗಧಿಪಡಿಸಲಾಗಿದೆ.** ಕಾಮಗಾರಿಗಳಿಗೆ ನಿಗಧಿಪಡಿಸಿರುವ ಇ.ಎಂ.ಡಿಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಿರುವ ಯಾವುದಾದರೊಂದು ರೀತಿಯಲ್ಲಿ ಸಲ್ಲಿಸತಕ್ಕದ್ದು ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ **ಕೆಪಿಪಿ ಪೋರ್ಟಲ್** ವೆಬ್‌ಸೈಟ್ **https://kppp.karnataka.gov.in/kppp**ನಲ್ಲಿ ದಿನಾಂಕ: 04.05.2026 ರಿಂದ **ಡೌನ್‌ಲೋಡ್ ಮಾಡಿಕೊಳ್ಳಬಹುದು.** ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು
DIPR/DD/MYS/125/KSMCA/108/2026-27

Government of Karnataka
Karnataka State Mental Health Authority
Health and Family Welfare Services, 4th floor,
Arogya Soudha, Magadi Road, Bengaluru-560023
Email: Ksmha1@gmail.com

No: KSMHA/EST/10/2025-26 (E-1800479) Date: 19/04/2026.

Notification

Walk-In Interview for one post under Karnataka State Mental Health Authority.

Karnataka State Mental Health Authority (KSMHA) invites eligible candidate for Walk-in-interview for the post of Programme Consultant. The positions are temporary and purely on a contractual Basis. Walk-in-interview has been scheduled on 12/05/2026 @ 10 am in the office of Director, HFW and Member Secretary, KSMHA, 6th Floor. Arogya Soudha, Magadi 1st cross, Bengaluru-560023.

- **Designations :** Programme Consultant
- **No. of Posts :** 01
- **Essential Qualification :** MD Psychiatry/DPM in Psychiatry or DNB in Psychiatry or MD in Community Medicine.
- **Experience Required :** 03 years.
- **Experience Desirable :** 03 years' experience in Mental health or any other public health program
- **Age limit :** 40
- **Consolidated salary per Month :** 1,10,000/-

Note:

1. Speaking. Reading. Writing in Kannada & English Language.
2. Proficiency in Computer i.e. MS word, Excel & power point
3. No TA/DA will admissible for attending is preferable.
4. Candidate with similar past experience is preferable.
5. For any queries contact 080-29559040 during officer hours only.
6. The undersigned reserves the right to reject any or all applications and cancel the notification at any stage of recruitment without assigning any reasons thereof.
7. Full time course is mandatory and Course must be completed from recognized university.
8. Candidates should bring all the original documents/certificates and self-attested copies (XEROX) and a copy of latest updated CV, latest passport size Photo and valid ID proof (Adhar Card/PAN/DL/Voter ID)

Sd/-
Chief Executive Officer,
Karnataka State Mental Health Authority,
and Commissioner,
Health & Family Welfare Services, Bengaluru.
DIPR/CP/351/AKAR/2026-27

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis')

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/10/2025-26)
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004 and Hon'ble High Court Of Karnataka has cleared the title (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 707/2019)	Minimum Bid Price (Rs)	EMD (Rs)	Bid Increase Value (Rs)
	No.7/2, PID No. 76-36-7/2, Alexandra Street, Richmond Town, Old Ward No. 76 New Ward No. 117, Shanthinagara, Bengaluru. East to west toward East 65' 3 & Towards West 51+ 10 ft & North to South Towards North 59 ft & toward South 68 ft Aggregating 4010 sq.ft . Location: **https://maps.app.goo.gl/GB9VyYJrwfcfagiS8**			
(a)	1st floor, Flat No. FF-101, UDS-369.50, SBA-1715.625 sq.ft	2,25,97,650/-	22,60,000/-	2,26,000/-
(b)	1st floor, Flat No. FF-102, UDS-359.41, SBA-1668.75 sq.ft	2,19,90,600/-	22,00,000/-	2,20,000/-
(c)	2nd floor, Flat No. SF-201, UDS-369.50, SBA-1715.625 sq.ft	2,28,19,950/-	22,82,000/-	2,29,000/-
(d)	2nd floor, Flat No. SF-202, UDS-359.41, SBA-1668.75 sq.ft	2,22,12,900/-	22,22,000/-	2,23,000/-
(e)	4th floor, Flat No.FRT-401, UDS-369.50, SBA-1715.625 sq.ft	2,24,86,500/-	22,49,000/-	2,25,000/-
(f)	4th floor, Flat No.FRT-402, UDS-359.41, SBA-1668.75 sq.ft	2,18,88,000/-	21,89,000/-	2,19,000/-
(g)	5th floor, Flat No.FTF-500, UDS-711, SBA-3301.25 sq.ft	4,29,29,550/-	42,93,000/-	4,30,000/-
(h)	6th floor, Pent House No.501, UDS-383.37, SBA-1780 sq.ft	2,34,35,550/-	23,44,000/-	2,35,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
14ನೇ ಮೇ 2026 ಮಧ್ಯಾಹ್ನ 3.00 ರಿಂದ 4.00 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	20ನೇ ಮೇ 2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ	26ನೇ ಮೇ 2026 ಸಂಜೆ 5.00 ಗಂಟೆಯವರೆಗೆ	29ನೇ ಮೇ 2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 30.04.2026 DIPR/CP/432/ZEN/2026-27
ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸಂಸಾರದಲ್ಲಿ ಸೌಖ್ಯವಿಲ್ಲವೆಂದಲ್ಲ. ಇರುವಷ್ಟಿದೆ; ಇರುವವರಿಗಿದೆ.

–ಎ.ಆರ್. ಕೃಷ್ಣಶಾಸ್ತ್ರಿ

ಸಂಪಾದಕೀಯ

ಅಟ್ರಾಸಿಟಿ: ಮೇಲ್ಮನವಿಗೆ ನಿರುತ್ಸಾಹ ವ್ಯವಸ್ಥೆಯಿಂದ ಸಂತ್ರಸ್ತರಿಗೆ ಅನ್ಯಾಯ

ಸಮಾಜದ ಅತ್ಯಂತ ದುರ್ಬಲ ವರ್ಗದ ನಾಗರಿಕರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ರಾಜ್ಯದ ನ್ಯಾಯವ್ಯವಸ್ಥೆ ವಿಫಲವಾಗುತ್ತಿದೆ. ಈ ವೈಫಲ್ಯಕ್ಕೆ ಸಾಕ್ಷಿಯ ರೂಪದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅನ್ವಯ ದಾಖಲಾಗುವ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿರುವುದನ್ನು ಗಮನಿಸಬಹುದು. ಈ ಸ್ಥಿತಿ, ವ್ಯವಸ್ಥೆಯಲ್ಲಿನ ಲೋಪಗಳನ್ನು ಗುರ್ತಿಸುವಂತಿದೆ. ಅಟ್ರಾಸಿಟಿ ಪ್ರಕರಣಗಳಲ್ಲಿ ಖುಲಾಸೆಯಾದ ನಂತರ ನಡೆಯಬಹುದಾದ ಸಂಗತಿಗಳು ಇನ್ನೂ ಆತಂಕಕಾರಿಯಾಗಿವೆ. ತುಮಕೂರು, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದಿರುವ ಅಧ್ಯಯನವೊಂದು, ಖುಲಾಸೆ ಪ್ರಕರಣಗಳನ್ನು ಪ್ರಶ್ನಿಸುವ ಮೇಲ್ಮನವಿ ಪ್ರಮಾಣ ಶೇ 0.2ರಷ್ಟಿದೆ ಎಂದು ಹೇಳಿರುವುದು, ಶೋಷಿತರಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನ ದಯನೀಯ ಸ್ಥಿತಿಯಲ್ಲಿರುವುದನ್ನು ಬೆಳಕಿಗೆ ತಂದಿದೆ. ವಿಚಾರಣಾ ನ್ಯಾಯಾಲಯವು ಪ್ರಕರಣವನ್ನು ವಜಾಗೊಳಿಸಿದ ಕ್ಷಣದಿಂದಲೇ ವ್ಯವಸ್ಥೆಯೂ ಕೈಚೆಲ್ಲುತ್ತಿದೆ. ಮೇಲ್ಮನವಿ ಮಾಡದಿರುವುದು ನೈತಿಕ ವೈಫಲ್ಯವಾಗಿದೆ. ಸಾಕ್ಷ್ಯಗಳ ಕಡೆಗಣನೆ ಮತ್ತು ಕಾರ್ಯವಿಧಾನದಲ್ಲಿನ ಲೋಪಗಳು ಸ್ಪಷ್ಟವಾಗಿದ್ದರೂ, ಸಂತ್ರಸ್ತರ ಹಿತಾಸಕ್ತಿಯನ್ನು ರಕ್ಷಿಸಬೇಕಾದ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು, ಖುಲಾಸೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಹಿಂಜರಿಯುತ್ತಿರುವಂತೆ ಕಾಣಿಸುತ್ತಿದೆ.

ಅಟ್ರಾಸಿಟಿ ಪ್ರಕರಣಗಳಲ್ಲಿನ ಮೇಲ್ಮನವಿ ಪ್ರಮಾಣವು ಕನಿಷ್ಠ ಪ್ರಮಾಣದಲ್ಲಿದೆ. ಜಾತಿ ಆಧಾರಿತ ಹಿಂಸೆಯನ್ನು ಕೊನೆಗೊಳಿಸಬೇಕಾದ ವ್ಯವಸ್ಥೆಯೇ ತನ್ನ ನಿರ್ಲಕ್ಷ್ಯದಿಂದ ಅದನ್ನು ಬಲಪಡಿಸುತ್ತಿದೆ.

ಹಾಗಾಗಿ, ಆರು ತಿಂಗಳಿಗೊಮ್ಮೆ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಕಾರ್ಯಕ್ಷಮತೆಯನ್ನು ಪರಾಮರ್ಶಿಸುವ ಪ್ರಸ್ತಾವ, ಅವರನ್ನು ತಮ್ಮ ಕರ್ತವ್ಯಕ್ಕೆ ಉತ್ತರದಾಯಿಗಳಾಗಿಸುವ ನಿಟ್ಟಿನಲ್ಲಿ ಅಗತ್ಯವಾಗಿದೆ. ಪರಾಮರ್ಶೆಗೆ ಒಳಪಡದ ಅಧಿಕಾರವು ನಿರ್ಲಕ್ಷ್ಯವನ್ನು ಮೈಗೂಡಿಸಿಕೊಳ್ಳುವ ಅಪಾಯವಿದೆ ಹಾಗೂ ಇದರ ಪರಿಣಾಮವನ್ನು ಸಂತ್ರಸ್ತರು ಅನುಭವಿಸಬೇಕಾಗುತ್ತದೆ. ಶಿಕ್ಷೆಯ ಪ್ರಮಾಣ ಕಡಿಮೆ ಎನ್ನುವುದು ನ್ಯಾಯವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಗ್ಗಿಸುವಂತಿದ್ದರೆ, ಮೇಲ್ಮನವಿಗಳ ಪ್ರಮಾಣ ಇಲ್ಲವೇ ಇಲ್ಲ ಎನ್ನುವಂತಿರುವುದು ಕನಿಷ್ಠ ವಿಶ್ವಾಸವನ್ನೂ ಹುಸಿ ಆಗಿಸುವಂತಿದೆ. ನ್ಯಾಯದ ಮೇಲಿನ ನಂಬಿಕೆ ಕುಸಿದಾಗ, ದೂರು ನೀಡುವವರು ನಿರುತ್ಸಾಹಗೊಳ್ಳುತ್ತಾರೆ ಹಾಗೂ ಅಪರಾಧಿಗಳಿಗೆ ಧೈರ್ಯ ತುಂಬಿದಂತಾಗುತ್ತದೆ. ಶಿಕ್ಷೆ ಇಲ್ಲವೆನ್ನುವ ಪರಿಸ್ಥಿತಿಯು ಜಾತಿ ಆಧಾರಿತ ಹಿಂಸೆಯನ್ನು ಹೆಚ್ಚಿಸುತ್ತದೆ.

ರಾಜ್ಯದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಹೆಚ್ಚೂಕಡಿಮೆ ಇದೇ ಪರಿಸ್ಥಿತಿಯಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿರುದ್ಧದ ದೌರ್ಜನ್ಯ ಪ್ರಕರಣಗಳು ಮಧ್ಯಪ್ರದೇಶ, ರಾಜಸ್ಥಾನ ಮತ್ತು ಒಡಿಶಾಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿವೆ. ಭೂಮಿ ಕಬಳಿಕೆ, ಸಾಮಾಜಿಕ ಬಹಿಷ್ಕಾರ, ಹಲ್ಲೆ, ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಸಮಾಜದಲ್ಲಿನ ಜಾತಿಶ್ರೇಣಿ ವ್ಯವಸ್ಥೆಯ ಫಲಶ್ರುತಿಯಾಗಿವೆ. ದೇಶದ ಕಾನೂನು ಕಾಗದದ ಮೇಲೆ ಅತ್ಯಂತ ಬಲಿಷ್ಠವಾಗಿದೆ. ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ನಿಷೇಧಿಸಿದರೆ, 15ನೇ ವಿಧಿ ಜಾತಿ ಆಧಾರಿತ ತಾರತಮ್ಯವನ್ನು ನಿರ್ಬಂಧಿಸಿದೆ. ಈ ಸಂವಿಧಾನಾತ್ಮಕ ಖಾತರಿಗಳನ್ನು 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಮತ್ತು ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಗಳು ಮತ್ತಷ್ಟು ಬಲಪಡಿಸುತ್ತವೆ. ಇವು ಹೆಚ್ಚುವರಿ ಶಿಕ್ಷೆ, ವಿಶೇಷ ನ್ಯಾಯಾಲಯಗಳು ಮತ್ತು ಸಂತ್ರಸ್ತರ ಪುನರ್ವಸತಿಗೆ ಅವಕಾಶ ಕಲ್ಪಿಸಿವೆ. ಇಂತಹ ಕೃತ್ಯಗಳು ವೈಯಕ್ತಿಕ ಅಪರಾಧಗಳಾಗಿರದೆ, ದಬ್ಬಾಳಿಕೆ ಉದ್ದೇಶದ ಕೃತ್ಯಗಳಾಗಿರುತ್ತವೆ ಎಂದು ಕಾನೂನು ಗುರ್ತಿಸಿದೆ. ಆದರೆ, ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸದಿರುವುದು ಸಮಸ್ಯೆಗೆ ಕಾರಣವಾಗಿದೆ. ತನಿಖೆಯಲ್ಲಿನ ಲೋಪಗಳು, ಸಾಕ್ಷಿನಾಶ ಹಾಗೂ ನ್ಯಾಯಪ್ರಕ್ರಿಯೆಯಲ್ಲಿನ ವಿಳಂಬವು ಪ್ರಕರಣಗಳು ತಾರ್ಕಿಕ ಹಂತ ತಲಪುವ ಮುನ್ನವೇ ದುರ್ಬಲವಾಗಲು ಕಾರಣಗಳಾಗಿವೆ. ಈ ದೌರ್ಬಲ್ಯವನ್ನು ಮೇಲ್ಮನವಿಗಳ ಕೊರತೆಯು ಮತ್ತಷ್ಟು ಹೆಚ್ಚಿಸಿದೆ.

ವ್ಯವಸ್ಥೆಯಲ್ಲಿನ ಸಮಗ್ರ ಬದಲಾವಣೆಯಿಂದಷ್ಟೇ ಪರಿಹಾರ ಸಾಧ್ಯ. ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ನೇಮಕಾತಿಯಲ್ಲಿ ಅರ್ಹತೆಗಿಂತಲೂ ರಾಜಕೀಯ ಪ್ರಭಾವ ಮುಖ್ಯ ಪಾತ್ರ ವಹಿಸುತ್ತಿರುವುದನ್ನು ನ್ಯಾಯಾಲಯಗಳು ಹಲವು ಬಾರಿ ಟೀಕಿಸಿವೆ. ಪ್ರಾಸಿಕ್ಯೂಟರ್‌ಗಳ ಕಾರ್ಯವನ್ನು ಕಟ್ಟುನಿಟ್ಟಿನ ಪರಾಮರ್ಶೆಗೆ ಒಳಪಡಿಸಿ, ವೈಫಲ್ಯಗಳಿಗೆ ಅವರನ್ನು ಉತ್ತರದಾಯಿಯಾಗಿಸುವ ವ್ಯವಸ್ಥೆ ಜಾರಿಗೊಳ್ಳಬೇಕಾಗಿದೆ. ಪೊಲೀಸ್ ತನಿಖೆ ವೃತ್ತಿಪರತೆಯಿಂದ ಕೂಡಿರುವುದು ಹಾಗೂ ಸ್ಥಳೀಯ ಒತ್ತಡಗಳಿಂದ ಮುಕ್ತವಾಗಿರುವುದು ಅಗತ್ಯವಾಗಿದೆ. ಸಾಕ್ಷಿದಾರರ ರಕ್ಷಣೆಯು ಘೋಷಣೆಯಾಗಿಯಷ್ಟೇ ಉಳಿಯದೆ, ವಾಸ್ತವಿಕ ವ್ಯವಸ್ಥೆ ಆಗಬೇಕು. ಇದೆಲ್ಲಕ್ಕೂ ಮುಖ್ಯವಾಗಿ, ಅಟ್ರಾಸಿಟಿ ಪ್ರಕರಣಗಳಲ್ಲಿ ಖುಲಾಸೆಯನ್ನು ಅಂತಿಮ ಹಂತವೆಂದು ಭಾವಿಸದೆ, ಒಂದು ಪರಿಶೀಲನಾ ಹಂತವೆಂದು ಪರಿಗಣಿಸಬೇಕು. ನ್ಯಾಯವು ವಿಚಾರಣಾ ನ್ಯಾಯಾಲಯದಲ್ಲಿ ಕೊನೆಗೊಳ್ಳಬಾರದು. ಅದನ್ನು ಮುಂದುವರಿಸಲು ಆಡಳಿತ ವಿಫಲವಾದರೆ, ಸಂವಿಧಾನಾತ್ಮಕವಾಗಿ ರಕ್ಷಿಸಬೇಕಾದವರನ್ನು ಕೈಬಿಟ್ಟಂತಾಗುತ್ತದೆ.

ತಾಯ್ನುಡಿ ಮಾಧ್ಯಮ: ಸತ್ಯ–ನಿತ್ಯ!

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ಪುನರಾವರ್ತನೆ ಎನ್ನಿಸಿದರೂ ನಾವು ಮತ್ತೆ ಮತ್ತೆ ಹೇಳುತ್ತಲೇ ಇರಬೇಕಾದ ಸಂಗತಿ, 'ಮಕ್ಕಳ ಅತ್ಯುತ್ತಮ ಕಲಿಕೆ ತಾಯ್ನುಡಿ ಮಾಧ್ಯಮದಿಂದಷ್ಟೇ ಸಾಧ್ಯ' ಎನ್ನುವ ಸತ್ಯವನ್ನು, ವಿಶ್ವದ ಅನೇಕ ಅಧ್ಯಯನಗಳು ಸಾಬೀತುಪಡಿಸಿರುವ ಈ ಸತ್ಯವನ್ನು ಒಪ್ಪಿಕೊಳ್ಳಲು, ಅನುಷ್ಠಾನಕ್ಕೆ ತರಲು ಹಿಂಜರಿಯುತ್ತಿದ್ದೇವೆ.

ಕೆಲವು ಸತ್ಯ ಸಂಗತಿಗಳನ್ನು ಪದೇ ಪದೇ ಹೇಳಲೇಬೇಕಾಗುತ್ತದೆ. ಕೇಳಿಸಿ ಕೊಳ್ಳುವವರಿಗೆ ಸವಕಲು ಎನಿಸಿದರೂ ಹೇಳುವ ಸತ್ಯ ಸವಕಲಾಗುವುದಿಲ್ಲ, ಮೌಲ್ಯಗುಂದುವುದಿಲ್ಲ. ಪ್ರಾಥಮಿಕ ಶಿಕ್ಷಣ ತಾಯ್ನುಡಿಯಲ್ಲಿ ಇರಬೇಕೆಂಬುದು ಸಾರ್ವತ್ರಿಕ ಸತ್ಯ. ಕಲಿಕೆಯ ಗತಿ, ಗುಣಮಟ್ಟ ಮತ್ತು ವಿದ್ಯಾರ್ಥಿ ಗಳ ಸಮಗ್ರ ಆಲೋಚನಾಕ್ರಮದ ಮೇಲೆ ತಾಯ್ನುಡಿಯಲ್ಲಿನ ಕಲಿಕೆ ನಿರ್ಣಾಯಕ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದ ಕಲಿಕೆಯನ್ನು ಅಳವಡಿಸಿದ್ದು, ಅದರಿಂದಾಗುತ್ತಿರುವ ಸಾಧಕ ಬಾಧಕಗಳ ಬಗ್ಗೆ ಶಿಕ್ಷಕರ ಮಧ್ಯೆ ಆಂತರಿಕವಾಗಿ ವ್ಯಾಪಕ ಚರ್ಚೆ ನಡೆಯುತ್ತಿದೆ.

1953ರಲ್ಲಿ ಯುನೆಸ್ಕೊ 'ಶಿಕ್ಷಣದಲ್ಲಿ ಸ್ಥಳೀಯ ಭಾಷೆಗಳ ಬಳಕೆ' ಎಂಬ ಐತಿಹಾಸಿಕ ಸಂಶೋಧನಾ ವರದಿ ಪ್ರಕಟಿಸಿತು. ಆ ವರದಿಯ ಮೂಲತತ್ತ್ವವನ್ನು ನಮ್ಮ ರಾಜ್ಯಕ್ಕೆ ಅನ್ವಯಿಸಿದರೆ, ಪ್ರಾಥಮಿಕ ಶಿಕ್ಷಣವನ್ನು ಮಕ್ಕಳ ತಾಯ್ನುಡಿಯಲ್ಲಿ ನೀಡುವುದರ ಪ್ರಾಮುಖ್ಯತೆ ಹಾಗೂ ಅಗತ್ಯವನ್ನು ಮಗದೊಮ್ಮೆ ಕೂಗಿ ಹೇಳಿದಂತಿದೆ. ಕರ್ನಾಟಕದಂತಹ ಬಹುಭಾಷಾ ಮತ್ತು ಬಹುಸಾಂಸ್ಕೃತಿಕ ನಾಡಿನಲ್ಲಿ, ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ನೀಡಿದಾಗ ಮಕ್ಕಳು ವಿಷಯವನ್ನು ಸುಲಭವಾಗಿ ಗ್ರಹಿಸುತ್ತಾರೆ. ತಾಯ್ನುಡಿ ಕಲಿಕೆ ಮಕ್ಕಳಿಗೆ ಶಾಲೆ ಮತ್ತು ಕಲಿಕೆಯ ಬಗ್ಗೆ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಇದರಿಂದ ಕಲಿಕೆಯಲ್ಲಿ ಹಿಂದೆ ಬೀಳುವವರ ಅಥವಾ ಮಧ್ಯದಲ್ಲಿಯೇ ಶಾಲೆ ತೊರೆಯುವವರ ಪ್ರಮಾಣ ಕಡಿಮೆಯಾಗುತ್ತದೆ.

ವರದಿಯ ಮುಖ್ಯಾಂಶಗಳನ್ನು ವಿಸ್ತರಿಸಿ ಹೇಳುವುದಾದರೆ, ಅನ್ಯಭಾಷೆಯಲ್ಲಿ ಶಿಕ್ಷಣ ಆರಂಭಿಸಿದಾಗ, ವಿದ್ಯಾರ್ಥಿಗಳು ಭಾಷೆಯನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಶ್ರಮಪಡಬೇಕಾಗುತ್ತದೆ. ಅದು ಕಲಿಕೆಗೆ ಅಡಚಣೆ ಉಂಟುಮಾಡುತ್ತದೆ, ಸೃಜನಶೀಲತೆಯ ಸಾಮರ್ಥ್ಯವನ್ನು ಕುಗ್ಗಿಸಿ ಮಕ್ಕಳನ್ನು ಕಂಠ ಪಾಠದ ಮೂಲಕ ಉರು ಹೊಡೆಯುವ ಯಂತ್ರಗಳನ್ನಾಗಿಸುತ್ತದೆ. ಇದರಿಂದ ಕಲಿಕೆಯ ಗುಣಮಟ್ಟ ಕುಸಿದು, ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆ ಕುಂಠಿತವಾಗುತ್ತದೆ. ಕನಿಷ್ಠ ಪ್ರಾಥಮಿಕ ಹಂತದವರೆಗೂ ತಾಯ್ನುಡಿ ಆಧಾರಿತ ಶಿಕ್ಷಣವನ್ನು ಕಡ್ಡಾಯಗೊಳಿಸಿ, ನಂತರ ಬಹುಭಾಷಾ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಸೂಕ್ತವೆಂದು ವರದಿ ಸೂಚಿಸುತ್ತದೆ.

ಯುನೆಸ್ಕೊ ಪ್ರಕಟಿಸಿದ 'ನಿಮಗೆ ಅರ್ಥವಾಗದಿದ್ದರೆ, ನೀವು ಹೇಗೆ ಕಲಿಯುತ್ತೀರಿ?' (ಜಾಗತಿಕ ಶಿಕ್ಷಣ ಮೇಲ್ವಿಚಾರಣಾ ವರದಿ, 2016) ವರದಿಯ ಅನ್ವಯ, ಶಿಕ್ಷಣದ ಭಾಷೆ ವಿದ್ಯಾರ್ಥಿಗಳಿಗೆ ಅರ್ಥವಾಗದಿದ್ದರೆ ಕಲಿಕೆ ಪರಿಣಾಮಕಾರಿ ಆಗುವುದಿಲ್ಲ. ದ್ವಿಭಾಷಾ ಮಾಧ್ಯಮ ಬಹುತೇಕ ಮಕ್ಕಳಿಗೆ, ವಿಶೇಷವಾಗಿ ಗ್ರಾಮೀಣ ಮತ್ತು ಹಿಂದುಳಿದ ಸಮುದಾಯಗಳ ಮಕ್ಕಳಿಗೆ ಏಕಕಾಲದಲ್ಲಿ ಎರಡು ಭಾಷೆಯಲ್ಲಿ ವಿಷಯ ಗ್ರಹಿಕೆ ಹಾಗೂ ಆಲೋಚನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸವಾಲಾಗುತ್ತದೆ. ಕಳಪೆ ಶೈಕ್ಷಣಿಕ ಸಾಧನೆಯಿಂದ ಹೆಚ್ಚಿನ ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆ ಬಿಡುವ ಪ್ರಮಾಣ ಹೆಚ್ಚಾಗುತ್ತದೆ. ವರದಿ ಸೂಚಿಸುವಂತೆ, ತಾಯ್ನುಡಿಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಿದರೆ ವಿದ್ಯಾರ್ಥಿಗಳ ಓದು–ಬರಹ ಮತ್ತು ಗಣಿತ ಕೌಶಲಗಳು ಸುಧಾರಿಸುತ್ತವೆ ಮತ್ತು ಸಮಾನ ಶಿಕ್ಷಣಾವಕಾಶಗಳು ವಿಸ್ತರಿಸುತ್ತವೆ.

ಭಾಷಾ ಅಭಿವೃದ್ಧಿ ಮತ್ತು ಬೌದ್ಧಿಕ ಬೆಳವಣಿಗೆಯ ನಡುವಿನ ಸಂಬಂಧವನ್ನು ವಿವರಿಸುವಲ್ಲಿ ಜಿಮ್ ಕಮ್ಮಿನ್ಸ್ ಅವರ (1979) 'ಭಾಷಾ ಅಧ್ಯಯನದ ಪರಸ್ಪರ ಅವಲಂಬನೆಯ ಕಲ್ಪನೆ'ಗೆ ಮಹತ್ವವಿದೆ. ಈ ಸಿದ್ಧಾಂತದ ಪ್ರಕಾರ, ಮೊದಲ ಭಾಷೆಯಲ್ಲಿ ಬೆಳೆದ ಜ್ಞಾನಾತ್ಮಕ ಮತ್ತು ಭಾಷಾತ್ಮಕ ಕೌಶಲಗಳು ಎರಡನೇ ಭಾಷೆಯ ಕಲಿಕೆಗೆ ಆಧಾರವಾಗುತ್ತವೆ. ಅಂದರೆ, ತಾಯ್ನುಡಿ ಬಲವಾದರೆ, ಇಂಗ್ಲಿಷ್ ಸೇರಿದಂತೆ ಇತರ ಯಾವುದೇ ಭಾಷೆಯ ಕಲಿಕೆಯೂ ಸುಲಭವಾಗುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಾಥಮಿಕ ಹಂತದಲ್ಲೇ ದ್ವಿಭಾಷಾ ಅಥವಾ ಇಂಗ್ಲಿಷ್ ಮಾಧ್ಯಮವನ್ನು ಪರಿಚಯಿಸುವುದು, ಈ ಮೂಲಾಧಾರವನ್ನು ದುರ್ಬಲಗೊಳಿಸುತ್ತದೆ. ತಾಯ್ನುಡಿಯಲ್ಲಿ ಗಾಢವಾದ ಸಾಮರ್ಥ್ಯವಿಲ್ಲದೆ, ವಿದ್ಯಾರ್ಥಿಗಳು ಎರಡನೇ ಭಾಷೆಯಲ್ಲಿ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಜಾಗತಿಕ ಸಂಶೋಧನೆಗಳು 'ಮಾತೃಭಾಷಾ ಆಧಾರಿತ ಬಹುಭಾಷಾ ಶಿಕ್ಷಣ' ಎಂಬ ಮಾದರಿಯನ್ನು ಶಿಫಾರಸು ಮಾಡುತ್ತವೆ (ಯುನೆಸ್ಕೊ, 2010). ಈ ಮಾದರಿಯ ಮುಖ್ಯ ತತ್ತ್ವವೇನೆಂದರೆ, ಪ್ರಾಥಮಿಕ ಹಂತದಲ್ಲಿ ಸಂಪೂರ್ಣ ತಾಯ್ನುಡಿಯಲ್ಲಿ ಶಿಕ್ಷಣ ನೀಡಿ, ನಂತರ ಎರಡನೇ ಭಾಷೆಯನ್ನು ಪರಿಚಯಿಸಬೇಕು. ಪ್ರಾಥಮಿಕ ಶಿಕ್ಷಣವನ್ನು ತಾಯ್ನುಡಿ ಮಾಧ್ಯಮದಲ್ಲಿ ನೀಡಿದಾಗ ವಿದ್ಯಾರ್ಥಿಗಳ ಸಾಧನೆ ಅತ್ಯುತ್ತಮವಾಗಿರುತ್ತದೆ (ಕ್ಯಾಥ್ಲೀನ್ ಹ್ಯೂ, 2011). ಇದರಿಂದ ದ್ವಿಭಾಷಾ ಮಾಧ್ಯಮವನ್ನು ಪ್ರಾಥಮಿಕ ಹಂತದಲ್ಲೇ ಜಾರಿಗೊಳಿಸುವುದಕ್ಕಿಂತ, ಕ್ರಮೇಣ ಪರಿಚಯಿಸುವುದು ಹೆಚ್ಚು ಪರಿಣಾಮಕಾರಿ.

ದ್ವಿಭಾಷಾ ಮಾಧ್ಯಮ ಶಿಕ್ಷಣದ ಪರವಾಗಿ ಕೆಲವು ವಾದಗಳಿವೆ. ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಮೊರೆ ಹೋಗಬೇಕೆನ್ನುವುದು ಸಹಜ. ಸಂಶೋಧನೆಗಳು ತೋರಿಸುವುದೇನೆಂದರೆ, ಇಂಗ್ಲಿಷ್ ಅನ್ನು ಬೇಗನೆ ಪರಿಚಯಿಸುವುದರಿಂದ ಉತ್ತಮ ಫಲಿತಾಂಶಗಳು ಸಿಗುತ್ತವೆ ಎಂಬುದು ತಪ್ಪುಕಲ್ಪನೆ. ತಾಯ್ನುಡಿಯಲ್ಲಿ ಗಟ್ಟಿನೆಲೆ ಹೊಂದಿದ ವಿದ್ಯಾರ್ಥಿಗಳು ನಂತರ ಇಂಗ್ಲಿಷ್ ಅನ್ನು ಹೆಚ್ಚು ಪರಿಣಾಮಕಾರಿಯಾಗಿ ಕಲಿಯುತ್ತಾರೆ (ಥಾಮಸ್ ಮತ್ತು ಕೊಲಿಯರ್, 2002).

ಯುನೆಸ್ಕೊ ನಡೆಸಿರುವ ಅಧ್ಯಯನಗಳು ಭಾಷಾ ಕಲಿಕೆಯ ಬಗ್ಗೆ ಹೀಗೆ ಹೇಳುತ್ತವೆ. 'ಭಾಷೆ ಮತ್ತು ಕಲಿಕೆಯ ಬಗ್ಗೆ ನಮಗಿರುವ ತಪ್ಪುಕಲ್ಪನೆಗಳು ನಮ್ಮ ನಿರ್ಧಾರಗಳಿಗೆ ಅಡ್ಡನಿಂತಿವೆ. ಅಂತಹ ಕೆಲವು ಬಹುದೊಡ್ಡ ಮಿಥ್ಯೆಗಳೆಂದರೆ, ಯಾವುದೇ ವಿದೇಶಿ ಭಾಷೆಯನ್ನು (ನಮ್ಮ ಸಂದರ್ಭದಲ್ಲಿ ಆಂಗ್ಲ ಭಾಷೆ) ಕಲಿಯಲು ಉತ್ತಮ ಮಾರ್ಗವೆಂದರೆ, ಅದನ್ನು ಬೋಧನಾ ಮಾಧ್ಯಮವಾಗಿ ಬಳಸಬೇಕೆಂಬುದು. ಇನ್ನೊಂದು, ವಿದೇಶಿ ಭಾಷೆಯನ್ನು ಕಲಿಯಬೇಕಾದರೆ ಸಾಧ್ಯವಾದಷ್ಟು ಬೇಗ ಪ್ರಾರಂಭಿಸಬೇಕು ಎಂಬ ಕಾತುರತೆ. ಮೂರನೆಯದು, ವಿದೇಶಿ ಭಾಷೆಯನ್ನು ಕಲಿಯಲು ಮಾತೃಭಾಷೆಯು ಅಡ್ಡಿಯಾಗುತ್ತದೆ ಎಂಬುದು. ಈ ಎಲ್ಲ ಮಿಥ್ಯೆಗಳು ಸತ್ಯಕ್ಕಿಂತ ಹೆಚ್ಚು ಸುಳ್ಳು ಮತ್ತು ಆಧಾರರಹಿತ ತಪ್ಪುಕಲ್ಪನೆಯಿಂದ ಕೂಡಿವೆ. ಹೀಗಿದ್ದಾಗ್ಯೂ, ನಮ್ಮ ನೀತಿ ನಿರೂಪಕರು ಮತ್ತು ಕಾರ್ಯಾಂಗಗಳ ಮುಖ್ಯಸ್ಥರು ಈ ಮಿಥ್ಯೆಗಳ ಆಧಾರದಲ್ಲಿಯೇ ತೀರ್ಮಾನ ಕೈಗೊಳ್ಳುತ್ತಾರೆ (ಯುನೆಸ್ಕೊ, 2008)'.

ವಿಶ್ವದಾದ್ಯಂತ ಇಂಗ್ಲಿಷ್ ಕಲಿಸಲು ಕಾರ್ಯ ನಿರ್ವಹಿಸುವ ಬ್ರಿಟಿಷ್ ಸಂಸ್ಥೆಯಾದ 'ಬ್ರಿಟಿಷ್ ಕೌನ್ಸಿಲ್", ಈ ವಿಷಯದ ಕುರಿತು ಹೀಗೆ ಹೇಳುತ್ತದೆ. 'ಆಂಗ್ಲ ಭಾಷೆಯಲ್ಲಿ ಪರಿಣತಿ ಸಾಧಿಸಲು ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಕಲಿಸುವುದಕ್ಕಿಂತ ಬೋಧನಾ ಮಾಧ್ಯಮವಾಗಿ ಕಲಿಸುವುದು ಖಚಿತವಾದ ಮಾರ್ಗ ಎಂಬ ಅಭಿಪ್ರಾಯವನ್ನು ಬೆಂಬಲಿಸಲು ಯಾವುದೇ ಪುರಾವೆಯಿಲ್ಲ. ಇಂಗ್ಲಿಷನ್ನು ಒಂದು ಭಾಷಾ ವಿಷಯವನ್ನಾಗಿ ಕಲಿಸಿದಾಗ ಮಾತ್ರ ನಾವು ಆಂಗ್ಲ ಭಾಷೆಯ ಗುಣಮಟ್ಟ ಹಾಗೂ ನಿರರ್ಗಳತೆಯನ್ನು ಸಾಧಿಸಲು ಸಾಧ್ಯ. ತಜ್ಞರ ಅಂದಾಜಿನ ಪ್ರಕಾರ, ಎಲ್ಲ ಪಠ್ಯಕ್ರಮದಾದ್ಯಂತ (ಎಲ್ಲ ವಿಷಯಗಳ) ಕಲಿಕೆಯನ್ನು ಬೆಂಬಲಿಸಲು ಅಗತ್ಯವಿರುವ ಅರಿವಿನ ಮತ್ತು ಶೈಕ್ಷಣಿಕ ಭಾಷಾ ಪ್ರಾವೀಣ್ಯತೆಯನ್ನು ಅಭಿವೃದ್ಧಿಪಡಿಸಲು, ವಿದ್ಯಾರ್ಥಿಗಳಿಗೆ ಆರರಿಂದ ಎಂಟು ವರ್ಷಗಳು ಬೇಕಾಗುತ್ತವೆ. ಆರಂಭಿಕ ಹಂತದಲ್ಲಿಯೇ ಆಂಗ್ಲ ಮಾಧ್ಯಮದ ಶಿಕ್ಷಣವು ಮಕ್ಕಳ ಕಲಿಕೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಶೈಕ್ಷಣಿಕ ಸಾಧನೆಯನ್ನು ಸೀಮಿತಗೊಳಿಸುತ್ತದೆ' (ಬ್ರಿಟಿಷ್ ಕೌನ್ಸಿಲ್, 2017).

ರಾಜ್ಯದಲ್ಲಿ ಜಾರಿಯಿರುವ ದ್ವಿಭಾಷಾ ಮಾಧ್ಯಮ ನೀತಿ, ನಿಜವಾದ ಅರ್ಥದ ಬಹುಭಾಷಾ ಕಲಿಕೆಯ ಮಾನದಂಡಗಳಿಗೆ ಪೂರ್ಣವಾಗಿ ಹೊಂದಿಕೆ ಆಗುವುದಿಲ್ಲ ಎಂಬುದನ್ನು ಮೇಲಿನ ಸಂಶೋಧನಾ ವರದಿಗಳು ನಿರೂಪಿಸುತ್ತವೆ. ದ್ವಿಭಾಷಾ ಶಿಕ್ಷಣವೆಂದರೆ, ಎರಡು ಭಾಷೆಗಳನ್ನೂ ಯೋಜಿತವಾಗಿ, ಕ್ರಮಬದ್ಧವಾಗಿ ಹಾಗೂ ಪರಸ್ಪರ ಪೂರಕವಾಗಿ ಬಳಸುವ ವ್ಯವಸ್ಥೆಯಾಗಿದ್ದು, ತಾಯ್ನುಡಿ ಕಲಿಕೆಯು ಇದರ ಆಧಾರವಾಗಿ ಉಳಿಯಬೇಕು ಮತ್ತು ಎರಡನೇ ಭಾಷೆ ಅದನ್ನು ವಿಸ್ತರಿಸುವ ಸಾಧನವಾಗಿರಬೇಕು. ಆದರೆ, ಪ್ರಸ್ತುತ ನೀತಿಯಲ್ಲಿ ಪುಸ್ತಕಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಬಹುಪಾಲು ಸಂದರ್ಭಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ 'ಮಿಶ್ರ ಬಳಕೆ' ಅಥವಾ 'ಪರ್ಯಾಯ ಬಳಕೆ' ಮಾತ್ರ ಕಾಣಿಸುತ್ತಿದೆ. ಯಾವ ವಿಷಯವನ್ನು ಯಾವ ಭಾಷೆಯಲ್ಲಿ ಯಾವ ಹಂತದಲ್ಲಿ, ಯಾವ ಉದ್ದೇಶಕ್ಕಾಗಿ ಬೋಧಿಸಬೇಕು ಎಂಬ ಸ್ಪಷ್ಟ ಶೈಕ್ಷಣಿಕ ವಿನ್ಯಾಸವಾಗಲಿ ಅಥವಾ ಅದಕ್ಕೆ ಅಗತ್ಯವಾದ ಪೂರ್ಣಪ್ರಮಾಣದ ಸಿದ್ಧತೆಗಳಾಗಲಿ ಕಾಣಿಸುತ್ತಿಲ್ಲ. ಇದರಿಂದಾಗಿ ತರಗತಿಗಳಲ್ಲಿ ಬೇಕಾಬಿಟ್ಟಿ ಕೋಡ್–ಸ್ವಿಚಿಂಗ್; ಕಲಿಕೆಯ ಸಂದರ್ಭದಲ್ಲಿ ಎರಡು ಭಾಷೆಗಳನ್ನು (ಕನ್ನಡ ಮತ್ತು ಇಂಗ್ಲಿಷ್) ಮಿಶ್ರಣ ಮಾಡಿ ಬಳಸುವ ಪ್ರಕ್ರಿಯೆ, ಮಕ್ಕಳಿಗೆ ಕನ್ನಡದಲ್ಲಿ ಬಲವಾದ ಪರಿಕಲ್ಪನಾ ಸ್ಪಷ್ಟತೆಯನ್ನಾಗಲಿ ಅಥವಾ ಇಂಗ್ಲಿಷ್‌ನಲ್ಲಿ ಪ್ರಾವೀಣ್ಯತೆಯನ್ನಾಗಲಿ ತಂದುಕೊಡುವುದಿಲ್ಲ.

ಕೆನಡಾ, ಅಮೆರಿಕ, ಫಿನ್ಲೆಂಡ್, ಸಿಂಗಪುರಗಳಲ್ಲಿ ಕಾಣುವಂತೆ ಶಿಕ್ಷಕರ ವಿಶೇಷ ತರಬೇತಿ, ಪಠ್ಯಕ್ರಮದ ದ್ವಿಭಾಷಾ ವಿನ್ಯಾಸ, ಮೌಲ್ಯಮಾಪನದ ಸಮನ್ವಯ, ಎರಡೂ ಭಾಷೆಯಲ್ಲಿ ಕಲಿಸುವ ಉತ್ಕೃಷ್ಟ ಸಾಮರ್ಥ್ಯವಿಲ್ಲದೆ ಬರೀ ಪುಸ್ತಕಗಳ ದ್ವಿಭಾಷಾ ಮುದ್ರಣ ಅಥವಾ ಸಾಮರ್ಥ್ಯವಿಲ್ಲದ ಶಿಕ್ಷಕರನ್ನು ಆಂಗ್ಲಭಾಷೆ ಬಳಸುವಂತೆ ಒತ್ತಾಯಿಸಿದ ಮಾತ್ರಕ್ಕೆ ಅದು ದ್ವಿಭಾಷಾ ಮಾಧ್ಯಮವಾಗುವುದಿಲ್ಲ. ಜಾಗತಿಕ ಸಂಶೋಧನೆಗಳು ಹೇಳುವಂತೆ, ಪ್ರಾಥಮಿಕ ಹಂತದಲ್ಲಿ ತಾಯ್ನುಡಿಯೇ ಕಲಿಕೆಯ ಆಧಾರ ಆಗಿರಬೇಕು. ಕರ್ನಾಟಕದ ಪ್ರಸ್ತುತ ನೀತಿ ದ್ವಿಭಾಷಾ ಮಾಧ್ಯಮದ ಮೂಲತತ್ತ್ವವನ್ನು ದುರ್ಬಲಗೊಳಿಸುವ ಜೊತೆಗೆ ಮಕ್ಕಳು ಹಾಗೂ ಶಿಕ್ಷಕರನ್ನು ಎಡಬಿಡಂಗಿಗಳನ್ನಾಗಿಸುವ ಅಪಾಯ ದಟ್ಟವಾಗಿದೆ.



ವಾಚಕರ ವಾಣಿ

ದ್ವಿತೀಯ ಪಿಯು ಮೌಲ್ಯಮಾಪನ ಪ್ರಹಸನ

ಈ ಬಾರಿ ಪದವಿಪೂರ್ವ ಶಿಕ್ಷಣ ಇಲಾಖೆಯು ಪ್ರಕಟಿಸಿರುವ ದ್ವಿತೀಯ ಪಿಯು ಫಲಿತಾಂಶ ಹಲವು ವಿದ್ಯಾರ್ಥಿಗಳ ಪಾಲಿಗೆ ಪ್ರಹಸನವಾಗಿದೆ. ಇಷ್ಟೊಂದು ನಿರ್ಲಕ್ಷ್ಯದಿಂದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವುದು ಅಕ್ಷಮ್ಯ. ಇಲಾಖೆಯು ಮೌಲ್ಯಮಾಪಕರ ವಿಷಯದಲ್ಲಿ ಗಂಭೀರವಾಗಿಲ್ಲ. ಕಠಿಣ ಎಂದು ಹೇಳಿಕೊಳ್ಳುವ ವಿಷಯಗಳನ್ನು ಬಿಡಿ; ಕನ್ನಡ ಭಾಷಾ ವಿಷಯದಲ್ಲಿಯೂ ಸಮರ್ಪಕವಾಗಿ ಮೌಲ್ಯಮಾಪನ ನಡೆದಿಲ್ಲ. ಮರುಮೌಲ್ಯಮಾಪನದಲ್ಲಿ ಎಡವಟ್ಟುಗಳು ಬಯಲಾಗುತ್ತಿವೆ. ಬಹುತೇಕ ಮೌಲ್ಯಮಾಪಕರು ಅರೆಕಾಲಿಕ ಇದ್ದಾರೆ. ಅವರು ಮಾಡುವ ತಪ್ಪು ಮೌಲ್ಯಮಾಪನಕ್ಕೆ ಶಿಕ್ಷೆ ವಿಧಿಸಲು ಸರ್ಕಾರಕ್ಕೆ ಅವಕಾಶ ಇಲ್ಲ. ಇಂತಹ ವ್ಯವಸ್ಥೆಯ ನಡುವೆ ನಮ್ಮ ಮಕ್ಕಳು ಓದುತ್ತಿದ್ದಾರೆ! ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ಆಗುವುದು ಯಾವಾಗ?

ಎಸ್.ಆರ್. ಬಿರಾದಾರ, ಇಂಡಿ

ಮತ್ತದೇ ದುರಂತ, ಅದೇ ನಾಟಕ–ಅಸಡ್ಡೆ

ಬಿಡದಿ ಬಳಿ ಏಳೆಂಟು ಸಾವಿರ ಎಕರೆ ಪ್ರದೇಶದಲ್ಲಿ ಎಐಸಿಟಿ ಅಭಿವೃದ್ಧಿಗೆ ಸರ್ಕಾರ ಮುಂದಾಗಿದೆ; ಮತ್ತೊಂದೆಡೆ ಮಳೆಯಿಂದ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದು ಏಳು ಮಂದಿ ಸಾವನ್ನಪ್ಪಿದ್ದಾರೆ. ಈ ಸುದ್ದಿಗಳನ್ನು ಓದಿದಾಗ ಅರವತ್ತು ಎಪ್ಪತ್ತರ ದಶಕದಲ್ಲಿ 50 ಜನ ಹಿಡಿಸುವ ಕಡೆ, 150 ಜನ ಪ್ರಯಾಣಿಸುತ್ತಿದ್ದ ನಮ್ಮ ಬೆಂಗಳೂರು ನಗರ ಸಾರಿಗೆ ಬಸ್ ನೆನಪಿಗೆ ಬರುತ್ತದೆ. ಒಂದು ಕಡೆ ಇರುವ ನಗರಕ್ಕೆ ಸರಿಯಾದ ವ್ಯವಸ್ಥೆ ಕಲ್ಪಿಸಲು ವಿಫಲವಾಗಿರುವ ಸರ್ಕಾರ, ಇನ್ನೊಂದು ಕಡೆ ವಿಸ್ತರಣೆಗೆ ಮುಂದಾಗಿರುವುದು ಹಾಸ್ಯಾಸ್ಪದ. ಅನಾಹುತವಾದಾಗ ಒಬ್ಬಿಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಿ ಸಂತ್ರಸ್ತರಿಗೆ ಪರಿಹಾರ ನೀಡಿ ಕೈತೊಳೆದುಕೊಂಡರೆ ಮುಗಿಯಿತು; ಮುಂದಿನ ಅನಾಹುತ ಆಗುವವರೆಗೂ ಎಲ್ಲರೂ ನಿಶ್ಚಿಂತೆ. ಮತ್ತೆ ಅನಾಹುತ ಆದಾಗ ಮತ್ತದೇ ಪುನರಾವರ್ತನೆ. ಇದು ಪಕ್ಷಾತೀತವಾಗಿ ಅಧಿಕಾರದಲ್ಲಿರುವ ಎಲ್ಲಾ ಸರ್ಕಾರಗಳ ನಡವಳಿಕೆ.

ಟಿ.ವಿ.ಬಿ. ರಾಜನ್, ಬೆಂಗಳೂರು

> **ಭಿನ್ನಮತ**
>
> ಚುನಾವಣೆಯಲ್ಲಿ
> ಪರಿಪರಿಯಾಗಿ
> ಮಾಡುವರು
> ಮತಯಾಚನೆ
> ಗೆದ್ದ ನಂತರ,
> ಅಧಿಕಾರದ ಗದ್ದುಗೆ
> ಹಿಡಿಯಲು
> ನಾನಾ ಯೋಚನೆ!
>
> **ಮ.ಗು. ಬಸವಣ್ಣ**
> ಮೈಸೂರು

ಕಾಗದರಹಿತ ಆಸ್ತಿ ನೋಂದಣಿ ಸ್ವಾಗತಾರ್ಹ

ರಾಜ್ಯ ಸರ್ಕಾರದ ಆದಾಯವನ್ನು ಹೆಚ್ಚಿಸುವಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪಾತ್ರ ಹಿರಿದು. ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ ಸೇರಿದಂತೆ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಕಾಗದರಹಿತ ಆಸ್ತಿ ನೋಂದಣಿ ಜಾರಿಗೆ ಮುಂದಾಗಿರುವುದು ಸ್ವಾಗತಾರ್ಹ. ಪಾರದರ್ಶಕವಾಗಿ ಜನಸಾಮಾನ್ಯರಿಗೆ ಆಸ್ತಿ ನೋಂದಣಿ ವ್ಯವಸ್ಥೆ ತಲಪಿಸುವ ದೃಷ್ಟಿಯಿಂದ ಮಾಡಿರುವ ಈ ಕಾರ್ಯ ಶ್ಲಾಘನೀಯ. ದಾಖಲೆಗಳಲ್ಲಿ ಲೋಪ–ದೋಷಗಳಿದ್ದರೆ ಸರಿಪಡಿಸಿಕೊಂಡು ಮುಕ್ತ ನೋಂದಣಿಗೆ ಅವಕಾಶ ದೊರಕಿರುವುದು ಸಂತಸ ತಂದಿದೆ.

ಶ್ರೀನಿವಾಸ ರಾಂಪುರ, ಚನ್ನಪಟ್ಟಣ

ಕೈಬಿಟ್ಟದ್ದ 'ಅತಿಥಿ'ಗಳು ಮರಳಿ ಗೂಡಿಗೆ!

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ನೂರಾರು ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದರು. ಆದರೆ, ಯುಜಿಸಿ ನಿಗದಿಪಡಿಸಿದ ಅರ್ಹತೆ ಹೊಂದಿಲ್ಲದ ಕಾರಣ ಕೆಲಸ ಕಳೆದುಕೊಂಡಿದ್ದರು. ಈ ಉಪನ್ಯಾಸಕರನ್ನು 'ಶೈಕ್ಷಣಿಕ ಸಂಯೋಜಕ' ಹುದ್ದೆ ಸೃಜಿಸಿ ನೇಮಕ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿರುವುದು ಒಳ್ಳೆಯ ನಿರ್ಧಾರ. ಇದು ಉದ್ಯೋಗ ವಂಚಿತ ಅತಿಥಿ ಉಪನ್ಯಾಸಕರ ಕುಟುಂಬಗಳ ಬದುಕಿನಲ್ಲಿ ಭರವಸೆಯ ಬೆಳಕು ಮೂಡಿಸಿದೆ. ಯುಜಿಸಿ ನಿಯಮಗಳು ಮತ್ತು ಹೈಕೋರ್ಟ್ ಆದೇಶಗಳಿಗೆ ಸಡ್ಡು ಹೊಡೆಯದೇ ಜಾಣ್ಮೆಯಿಂದ ಶೈಕ್ಷಣಿಕ ಸಂಯೋಜಕ ಹುದ್ದೆಗಳನ್ನು ಸೃಜಿಸಿ ಕೈಬಿಟ್ಟ ಅತಿಥಿಗಳನ್ನು ಮರಳಿ ಕೈಹಿಡಿದು ತನ್ನ ಗೂಡಿಗೆ ಕರೆತರಲಿರುವ ಉನ್ನತ ಶಿಕ್ಷಣ ಇಲಾಖೆಯ ನಡೆ ಔಚಿತ್ಯಪೂರ್ಣವಾದುದು. 'ಅತಿಥಿ'ಗಳ ಕಷ್ಟಕಾಲದಲ್ಲಿ ಬದ್ಧತೆ ಪ್ರದರ್ಶಿಸಿದ ಇಲಾಖೆಯು ಅಭಿನಂದನಾರ್ಹ. ಅತಿಥಿ ಉಪನ್ಯಾಸಕ ಹುದ್ದೆ ಕಾಯಂ ಆಗುವ ಸುದಿನವೂ ಆದಷ್ಟು ಬೇಗ ಬರುವಂತಾಗಲಿ.

ಸಿದ್ಧಲಿಂಗಸ್ವಾಮಿ ಹಿರೇಮಠ, ತುಮಕೂರು

ಜನಸಂಖ್ಯೆ ನಿಯಂತ್ರಣ: ದಕ್ಷಿಣಕ್ಕೆ ಶಿಕ್ಷೆಯೆ?

'ಮರುವಿಂಗಡಣೆ: ದಕ್ಷಿಣದ ತಪ್ಪು!' ಲೇಖನ (ಲೇ: ಸೂರ್ಯ ಪ್ರಕಾಶ್, ಪ್ರ.ವಾ., ಏ. 30) ಆಂಶಿಕ ಸತ್ಯಗಳಿಂದ ಕೂಡಿದೆ. ದಕ್ಷಿಣ ಭಾರತದ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ದಶಕಗಳಿಂದಲೂ ಉತ್ತಮ ಸಾಧನೆ ಮಾಡಿವೆ. ಈ ರಾಜ್ಯಗಳಲ್ಲಿ ಸಂತಾನೋತ್ಪತ್ತಿ ದರ ಈಗಾಗಲೇ 1.5ರಿಂದ 1.8ರ ನಡುವೆ ಇದೆ. ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನದಂತಹ ರಾಜ್ಯಗಳಲ್ಲಿ ಹೆಚ್ಚಿನ ಮಟ್ಟದಲ್ಲಿದೆ. ರಾಷ್ಟ್ರೀಯ ಜನಸಂಖ್ಯಾ ನೀತಿ ಅನುಸರಿಸಿದ ರಾಜ್ಯಗಳಿಗೆ ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗುವುದು ನ್ಯಾಯಸಮ್ಮತವಲ್ಲ.

ಸಂವಿಧಾನದ 81ನೇ ವಿಧಿಯ ಪ್ರಕಾರ ಜನಸಂಖ್ಯೆಗೆ ಅನುಗುಣವಾಗಿ ಸೀಟುಗಳು ಹಂಚಿಕೆಯಾಗುವುದು ತರ್ಕಬದ್ಧವೇ. ಆದರೆ, ಪೂರ್ಣವಾಗಿ ಜನಸಂಖ್ಯೆಯನ್ನೇ ಪರಿಗಣಿಸುವುದು ಸರಿಯಲ್ಲ. ಜನಸಂಖ್ಯೆ ಕಡಿಮೆ ಇರುವ ರಾಜ್ಯಗಳಿಗೆ ಕೆಲವು ವಿಶೇಷ ಸೀಟುಗಳು ಅಥವಾ ಕನಿಷ್ಠ ರಕ್ಷಣೆ ನೀಡುವ ಸೂತ್ರವನ್ನು ಉತ್ತರ ಮತ್ತು ದಕ್ಷಿಣದವರು ಚರ್ಚಿಸಿ ರೂಪಿಸುವುದು ಉತ್ತಮ ಪರಿಹಾರವಾಗಬಹುದು. ಈ ನಿಟ್ಟಿನಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಸಂಕುಚಿತ ನಿಲುವು ಬಿಟ್ಟು ದೂರದೃಷ್ಟಿಯಿಂದ ದೇಶದ ಹಿತವನ್ನು ಯೋಚಿಸಬೇಕಿದೆ. ಹಾಗೆಯೇ, ದಕ್ಷಿಣ ಭಾರತಕ್ಕೆ ಅನ್ಯಾಯವಾಗದಂತೆಯೂ ನೋಡಿಕೊಳ್ಳಬೇಕಿದೆ.

ಮಹೇಂದ್ರ ಟಿ.ಎಂ., ಹೂಡೇಂ

ಕಾರ್ಮಿಕ ಹಕ್ಕುಗಳಿಗೆ ಧಕ್ಕೆ

ಶ್ರಮಿಕರು ರಕ್ತ ಚೆಲ್ಲಿ ಗೆದ್ದುಕೊಂಡ ಹಲವಾರು ಹಕ್ಕುಗಳನ್ನು ಕಾರ್ಪೊರೇಟ್ ಪ್ರಭುತ್ವ ಕಿತ್ತುಕೊಂಡಿದೆ. ಎಂಟು ಗಂಟೆಯ ಕೆಲಸದ ಅವಧಿ ಮತ್ತೆ ಹದಿನಾರು ತಾಸಿಗೆ ಬಂದಿದೆ. ಸಂಬಳ ಮತ್ತಿತರ ಕನಿಷ್ಠ ಹಕ್ಕುಗಳನ್ನು ಕಳೆದುಕೊಳ್ಳುವ ದಿನ ದೂರವಿಲ್ಲ.

ಸನತ್ ಕುಮಾರ್ ಬೆಳಗಲಿ, ಹಿರಿಯ ಪತ್ರಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

ನೆಹರೂ ಹಾಗೂ ಅಂಬೇಡ್ಕರ್ ಅವರು ದೇಶದಲ್ಲಿ ಬೌದ್ಧಧರ್ಮಕ್ಕೆ ಒತ್ತಾಸೆ ಕೊಡದೇ ಇದ್ದಿದ್ದರೆ ಭಾರತದ ತ್ರಿವರ್ಣ ಧ್ವಜದಲ್ಲಿ ಅಶೋಕ ಚಕ್ರವೇ ಇರುತ್ತಿರಲಿಲ್ಲ. ಬೇರೆ ಯಾರಾದರೂ ಅಧಿಕಾರಕ್ಕೆ ಬಂದಿದ್ದರೆ, ಅಶೋಕ ಚಕ್ರ ಬೇಡ, ಸುದರ್ಶನ ಚಕ್ರ ಇರಲಿ ಎನ್ನುತ್ತಿದ್ದರು.

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಬುಧವಾರ, 2-5-2001

• **ಒತ್ತಡಕ್ಕೆ ಮಣಿದು ಕಾರ್ಮಿಕ ಕಾಯ್ದೆ ತಿದ್ದುಪಡಿ: ಆರೋಪ**

ನವದೆಹಲಿ, ಮೇ 1 (ಪಿಟಿಐ)– 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದುಡಿಯುವ ವರ್ಗದ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯ ನಿರ್ವಹಿಸುತ್ತಿದ್ದು, ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಒತ್ತಡಕ್ಕೆ ಒಳಗಾಗಿ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡುತ್ತಿದೆ' ಎಂದು ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ರಂಗದ ಅಧ್ಯಕ್ಷ ಬಿ.ಕೆ. ಪ್ರಸಾದ್ ಇಂದು ಇಲ್ಲಿ ತೀಕ್ಷ್ಣವಾಗಿ ಟೀಕಿಸಿದರು.

ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ ಇಲ್ಲಿ ನಡೆದ ಕಾರ್ಮಿಕರ ಪ್ರಮುಖ ರ‍್ಯಾಲಿ ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

'ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ವಿಶ್ವ ವಾಣಿಜ್ಯ ಸಂಘಟನೆಯ ಒತ್ತಡಕ್ಕೆ ಮಣಿದು ಕಾರ್ಮಿಕ ವರ್ಗದ ಒಳಿತಿಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ' ಎಂದರು.

75 ವರ್ಷಗಳ ಹಿಂದೆ

ಬುಧವಾರ, 2-5-1951

• **ಕ್ಷಾಮ ನಿವಾರಣಾ ಕಾರ್ಯದಲ್ಲಿ ಎಲ್ಲರೂ ಶ್ರಮಿಸಿ**

ದೆಹಲಿ, ಮೇ 1– ಪ್ರಧಾನಿ ಪಂಡಿತ್ ನೆಹರೂರವರು ಇಂದು ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುತ್ತಾ ಆಹಾರ ಕ್ಷಾಮವನ್ನು ತಪ್ಪಿಸಲು ಪ್ರತಿಯೊಬ್ಬ ಭಾರತೀಯನೂ ತನ್ನ ಕೈಲಾದುದನ್ನೆಲ್ಲ ಮಾಡಬೇಕು ಎಂದು ಕರೆಯಿತ್ತರು.

ನಾವು ತಿಳಿದುಕೊಂಡಿರುವ ಮಟ್ಟಿಗೆ ಕ್ಷಾಮವೆಂಬ ಶಬ್ದವು ಸದ್ಯಕ್ಕೆ ಅಷ್ಟೊಂದು ವಿಶಾಲ, ವ್ಯಾಪಕವಾಗಿಲ್ಲ. ಆದರೆ, ಕ್ಷಾಮ ಮಾರಿಯ ಘೋರ ಭ್ರಾಂತಿಯು ನಾಡಿನ ಮೇಲೆಲ್ಲ ಆವರಿಸಿರುವುದಂತೂ ನಿಜ ಎಂದು ಅವರು ಹೇಳಿದರು.

ನಮ್ಮ ಎಲ್ಲ ಸಾಧನ ಸಂಪತ್ತು, ಸರ್ವಶಕ್ತಿ ಮತ್ತು ವಿಶಿಷ್ಟ ಸತ್ವವನ್ನೂ ಉಪಯೋಗಿಸಿ ಈ ಕ್ಷಾಮದ ವಿರುದ್ಧ ಹೋರಾಟವನ್ನು ಗೆಲ್ಲಲೇಬೇಕು. ಈ ಕಾರ್ಯದಲ್ಲಿ ನಮಗೆ ಜಯ ಸಿದ್ಧವೆಂಬ ಭರವಸೆ ನನಗಿದೆ ಎಂಬುದಾಗಿ ನೆಹರೂ ಅವರು ಭಾರತದ ಪ್ರಜೆಗಳನ್ನು ಕುರಿತು ತಿಳಿಸಿದರು.

ಚುರುಮುರಿ

ಕರುನಾಡ ಕಾಪಿಕ್ಯಾಟ್!

• ತುರುವೇಕೆರೆ ಪ್ರಸಾದ್

'ನಮ್ ಕಾಲ್ದಾಗೆ, 'ನೋಡಿ ಕಲಿ, ಮಾಡಿ ತಿಳಿ' ಅಂತಿದ್ರು. ಈಗ ನೋಡಿ ಕಲಿ, ಮಾಡು ನಕಲಿ ಅನ್ನೋ ಅಂಗಾಗೈತೆ. ಮತ್ತೆ ಈ ನಕಲಿ ಸರ್ಟಿಫಿಕೇಟು, ಪಿಎಚ್.ಡಿ ಸದ್ ಮಾಡ್ತಿವೆ' ಎಂದ ಗುದ್ಲಿಂಗ.

'ಮತ್ತಿನ್ನೇನ್ಲಾ ಮಾಡಾರು? ಇದ್ದದ್ನೇ ತಿರುಗಿಸಿ ಮುರುಗಿಸಿ ಬರ್ದು ಎಲ್ಲಾ ವಿಷಯ ಕಾಲಿ ಆಗವೆ. ಇನ್ನೆಂಗ್ ಒಸ ಪ್ರಬಂಧ ಬರ್ದು ಪಿಎಚ್.ಡಿ ತಕಾಳಾದು? ಹಾಳಾದ್ದು ಎಐ ಕಾಟ ಬೇರೆ. ಅದು ಒಂದು ಅಕ್ಷರ ಎತ್ತಾಕ್ಕಂಡ್ರೂ ಗಬಕ್ಕಂತ ಹಿಡ್ಕಂಬುಡುತ್ತೆ' ಎಂದು ಮಾಲಿಂಗ ಪಿಎಚ್.ಡಿ ಪ್ರವೀಣರ ಪರ ವಕಾಲತ್ತು ವಹಿಸಿದ.

'ಅದ್ರ ಮೇಲೇ ಪ್ರಬಂಧ ಬರುದ್ರಾಯ್ತು. ಯಂತ್ರಗಳ ಕೃತಕ ಬುದ್ಧಿಮತ್ತೆ ಮತ್ತು ಬುದ್ಧಿ ಒತ್ತೆ ಇಟ್ಟ ಮನುಷ್ಯರ ಕೃತ್ರಿಮ ಬುದ್ಧಿಮತ್ತೆ ಅಂತ ಬರೀಬಹುದು' ಎಂದ ಕಲ್ಲೇಶಿ.

'ಮೇಲುಗೈ ವಿದ್ಯಾರ್ಥಿನಿಯರ ಹಿಂದಿನ ಕೊಡುಗೈ ವಿದ್ಯಾರ್ಥಿಗಳ ಅಳಲು: ಒಂದು 'ಫಾಲೋ'ಅಪ್ ಅಧ್ಯಯನ ಅಂತ ಬರೀಬಹುದು'.

'ರಾಜಕೀಯದಲ್ಲಂತೂ ಮಸ್ತು ವಿಷಯ ಅವೆ. ಕರುನಾಡ ಕಲಿಗಳ ದೆಹಲಿ ದಂಡಯಾತ್ರೆಗಳು: ಒಂದು ಹಾರಿಕೆ ಅಧ್ಯಯನ', '...ದೀ ...ದೀ ಪದದ ಎಲೆಕ್ಷನ್ ಚಲ್ಲಣಗಳು' ಅಂತ ಬರೀಬಹುದು'.

'ವೂ ಕಣ್ಲಾ, ಕಾದ ಬಂಡೆ ಮೇಲೆ ನಿಂತ ಕೆಚ್ಚಿನ ಟಗರು: ಸಾಂಸ್ಕೃತಿಕ ಒಳಕರೆಗಳು ಮತ್ತು ಹೊರಬರೆಗಳು' ಅಂತಾನೂ ಬರೀಬಹುದು.

'ಈ ನಕಲು ಮಾಡೋ ಬೋಗಸ್ ಪಂಡಿತರ ಮೇಲೆ 'ಕಾಪಿಚಟ್ ಪರಂಪರೆಯಲ್ಲಿ ಕನ್ನಡದ ಪುಸಿಕ್ಯಾಟ್' ಅಂತ ಡಬಲ್ ಪಿಎಚ್.ಡಿ ಪ್ರಬಂಧ ಕೊರೀಬಹುದು'.

'ಪುಸಿಕ್ಯಾಟ್ ಅಲ್ಲ ಹುಸಿಕ್ಯಾಟ್! ಅಲ್ಲಲ್ಲೇ ಹುಟ್ಟಿದಾಗ್ನಿಂದ ಅಪ್ಪ ಅಮ್ಮನ್ ನೋಡಿ ಕಲಿ, ಮೇಷ್ಟ್ರನ್ನ ನೋಡಿ ಕಲಿ ಅಂತ ಪೇಜ್‌ಗಟ್ಲೆ ಕಾಪಿ ಬರ್ಸಿ, ಈಗ ನಕಲು ಮಾಡ್ಬೇಡ ಅಂದ್ರೆ ಎಂಗ್ಲಾ?' ಎಂದ ಪರ್ಮೇಶಿ.

ಎಲ್ಲಾ ಏನು ಹೇಳಬೇಕೋ ತಿಳಿಯದೆ ಪರ ಪರ ತಲೆ ಕೆರೆದುಕೊಂಡರು.

ಸಂಗತ

'ಗೃಹ ಆರೋಗ್ಯ': ಅಣ್ಣನ ಸಂಕಟಕ್ಕೆ ಉತ್ತರ

ಜನಸಾಮಾನ್ಯರ ಮನೆಬಾಗಿಲಿಗೆ ಆರೋಗ್ಯಸೇವೆ ನೀಡುವ ಯೋಜನೆಯ ಹಿಂದೆ, ಅಣ್ಣನ ಸಂಕಟ ಹಾಗೂ ಅದು ನನ್ನೊಳಗೆ ಉಂಟು ಮಾಡಿದ್ದ ತಳಮಳ–ಪ್ರಶ್ನೆಗಳಿವೆ.

• ದಿನೇಶ್ ಗುಂಡೂರಾವ್

ಅದು ಎಂಬತ್ತರ ದಶಕದ ಕೊನೆಯ ಭಾಗ. ನಾನಾಗ ಎಂಜಿನಿಯರಿಂಗ್ ಓದುತ್ತಿದ್ದೆ. ಮನೆಯಲ್ಲಿ ನಾವೆಲ್ಲರೂ ಅಪ್ಪನನ್ನು 'ಅಣ್ಣ' ಎಂದೇ ಕರೆಯುತ್ತಿದ್ದೆವು. ಅಣ್ಣನ ಮುಖದಲ್ಲಿದ್ದ ವರ್ಚಸ್ಸು, ಜನರಿಗಾಗಿ ಸದಾ ಮಿಡಿಯುತ್ತಿದ್ದ ಅವರ ತುಡಿತ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿತ್ತು. ಅನಿರೀಕ್ಷಿತವಾಗಿ ಕ್ಯಾನ್ಸರ್ ಎಂಬ ಕಾಯಿಲೆ ಅವರನ್ನು ಆವರಿಸಿದಾಗ ನಮ್ಮ ಇಡೀ ಜಗತ್ತೇ ಸ್ತಬ್ಧವಾದಂತಾಯಿತು. ಅಣ್ಣನಿಗೆ ಸುಧಾರಿತ ಚಿಕಿತ್ಸೆ ಕೊಡಿಸಲು ನಾವು ಕಡಲಾಚೆಯ ದೇಶಕ್ಕೆ ಹೋಗಬೇಕಾಯಿತು.

ವಿದೇಶದ ಆಸ್ಪತ್ರೆಯ ಗಾಜಿನ ಗೋಡೆಗಳ ನಡುವೆ ಅಣ್ಣನಿಗೆ ಚಿಕಿತ್ಸೆ ನಡೆಯುತ್ತಿದ್ದಾಗ, ನನ್ನ ಮನಸ್ಸನ್ನು ಅಸ್ಪಷ್ಟವಾದ ನೋವು ಕಾಡುತ್ತಿತ್ತು. 'ಒಂದು ರಾಜ್ಯದ ಮುಖ್ಯಮಂತ್ರಿ ಆಗಿದ್ದವರು ಸುಧಾರಿತ ಚಿಕಿತ್ಸೆ ಪಡೆಯಲು ಇಷ್ಟೊಂದು ಪ್ರಯಾಸಪಡಬೇಕಾದರೆ, ಜನಸಾಮಾನ್ಯರಿಗೆ ಇಂತಹ ಕಾಯಿಲೆ ಬಂದರೆ ಅವರು ಯಾರ ಮನೆ ಬಾಗಿಲು ತಟ್ಟಬೇಕು?' ಆ ಪ್ರಶ್ನೆ ಎಂಜಿನಿಯರಿಂಗ್ ಪಾಠಗಳಿಗಿಂತಲೂ ಗಂಭೀರವಾಗಿ ನನ್ನನ್ನು ಕಾಡತೊಡಗಿತ್ತು.

ಕಾಲಚಕ್ರ ಉರುಳಿ ನಾನೀಗ ಆರೋಗ್ಯ ಸಚಿವನಾಗಿದ್ದೇನೆ. ನಾಡಿನ ಕಟ್ಟಕಡೆಯ ಮನುಷ್ಯನಿಗೂ ಆರೋಗ್ಯಸೇವೆ ಎಂಬ ಸಂಕಲ್ಪದೊಂದಿಗೆ, ಪ್ರತಿ ಜಿಲ್ಲೆಯಲ್ಲೂ ಉಚಿತ ಕಿಮೋಥೆರಪಿ ಚಿಕಿತ್ಸಾ ಸೌಲಭ್ಯ ಮತ್ತು ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಿದ್ದೇವೆ.

ಈಗ ನಾವು ಹೋರಾಡಬೇಕಾಗಿರುವುದು ಅಸಾಂಕ್ರಾಮಿಕ ರೋಗಗಳ ವಿರುದ್ಧ. ಒತ್ತಡ, ಜೀವನಶೈಲಿ, ಬದಲಾದ ಬದುಕಿನ ರೀತಿಯಿಂದಲೇ ಅದೆಷ್ಟೋ ಕಾಯಿಲೆಗಳು ಸದ್ದಿಲ್ಲದೆ ನಮ್ಮನ್ನು ಕಾಡುತ್ತಿವೆ. ಈ ಚಿಂತನೆಯಿಂದಲೇ ರೂಪಿತವಾದದ್ದು 'ಗೃಹ ಆರೋಗ್ಯ' ಯೋಜನೆ. 'ನಿಮ್ಮ ಆರೋಗ್ಯ ನಿಮ್ಮ ಮನೆ ಬಾಗಿಲಿಗೆ' ಎಂಬುದು ಬರೀ ಘೋಷಣೆಯಲ್ಲ. ನಮ್ಮ ಆಶಾ ಕಾರ್ಯಕರ್ತೆಯರು ಮಳೆ, ಗಾಳಿ, ಬಿಸಿಲೆನ್ನದೆ ಹಳ್ಳಿ ಹಳ್ಳಿಗಳ ಪ್ರತಿ ಮನೆಗೆ ತೆರಳಿ, ಕ್ಷೇಮ ವಿಚಾರಿಸುತ್ತಿದ್ದಾರೆ.

'ಗೃಹ ಆರೋಗ್ಯ' ಯೋಜನೆಯಡಿ ನಾವು ಬರೀ ಮೇಲ್ಪದರದ ತಪಾಸಣೆ ಮಾಡುತ್ತಿಲ್ಲ. ಬದಲಾಗಿ, ಮನುಷ್ಯನ ಬದುಕನ್ನು ಕಬಳಿಸುವ 14 ಬಗೆಯ ಪ್ರಮುಖ ಅಸಾಂಕ್ರಾಮಿಕ ರೋಗಗಳ ಪತ್ತೆಯನ್ನು ಗುರಿಯಾಗಿಸಿಕೊಂಡಿದ್ದೇವೆ. ಇತ್ತೀಚಿನ ವರದಿಗಳ ಪ್ರಕಾರ, ಈವರೆಗೆ ಸುಮಾರು 60 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಲಾಗಿದ್ದು, 1.33 ಕೋಟಿಗೂ ಅಧಿಕ ಜನರಿಗೆ ಜಾಗೃತಿ ಮೂಡಿಸಲಾಗಿದೆ. ಒಂದು ಕೋಟಿಗೂ ಹೆಚ್ಚು ಜನರ ತಪಾಸಣೆ ನಡೆಸಿದಾಗ ಕಂಡುಬಂದ ಅಂಕಿ–ಅಂಶಗಳು ಆತಂಕಕಾರಿ ಮಾತ್ರವಲ್ಲ, ನಮಗೆ ದಾರಿದೀಪವೂ ಆಗಿವೆ.



ಮಧುಮೇಹದ ಸಮಸ್ಯೆ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿರುವುದು ತಪಾಸಣೆಯಲ್ಲಿ ಕಂಡುಬಂದಿದೆ. ಮನೆಯ ಜವಾಬ್ದಾರಿ, ಕುಟುಂಬದ ಹಿತಾಸಕ್ತಿ ಕಾಯುವಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಕಾಳಜಿಗೆ ಆದ್ಯತೆ ನೀಡುತ್ತಿಲ್ಲ. ಈಗಾಗಲೇ 19.46 ಲಕ್ಷಕ್ಕೂ ಹೆಚ್ಚು ಮಧುಮೇಹಿಗಳನ್ನು ಗುರ್ತಿಸಿ, ಅವರಿಗೆ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದೇವೆ. ಹಾಗೆಯೇ, 25.12 ಲಕ್ಷಕ್ಕೂ ಹೆಚ್ಚು ಜನರಲ್ಲಿ ಅಧಿಕ ರಕ್ತದೊತ್ತಡ ಪತ್ತೆಯಾಗಿದ್ದು, ಔಷಧೋಪಚಾರದ ವ್ಯವಸ್ಥೆ ಮಾಡಲಾಗಿದೆ.

ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವ ಯೋಜನೆಗಳು ಸಫಲವಾಗುತ್ತಿವೆ. 76 ಲಕ್ಷಕ್ಕೂ ಹೆಚ್ಚು ಜನರನ್ನು ಬಾಯಿ ಕ್ಯಾನ್ಸರ್ ತಪಾಸಣೆಗೆ ಒಳಪಡಿಸಿದ್ದರೆ, ಲಕ್ಷಾಂತರ ಮಹಿಳೆಯರನ್ನು ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ತಪಾಸಣೆಗೆ ಒಳಪಡಿಸಲಾಗಿದೆ. ಸುಮಾರು 1,483 ಜನರಲ್ಲಿ ಗಂಭೀರ ರೋಗ ಲಕ್ಷಣಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಅವರಿಗೆ ಚಿಕಿತ್ಸೆ ಆರಂಭಿಸಲಾಗಿದೆ. ಈ ಪ್ರತಿಯೊಂದು ಪತ್ತೆಯೂ ನಮಗೆ ಒಂದು ಜೀವ ಉಳಿಸಿದ ಸಾರ್ಥಕತೆ ನೀಡುತ್ತಿದೆ.

51.72 ಲಕ್ಷ ಜನರನ್ನು ಮಾನಸಿಕ ಆರೋಗ್ಯ ತಪಾಸಣೆಗೆ ಒಳಪಡಿಸಿದಾಗ, 26,000ಕ್ಕೂ ಹೆಚ್ಚು ಮಂದಿ ಚಿಕಿತ್ಸೆಗೆ ಸ್ಪಂದಿಸುತ್ತಿರುವುದು ಕಂಡುಬಂದಿದೆ. ಇದು ಬರೀ ರೋಗಿಗಳ ಸಂಖ್ಯೆಯಲ್ಲ, ಜನರು ತಮ್ಮ ಮಾನಸಿಕ ತೊಳಲಾಟಗಳ ಬಗ್ಗೆ ಸಂಕೋಚ ಬಿಟ್ಟು ಮಾತನಾಡುತ್ತಿದ್ದಾರೆ ಎನ್ನುವುದರ ಸಂಕೇತ. ಇದರೊಂದಿಗೆ ನರವೈಜ್ಞಾನಿಕ ಅಸ್ವಸ್ಥತೆಗಳು (19,244 ಪ್ರಕರಣಗಳು), ಉಸಿರಾಟದ ತೊಂದರೆ (1.52 ಲಕ್ಷ ಜನ), ಮಧುಮೇಹದಿಂದ ಪಾದದ ಸಮಸ್ಯೆ (13,218 ಪ್ರಕರಣಗಳು), ದೀರ್ಘಕಾಲದ ಕಿಡ್ನಿ ಕಾಯಿಲೆ ಮತ್ತು ರಕ್ತಹೀನತೆಯಂತಹ 14 ಬಗೆಯ ಕಾಯಿಲೆಗಳನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡುತ್ತಿದ್ದೇವೆ.

'ಗೃಹ ಆರೋಗ್ಯ' ಯೋಜನೆಯನ್ನು ನಗರ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಗೂ ವಿಸ್ತರಿಸಲು ಮುಂದಾಗಿದ್ದೇವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿ ಸೇರಿದಂತೆ ರಾಜ್ಯದ ಎಲ್ಲ ನಗರ ಪ್ರದೇಶಗಳಲ್ಲೂ ಜನರ ಮನೆಗಳಿಗೆ ಈ ಯೋಜನೆ ಕೊಂಡೊಯ್ಯುತ್ತಿದ್ದೇವೆ. ಆರೋಗ್ಯ ಇಲಾಖೆಯ ಅಧಿಕಾರಿಗಳು, ವೈದ್ಯರು, ಶುಶ್ರೂಷಕರು ಹಾಗೂ ಆಶಾ ಕಾರ್ಯಕರ್ತೆಯರು ಮನೆ ಬಾಗಿಲಿಗೆ ಬಂದಾಗ ಅವರಿಗೆ ಸಹಕಾರ ನೀಡಿ. ನಿಮ್ಮ ಆರೋಗ್ಯ ಸಮಸ್ಯೆಗಳ ಕುರಿತು ಮುಕ್ತವಾಗಿ ಮಾತನಾಡಿ, ಸಲಹೆ ಮತ್ತು ಚಿಕಿತ್ಸೆ ಪಡೆಯಿರಿ.

ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಸರಿಸಮಾನವಾದ ತಂತ್ರಜ್ಞಾನ ಮತ್ತು ನುರಿತ ವೈದ್ಯರು ಲಭ್ಯ ಇದ್ದಾರೆ. 'ಗೃಹ ಆರೋಗ್ಯ' ಯೋಜನೆಯ ಲಾಭ ಪಡೆಯುವುದು ನಿಮ್ಮ ಹಕ್ಕು. ಸ್ವಲ್ಪ ಲಕ್ಷಣಗಳು ಕಂಡರೂ ಅಂಜದೆ ಆರೋಗ್ಯ ಕಾರ್ಯಕರ್ತರಲ್ಲಿ ಮುಕ್ತವಾಗಿ ಮಾತನಾಡಿ. ಆ ಮೂಲಕ ಆರೋಗ್ಯ ಸಮಸ್ಯೆಗಳನ್ನು ಪ್ರಾಥಮಿಕ ಹಂತದಲ್ಲೇ ಗುರ್ತಿಸಿ, ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇಂದು ಅಣ್ಣ ನಮ್ಮೊಂದಿಗಿದ್ದಿದ್ದರೆ ಸಾಮಾನ್ಯ ಜನರ ಮನೆಬಾಗಿಲಿಗೆ ಆರೋಗ್ಯಸೇವೆ ತಲಪುತ್ತಿರುವುದನ್ನು ಕಂಡು ಹೆಮ್ಮೆಪಡುತ್ತಿದ್ದರು.

ಲೇಖಕ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಲೇಜುಗಳಲ್ಲಿ ಚುನಾವಣೆ ನಡೆಸಲು ರಾಜ್ಯ ಸರ್ಕಾರ ಮುಂದಾಗಿರುವುದರ ಬಗ್ಗೆ ಎರಡು ಅಭಿಪ್ರಾಯಗಳು

ವಿದ್ಯಾರ್ಥಿ ನಾಯಕತ್ವದ ಬುನಾದಿ

• ಡಾ.ಶರಣಪ್ರಕಾಶ ಪಾಟೀಲ

ಮೂರು ದಶಕಗಳ ಹಿಂದೆ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಿಷೇಧಿಸಿದ್ದರಿಂದ ಕರ್ನಾಟಕ ರಾಜಕಾರಣದ ಎರಡನೇ ಸಾಲಿನ ನಾಯಕತ್ವ ದುರ್ಬಲವಾಯಿತು. 'ಬೆಳೆವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ವಿದ್ಯಾರ್ಥಿ ದೆಸೆಯಲ್ಲೇ ರೂಪುಗೊಳ್ಳುವ ನಾಯಕತ್ವದ ಗುಣ ಮುಂದೆ ರಾಜ್ಯ, ದೇಶವನ್ನೂ ಮುನ್ನಡೆಸಲು ಮುನ್ನುಡಿಯಾಗುತ್ತದೆ. ವಿದ್ಯಾರ್ಥಿ ಯಾವುದೇ ಸಿದ್ಧಾಂತ, ಪಕ್ಷದತ್ತ ಒಲವು ತೋರಿದರೂ ಬೇರೆ ಬೇರೆ ಪಕ್ಷದ ನಾಯಕರಾಗಿ ಬೆಳೆದರೂ ಪ್ರಜಾಪ್ರಭುತ್ವಕ್ಕೆ ಲಾಭ. ಆಡಳಿತ-ವಿರೋಧ ಪಕ್ಷಗಳ ಬಲಾಬಲದಲ್ಲೇ ಪ್ರಜಾಸತ್ತಾತ್ಮಕತೆಯ ಸೌಂದರ್ಯ ಕಾಣಲು ಸಾಧ್ಯ.

ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವದ ಗುಣ ಬೆಳೆಸಲು, ಸಂವಿಧಾನ, ಪ್ರಜಾಪ್ರಭುತ್ವದ ಬುನಾದಿಯ ಮೇಲೆ ಭವಿಷ್ಯದ ನಾಯಕತ್ವವನ್ನು ರೂಪಿಸಲು ರಾಜ್ಯದ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಮತ್ತೆ ಪುನರಾರಂಭಿಸಲಾಗುತ್ತಿದೆ. ಕಾಲೇಜು ಚುನಾವಣೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವ, ರಾಜಕೀಯ ಪ್ರಜ್ಞೆ ಬೆಳೆಸುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯದಂತೆ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವುದು ಇದರ ಹಿಂದಿನ ಉದ್ದೇಶ. ಅದಕ್ಕಾಗಿ ವಿವಿಧ ಪಕ್ಷಗಳ ವಿದ್ಯಾರ್ಥಿ ಘಟಕಗಳೊಂದಿಗೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಜತೆ ಸೇರಿ ಮಾತುಕತೆ ನಡೆಸಿದ್ದೇವೆ. 2026-27ನೇ ಸಾಲಿನ ಆರಂಭದಲ್ಲೇ ಸರ್ಕಾರಿ, ಖಾಸಗಿ ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ.

ಸೆನೆಟ್ ಸಭೆಗಳಲ್ಲಿ ಪ್ರಾಯೋಗಿಕ ಅವಕಾಶ: ವಿದ್ಯಾರ್ಥಿ ಚುನಾವಣೆಗಳಲ್ಲಿ ಸ್ಪರ್ಧಿಸುವುದು, ಗೆಲ್ಲುವುದು ಕೇವಲ ಆ ಕಾಲೇಜಿನ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ ವಿಚಾರ ಮಾತ್ರವಲ್ಲ; ಹಲವು ಕಾರಣಗಳಿಗೆ ಅದು ಪ್ರಭಾವ ಮತ್ತು ಪ್ರತಿಷ್ಠೆಯ ವಿಚಾರ. ಶೈಕ್ಷಣಿಕ ವಿಚಾರಗಳ ಜತೆಗೆ ನಾಡಿನ ಹಲವು ಸಮಸ್ಯೆಗಳ ಕುರಿತು ಧ್ವನಿ ಎತ್ತಬಹುದು. ವಿದ್ಯಾರ್ಥಿ ಮುಖಂಡರು ವಿಶ್ವವಿದ್ಯಾಲಯಗಳ ಸೆನೆಟ್ ಸಭೆಗಳಲ್ಲಿಯೂ ಭಾಗವಹಿಸಬಹುದು.

ಕಾಲೇಜುಗಳು, ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯ ಇರಬೇಕು. ವಿದ್ಯಾರ್ಥಿಗಳ ಹಕ್ಕುಗಳಿಗೆ ಮನ್ನಣೆ ಸಿಗಬೇಕು. ಅನ್ಯಾಯವನ್ನು ಪ್ರಶ್ನಿಸುವ ಮನೋಭಾವ ರೂಪುಗೊಳ್ಳಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಗಬೇಕಾದ ಕೆಲಸಗಳನ್ನು ಮಾಡಿಸಬೇಕು. ವಿದ್ಯಾರ್ಥಿ ಪೂರಕವಾದ ವಾತಾವರಣ ನಿರ್ಮಿಸಬೇಕು. ವಿದ್ಯಾರ್ಥಿಗಳ ರಾಜಕೀಯ, ಸಾಮಾಜಿಕ ಗ್ರಹಿಕೆಗೆ ಚುನಾವಣೆಗಳು ವೇದಿಕೆ ಆಗಬೇಕು. ಇವಲ್ಲದೇ ಹಾಸ್ಟೆಲ್, ಕ್ಯಾಂಟೀನ್, ಕಾಲೇಜು ಶುಲ್ಕ, ಪರೀಕ್ಷೆ-ಫಲಿತಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲೂ ಅನುಕೂಲವಾಗಲಿದೆ.

> ಕಾಲೇಜುಗಳು, ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯ ಇರಬೇಕು. ವಿದ್ಯಾರ್ಥಿಗಳ ಹಕ್ಕುಗಳಿಗೆ ಮನ್ನಣೆ ಸಿಗಬೇಕು. ಅನ್ಯಾಯವನ್ನು ಪ್ರಶ್ನಿಸುವ ಮನೋಭಾವ ರೂಪುಗೊಳ್ಳಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಗಬೇಕಾದ ಕೆಲಸಗಳನ್ನು ಮಾಡಿಸಬೇಕು. ವಿದ್ಯಾರ್ಥಿ ಪೂರಕವಾದ ವಾತಾವರಣ ನಿರ್ಮಿಸಬೇಕು. ವಿದ್ಯಾರ್ಥಿಗಳ ರಾಜಕೀಯ, ಸಾಮಾಜಿಕ ಗ್ರಹಿಕೆಗೆ ಚುನಾವಣೆಗಳು ವೇದಿಕೆ ಆಗಬೇಕು. ಇವಲ್ಲದೇ ಹಾಸ್ಟೆಲ್, ಕ್ಯಾಂಟೀನ್, ಕಾಲೇಜು ಶುಲ್ಕ, ಪರೀಕ್ಷೆ-ಫಲಿತಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲೂ ಅನುಕೂಲವಾಗಲಿದೆ

ಲಿಂಗ್ಡೊ ಸಮಿತಿ ಶಿಫಾರಸು ಪಾಲನೆ: ಕೇರಳದಲ್ಲಿ ನಡೆದಿದ್ದ ವಿದ್ಯಾರ್ಥಿ ಚುನಾವಣೆಯ ವಿವಾದದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಿದ್ಯಾರ್ಥಿ ಒಕ್ಕೂಟಗಳ ಚುನಾವಣೆಗಳಲ್ಲಿ ಸುಧಾರಣೆ ತರುವ ದಿಸೆಯಲ್ಲಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಶಿಫಾರಸುಗಳನ್ನು ಮಾಡಲು ಸಮಿತಿಯೊಂದನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಕೇಂದ್ರ ಸರ್ಕಾರವು ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಜೆ.ಎಂ.ಲಿಂಗ್ಡೊ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಸಮಿತಿಯು 2006ರಲ್ಲಿ ತನ್ನ ವರದಿಯನ್ನು ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಕೂಡ ಈ ಎಲ್ಲ ಶಿಫಾರಸುಗಳನ್ನು ಒಪ್ಪಿಕೊಂಡಿತ್ತು.

ದೇಶದಾದ್ಯಂತ ಇರುವ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ ಸಂಘಕ್ಕೆ ವಿದ್ಯಾರ್ಥಿಗಳನ್ನು ನೇಮಕ ಮಾಡಲು ಚುನಾವಣೆ ನಡೆಸಬೇಕು. ಪಾರದರ್ಶಕ ಚುನಾವಣೆ ನಡೆಸುವ ವಾತಾವರಣ ಇಲ್ಲದಿದ್ದರೆ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ನಾಮನಿರ್ದೇಶನದ ಮೂಲಕ ನೇಮಕ ಮಾಡಬೇಕು. ಸಣ್ಣ ವಿಶ್ವವಿದ್ಯಾಲಯಗಳಲ್ಲಿ, ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಇರುವಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳನ್ನು ಸಂಯೋಜಿತ ಕಾಲೇಜುಗಳು ಮತ್ತು ವಿವಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ನೇರವಾಗಿ ಆಯ್ಕೆ ಮಾಡುವ ಚುನಾವಣಾ ವ್ಯವಸ್ಥೆಯನ್ನು ಅನುಸರಿಸಬಹುದು. ದೊಡ್ಡ ವಿಶ್ವವಿದ್ಯಾಲಯಗಳಲ್ಲಿ, ಸಂಯೋಜಿತ ಕಾಲೇಜುಗಳು, ವಿಭಾಗಗಳು ಹೆಚ್ಚಿರುವ ಕಡೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿ ಇದ್ದರೆ, ಕಾಲೇಜು ಮತ್ತು ವಿವಿ ಕ್ಯಾಂಪಸ್‌ಗೆ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಮೊದಲಿಗೆ ಆಯ್ಕೆ ಮಾಡಿ, ನಂತರ ಈ ಪ್ರತಿನಿಧಿಗಳು ವಿವಿ ವಿದ್ಯಾರ್ಥಿ ಒಕ್ಕೂಟದ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು ಎಂದು ಸಮಿತಿ ಶಿಫಾರಸು ಮಾಡಿತ್ತು.

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ಆ ವರ್ಷ ಯಾವ ಪಠ್ಯ ವಿಷಯವನ್ನೂ ಬಾಕಿ ಉಳಿಸಿಕೊಂಡಿರಬಾರದು. ಕನಿಷ್ಠ ಹಾಜರಾತಿ ಇರಬೇಕು. ಒಬ್ಬ ವಿದ್ಯಾರ್ಥಿಯು ಸಂಘದ ಕಾರ್ಯಕಾರಿ ಸದಸ್ಯತ್ವಕ್ಕೆ ಎರಡು ಬಾರಿ ಮತ್ತು ಸಂಘದ ಪದಾಧಿಕಾರಿ ಸ್ಥಾನಕ್ಕೆ ಒಂದು ಬಾರಿ ಮಾತ್ರ ಸ್ಪರ್ಧಿಸಬಹುದು. ವಿದ್ಯಾರ್ಥಿಯು ಅಪರಾಧ ಹಿನ್ನೆಲೆ ಹೊಂದಿರಬಾರದು. ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರಬಾರದು, ಶಿಸ್ತು ಕ್ರಮವನ್ನೂ ಎದುರಿಸಿರಬಾರದು. ಪ್ರತಿ ಅಭ್ಯರ್ಥಿ ಗರಿಷ್ಠ ₹5,000 ವೆಚ್ಚ ಮಾಡಬಹುದು. ವಿದ್ಯಾರ್ಥಿ ಸಂಘದ ಸ್ವಯಂಪ್ರೇರಿತ ದೇಣಿಗೆಯನ್ನು ಬಿಟ್ಟು ಬೇರೆ ಯಾವುದೇ ಮೂಲಗಳಿಂದ ಪಡೆದ ಹಣದ ಬಳಕೆಯನ್ನು ನಿರ್ಬಂಧಿಸಬೇಕು. ಅಭ್ಯರ್ಥಿ ಜಾತಿ, ಧರ್ಮ, ಭಾಷಾ ಸಮುದಾಯಗಳು ಅಥವಾ ವಿದ್ಯಾರ್ಥಿ ಗುಂಪುಗಳ ನಡುವೆ ಸಂಘರ್ಷ ಉಂಟುಮಾಡುವ ರೀತಿಯಲ್ಲಿ ನಡೆದುಕೊಳ್ಳಬಾರದು. ಭ್ರಷ್ಟಾಚಾರ, ಲಂಚ, ಆಮಿಷ ಒಡ್ಡುವಂತಹ ಕೃತ್ಯಗಳಲ್ಲಿ ತೊಡಗಬಾರದು. ಚುನಾವಣಾ ಆಯೋಗ, ಕಾಲೇಜು, ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳು ಚುನಾವಣೆಗಾಗಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವ ವೀಕ್ಷಕರನ್ನು ನೇಮಕ ಮಾಡಬೇಕು ಎಂಬ ಹಲವು ಶಿಫಾರಸುಗಳನ್ನು ಲಿಂಗ್ಡೊ ವರದಿ ಹೇಳಿದೆ.

ಆಗಸ್ಟ್, ಸೆಪ್ಟೆಂಬರ್‌ಗೆ ಚುನಾವಣೆ: ಲಿಂಗ್ಡೊ ವರದಿಯಲ್ಲಿನ ಹಲವು ಅಂಶಗಳನ್ನು ಬಳಸಿಕೊಂಡು ರಾಜ್ಯದ ಕಾಲೇಜು, ವಿಶ್ವವಿದ್ಯಾಲಯಗಳ ಸ್ಥಿತಿಗತಿ, ಶೈಕ್ಷಣಿಕ ವಾತಾವರಣವನ್ನು ಗಮನದಲ್ಲಿ ಇಟ್ಟುಕೊಂಡು ಪ್ರತ್ಯೇಕ ವಿದ್ಯಾರ್ಥಿ ಚುನಾವಣಾ ನೀತಿ ಸಿದ್ಧಪಡಿಸಲಾಗುತ್ತಿದೆ. ಈಗಾಗಲೇ ವಿವಿಧ ವಿದ್ಯಾರ್ಥಿ ಸಂಘಟನೆಗಳು, ಶಿಕ್ಷಣ ತಜ್ಞರು, ಅಧ್ಯಾಪಕರು, ಪೋಷಕರ ಗುಂಪುಗಳ ಜತೆ ಚರ್ಚೆ ನಡೆಸಲಾಗಿದೆ. ಆಗಸ್ಟ್, ಸೆಪ್ಟೆಂಬರ್ ವೇಳೆಗೆ ಚುನಾವಣೆಗಳನ್ನು ನಡೆಸಲು ವೇದಿಕೆ ಸಿದ್ಧಪಡಿಸಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿರುವ ಬಹುತೇಕ ಸಚಿವರು, ಆಡಳಿತ-ವಿರೋಧ ಪಕ್ಷಗಳ ಶಾಸಕರು ಆಗ ವಿದ್ಯಾರ್ಥಿ ಮುಖಂಡರಾಗಿದ್ದವರು. ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗೆ ಅವಕಾಶ ನೀಡಿದರೆ ಭವಿಷ್ಯದ ಜನಪ್ರತಿನಿಧಿಗಳನ್ನು ರೂಪಿಸಲು ಸಾಧ್ಯ. ಹಾಗೆ ಮಾಡದೇ ಇದ್ದರೆ ಕುಟುಂಬ ರಾಜಕಾರಣ ಬಲಗೊಳ್ಳುತ್ತದೆ. ಸಾಮಾನ್ಯ ಕುಟುಂಬಗಳಿಂದ ಬಂದವರಿಗೆ ನಾಯಕತ್ವ ಮರೀಚಿಕೆಯಾಗಿಯೇ ಉಳಿಯುತ್ತದೆ. ಧ್ವನಿ ಇಲ್ಲದವರು ಎಂದೂ ನಾಯಕರಾಗಲು ಸಾಧ್ಯವಾಗದು. ಚುನಾವಣೆ ಮೂಲಕ ಸಾಮಾನ್ಯ ಜನರ ಮಕ್ಕಳೂ ಸಹಜ ನಾಯಕರಾಗಿ ಬೆಳೆಯಲು ಸಹಕಾರಿಯಾಗಲಿದೆ.

ಚುನಾವಣೆಗಳಿಂದ ವಿದ್ಯಾರ್ಥಿಗಳ ನಡುವೆ ಸೌಹಾರ್ದ ವಾತಾವರಣ ಹಾಳಾಗುತ್ತದೆ. ಕಾಲೇಜುಗಳ ಕ್ಯಾಂಪಸ್‌ಗಳು ರಾಜಕಾರಣದ ತಾಣಗಳಾಗುತ್ತವೆ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ. ನೆಗಡಿ ಆಗಿದೆ ಎಂದು ಮೂಗು ಕತ್ತರಿಸಲು ಸಾಧ್ಯವೇ? ಸೂಕ್ತ ಚಿಕಿತ್ಸೆ ನೀಡಿ, ನೆಗಡಿ ಹೋಗಲಾಡಿಸಬೇಕು. ಮೂಗನ್ನೂ ಸುಸ್ಥಿತಿಯಲ್ಲಿ ಕಾಪಾಡಿಕೊಳ್ಳಬೇಕು. ಸಾರ್ವತ್ರಿಕ ಚುನಾವಣೆಯಲ್ಲಿ ಏನೇ ಸಮಸ್ಯೆ ಇದ್ದರೂ ಪ್ರತಿ ಚುನಾವಣೆಯ ನಂತರ ಪ್ರಜಾಪ್ರಭುತ್ವ ಗಟ್ಟಿಗೊಂಡು ಸಾಗುತ್ತಿರುವ ಹಾಗೆ ವಿದ್ಯಾರ್ಥಿ ಚುನಾವಣೆಗಳನ್ನೂ ಲೋಪರಹಿತವಾಗಿ ನಡೆಸಲು ವ್ಯವಸ್ಥೆ ಸಹಕಾರ ನೀಡಬೇಕು. ಹಿಂಸೆಗೆ ಪ್ರಚೋದನೆ ನೀಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು.

ಲೇಖಕ: ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಸಚಿವ

ನಿರೂಪಣೆ: ಚಂದ್ರಹಾಸ ಹಿರೇಮಳಲಿ

ಮಹಿಳಾ ಮೀಸಲಾತಿ ಕಡ್ಡಾಯ

ರಾಜ್ಯ ಸರ್ಕಾರ ರೂಪಿಸುತ್ತಿರುವ ನಿಯಮಗಳಲ್ಲಿ ವಿದ್ಯಾರ್ಥಿ ಚುನಾವಣೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಒಂದು ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ಆಯ್ಕೆಯಾಗುವ ಒಟ್ಟು ಪದಾಧಿಕಾರಿಗಳಲ್ಲಿ ಒಂದು ಸ್ಥಾನ ಮಹಿಳೆಯರಿಗೆ ಮೀಸಲಿಡುವುದು ಕಡ್ಡಾಯ. ಅಧ್ಯಕ್ಷ ಸ್ಥಾನ ಹೊರತುಪಡಿಸಿ ಉಳಿದ ಪ್ರಮುಖ ಸ್ಥಾನವೊಂದನ್ನು ಮೀಸಲಿಡಲು ನಿರ್ಧರಿಸಲಾಗಿದೆ.

ವಿದ್ಯಾರ್ಥಿ ಚುನಾವಣೆಯಲ್ಲಿ ಹಣ, ಜಾತಿ, ಧರ್ಮ, ರಾಜಕೀಯ ಪ್ರಭಾವದ ಬಲ ಬಳಸಿಕೊಳ್ಳುವುದಕ್ಕೆ ತಡೆ ಹಾಕಲಾಗುತ್ತದೆ. ಜಾತಿ, ಧರ್ಮ ಆಧಾರಿತ ಮೀಸಲಾತಿ ನೀಡಲಾಗುವುದಿಲ್ಲ. ವಿದ್ಯಾರ್ಥಿಗಳ ಮಧ್ಯೆ ಜಾತಿ, ಧರ್ಮಗಳು ನುಸುಳಬಾರದು, ಕ್ಯಾಂಪಸ್ ವಾತಾವರಣ ಜಾತ್ಯತೀತವಾಗಿರಬೇಕು ಎಂಬ ಸಮುದಾಯ, ವಿದ್ಯಾರ್ಥಿ-ಪೋಷಕರ ಸಲಹೆಗಳನ್ನು ಒಪ್ಪಿಕೊಂಡು ಇಂತಹ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಲಿಂಗ್ಡೊ ವರದಿಯಲ್ಲಿ ಹೇಳಿರುವಂತೆ ರಾಜಕೀಯ ಪಕ್ಷಗಳು, ಅವುಗಳ ಮುಖಂಡರು ಭಾಗಿಯಾಗುವುದನ್ನು ತಡೆಯುವುದು; ವಿದ್ಯಾರ್ಥಿ ಅಲ್ಲದವರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡದಿರುವುದು; ಈ ನಿಯಮವನ್ನು ಉಲ್ಲಂಘಿಸುವ ವ್ಯಕ್ತಿ, ಅಭ್ಯರ್ಥಿ ಅಥವಾ ವಿದ್ಯಾರ್ಥಿ ಸಂಘಟನೆಯ ಸದಸ್ಯನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದು; ಪ್ರತಿ ವರ್ಷ ಶೈಕ್ಷಣಿಕ ವರ್ಷ ಆರಂಭಗೊಂಡ ನಂತರದ ಆರರಿಂದ ಎಂಟು ವಾರದ ಒಳಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದು; ನಾಮಪತ್ರ ಸಲ್ಲಿಕೆಯಿಂದ ಹಿಡಿದು, ಫಲಿತಾಂಶದವರೆಗೆ ಇಡೀ ಪ್ರಕ್ರಿಯೆ 10 ದಿನಗಳಲ್ಲಿ ಮುಗಿಸುವುದು–ಈ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಈ ವರ್ಷವೇ ಪದವಿಪೂರ್ವ ಕಾಲೇಜುಗಳಲ್ಲೂ ಚುನಾವಣೆ ನಡೆಸುವ ಕುರಿತು ಚಿಂತನೆ ನಡೆದಿದೆ. ಆದರೆ, ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆಯ ಸಚಿವರು, ಅಧಿಕಾರಿಗಳು ಹಾಗೂ ಉಪನ್ಯಾಸಕರ ಸಂಘಟನೆಗಳ ಜತೆಗೆ ಚರ್ಚೆಗಳು ಪೂರ್ಣಗೊಂಡಿಲ್ಲ.

ಸರ್ಕಾರದಿಂದ ಚಾರಿತ್ರಿಕ ಪ್ರಮಾದ

• ಪ್ರೊ. ಜೆ.ಎಸ್. ಸದಾನಂದ ಜಾನೇಕೆರೆ



2026-2027ರ ಬಜೆಟ್‌ನಲ್ಲಿ ಕರ್ನಾಟಕ ಸರ್ಕಾರವು ರಾಜ್ಯದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಪುನರಾರಂಭಿಸುವ ಗಂಭೀರ ಇರಾದೆಯನ್ನು ವ್ಯಕ್ತಪಡಿಸಿದೆ. ಮುಖ್ಯಮಂತ್ರಿಯವರು ಹೇಳುವಂತೆ, ಇದು ವಿದ್ಯಾರ್ಥಿಗಳಲ್ಲಿ ನಾಯಕತ್ವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವ ಉದ್ದೇಶ ಹೊಂದಿದೆ. ಆದರೆ, ಇಂದಿನ ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಈ ತೀರ್ಮಾನವು ಶಿಕ್ಷಣ ಸಂಸ್ಥೆಗಳ ಪಾವಿತ್ರ್ಯದ ಮೇಲೆ ಬೀರಲಿರುವ ದುಷ್ಪರಿಣಾಮಗಳ ಕುರಿತು ಗಂಭೀರ ಚರ್ಚೆಯ ಅಗತ್ಯವಿದೆ.

ನಮ್ಮ ರಾಜ್ಯದಲ್ಲಿ ವಿದ್ಯಾರ್ಥಿ ಚುನಾವಣೆಗಳಿಗೆ ದಶಕಗಳ ಇತಿಹಾಸವಿದೆ. ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ಇವು ಭಾರಿ ಪ್ರಾಮುಖ್ಯ ಪಡೆದಿದ್ದವು ಮತ್ತು ಅಂದಿನ ಅನೇಕ ವಿದ್ಯಾರ್ಥಿ ಮುಖಂಡರು ಇಂದು ರಾಜ್ಯ ರಾಜಕಾರಣದಲ್ಲಿ ಪ್ರಭಾವಿ ನಾಯಕರಾಗಿದ್ದಾರೆ. ಆದರೆ, ಕಾಲಕ್ರಮೇಣ ರಾಜಕೀಯ ಪಕ್ಷಗಳ ಅತಿಯಾದ ಹಸ್ತಕ್ಷೇಪದಿಂದಾಗಿ ಕ್ಯಾಂಪಸ್‌ಗಳು ರಣರಂಗಗಳಾಗಿ ಮಾರ್ಪಟ್ಟವು. ಗುಂಪುಗಾರಿಕೆ, ಘರ್ಷಣೆ ಮತ್ತು ಹಿಂಸಾಚಾರಗಳು ಮಿತಿಮೀರಿದ ಕಾರಣ 1989ರಲ್ಲಿ ಕ್ಯಾಂಪಸ್‌ಗಳಲ್ಲಿ ಚುನಾವಣೆಗಳನ್ನು ನಿಷೇಧಿಸಲಾಯಿತು. ಆದರೂ, ಕೆಲವೆಡೆ ಚುನಾವಣೆಗಳು ನಡೆಯುತ್ತಲೇ ಇದ್ದವು. ಹಿಂಸಾಚಾರದ ಕಾರಣಕ್ಕೆ 1997-98ರಲ್ಲಿ ಅಂದಿನ ಸರ್ಕಾರವು ವಿದ್ಯಾರ್ಥಿ ಚುನಾವಣೆಗಳನ್ನು ಸಂಪೂರ್ಣವಾಗಿ ನಿಷೇಧಿಸಿತು. ಅದಕ್ಕೆ ಸಂಬಂಧಿಸಿದ ಕಹಿ ಘಟನೆಗಳು ಅನೇಕ ವಿದ್ಯಾರ್ಥಿಗಳು, ಅಧ್ಯಾಪಕರಿಗೆ ಈಗಲೂ ನೆನಪಿವೆ. ಹೀಗಿದ್ದರೂ ಕಾಂಗ್ರೆಸ್ ಸರ್ಕಾರವು ಜೆ.ಎಂ.ಲಿಂಗ್ಡೊ ಸಮಿತಿಯ ಶಿಫಾರಸುಗಳ ಹೆಸರಿನಲ್ಲಿ ಈ 'ಬೆಂಕಿಯ ಚೆಂಡನ್ನು' ಮತ್ತೆ ಕ್ಯಾಂಪಸ್‌ಗಳಿಗೆ ಎಸೆಯಲು ಮುಂದಾಗಿರುವುದು ಆತಂಕಕಾರಿ.

ಸ್ವಾಯತ್ತೆಯ ಪತನ ಮತ್ತು ಸರ್ಕಾರದ ಹಿಡಿತ: ವಿಶ್ವವಿದ್ಯಾಲಯಗಳ ಆಡಳಿತ ನಿರ್ವಹಣೆಗಾಗಿ ಸಿಂಡಿಕೇಟ್, ಶಿಕ್ಷಣ ಮಂಡಳಿ ಮತ್ತು ಸೆನೆಟ್ ಎಂಬ ಮೂರು ಪ್ರಮುಖ ಘಟಕಗಳಿವೆ. ಒಂದು ಕಾಲದಲ್ಲಿ ಈ ಘಟಕಗಳು ಶೈಕ್ಷಣಿಕ ಸ್ವಾಯತ್ತೆಯನ್ನು ಕಾಪಾಡುತ್ತಾ, ಗುಣಮಟ್ಟದ ಶಿಕ್ಷಣಕ್ಕೆ ಮಾರ್ಗದರ್ಶನ ನೀಡುತ್ತಿದ್ದವು. ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಕುಲಪತಿಗಳ ನೇಮಕಾತಿಯಿಂದ ಹಿಡಿದು ಬಜೆಟ್ ಹಂಚಿಕೆಯವರೆಗೆ ಎಲ್ಲವೂ ಸರ್ಕಾರದ ನೇರ ನಿಯಂತ್ರಣದಲ್ಲಿವೆ. ವಿಶ್ವವಿದ್ಯಾಲಯಗಳು ಕೇವಲ 'ಸರ್ಕಾರಿ ಇಲಾಖೆ'ಗಳಂತೆ ಕಾರ್ಯನಿರ್ವಹಿಸುತ್ತಿವೆ. ಇಂತಹ ಹೊತ್ತಿನಲ್ಲಿ ಕೇವಲ ನಾಮಕಾವಸ್ತೆಯಾಗಿ ಉಳಿದಿರುವ ಸೆನೆಟ್ ಮತ್ತು ಆಡಳಿತ ಮಂಡಳಿಗಳಿಗೆ ವಿದ್ಯಾರ್ಥಿಗಳನ್ನು ಚುನಾವಣೆಯ ಮೂಲಕ ಕಳುಹಿಸುವುದು ಎಷ್ಟು ಅರ್ಥಪೂರ್ಣ? ಇಂದಿನ ಚುನಾವಣಾ ರಾಜಕೀಯವು 'ಆದರ್ಶ'ಗಳ ಮೇಲೆ ನಿಂತಿಲ್ಲ, ಬದಲಿಗೆ ತೋಳ್ಬಲ ಮತ್ತು ಹಣಬಲದ ಸಂಸ್ಕೃತಿಯ ಮೇಲೆ ನಿಂತಿದೆ. ಶಿಕ್ಷಕರ ಕ್ಷೇತ್ರದ ಚುನಾವಣೆಗಳಲ್ಲೇ ಹಣ ಮತ್ತು ಜಾತಿಯ ಪ್ರಭಾವ ಎದ್ದು ಕಾಣುತ್ತಿರುವಾಗ, ವಿದ್ಯಾರ್ಥಿ ಚುನಾವಣೆಗಳು ಅದಕ್ಕಿಂತ ಭಿನ್ನವಾಗಿರಲು ಹೇಗೆ ಸಾಧ್ಯ?

> ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳಲ್ಲಿ ರಾಜಕೀಯ ನಾಯಕರ ಪ್ರಭಾವ ಕಣ್ಣಿಗೆ ರಾಚುವಷ್ಟು ಈಗಾಗಲೇ ಇದೆ. ಸಿಬ್ಬಂದಿ ನೇಮಕಾತಿ, ಅನುದಾನ ಹಂಚಿಕೆ ಮತ್ತು ಮಾನ್ಯತೆ ನೀಡುವ ಪ್ರಕ್ರಿಯೆಗಳಲ್ಲೇ ಪಾರದರ್ಶಕತೆ ಇಲ್ಲದಿರುವಾಗ, ವಿದ್ಯಾರ್ಥಿ ಪ್ರತಿನಿಧಿಗಳು ಅಂತಹ ವ್ಯವಸ್ಥೆಯ ಭಾಗವಾಗಿ ಏನು ಬದಲಾವಣೆ ತರಲು ಸಾಧ್ಯ? ವಿದ್ಯಾರ್ಥಿಗಳಲ್ಲಿ ಎಂತಹ ನಾಯಕತ್ವದ ಗುಣಗಳಿರಬೇಕು ಎನ್ನುವುದನ್ನು ಶಿಕ್ಷಣ ಸಂಸ್ಥೆಗಳು ನಿರ್ಧರಿಸುವ ಬದಲು ರಾಜಕೀಯದಲ್ಲಿ ಯಶಸ್ವಿ ನಾಯಕರಾಗುವುದು ಹೇಗೆ ಎಂಬುದನ್ನು ರಾಜಕೀಯ ನಾಯಕರು ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತಿದ್ದಾರೆ

ಶಿಕ್ಷಣ ತಜ್ಞರ ವೇಷದಲ್ಲಿರುವ ಪುಢಾರಿಗಳು: ವಿಶ್ವವಿದ್ಯಾಲಯಗಳು ನೈತಿಕತೆ ಮತ್ತು ಜ್ಞಾನದ ಕೇಂದ್ರಗಳಾಗಬೇಕೇ ಹೊರತು ಹೊರಗಿನ ರಾಜಕೀಯ ವ್ಯವಸ್ಥೆಯ ಪಡಿಯಚ್ಚುಗಳಾಗಬಾರದು. ವಿಶ್ವವಿದ್ಯಾಲಯಗಳು ಸಮಾಜಕ್ಕೆ ಆದರ್ಶಪ್ರಾಯವಾಗುವಂತಹ ಶಿಕ್ಷಣ ಸಂಸ್ಥೆಗಳಾಗಿದ್ದ ಕಾಲದಲ್ಲಿ ಅಂತಹ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದ ಪಾಠ ಇಡೀ ಸಮಾಜಕ್ಕೆ ಒಳಿತನ್ನು ಉಂಟುಮಾಡುತ್ತಿತ್ತು. ಈಗಿನ ಪರಿಸ್ಥಿತಿ ಅದಕ್ಕೆ ತಿರುವುಮುರುವಾಗಿದೆ. ವಿಶ್ವವಿದ್ಯಾಲಯಗಳು ಹೇಗಿರಬೇಕು ಎನ್ನುವುದನ್ನು ರಾಜಕೀಯ ನಾಯಕರು ನಿರ್ಧರಿಸುತ್ತಿದ್ದಾರೆ. ಪ್ರಾಮಾಣಿಕ ಶಿಕ್ಷಣ ತಜ್ಞರು ತಮಗೆ ಬೇಕಾದ ರೀತಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ರೂಪಿಸಲಾಗದ ದೈನೇಸಿ ಸ್ಥಿತಿ ತಲುಪಿದ್ದಾರೆ. ರಾಜಕೀಯ ಪುಢಾರಿಗಳು ತಮ್ಮಲ್ಲಿರುವ ಶೈಕ್ಷಣಿಕ ದಾಖಲೆಗಳನ್ನು ಬಳಸಿಕೊಂಡು ಶಿಕ್ಷಣ ತಜ್ಞರ ವೇಷ ಧರಿಸಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ರೂಪುರೇಷೆಗಳನ್ನು ನಿರ್ಧರಿಸುತ್ತಿದ್ದಾರೆ.

ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳಲ್ಲಿ ರಾಜಕೀಯ ನಾಯಕರ ಪ್ರಭಾವ ಕಣ್ಣಿಗೆ ರಾಚುವಷ್ಟು ಈಗಾಗಲೇ ಇದೆ. ಸಿಬ್ಬಂದಿ ನೇಮಕಾತಿ, ಅನುದಾನ ಹಂಚಿಕೆ ಮತ್ತು ಮಾನ್ಯತೆ ನೀಡುವ ಪ್ರಕ್ರಿಯೆಗಳಲ್ಲೇ ಪಾರದರ್ಶಕತೆ ಇಲ್ಲದಿರುವಾಗ, ವಿದ್ಯಾರ್ಥಿ ಪ್ರತಿನಿಧಿಗಳು ಅಂತಹ ವ್ಯವಸ್ಥೆಯ ಭಾಗವಾಗಿ ಏನು ಬದಲಾವಣೆ ತರಲು ಸಾಧ್ಯ? ವಿದ್ಯಾರ್ಥಿಗಳಲ್ಲಿ ಎಂತಹ ನಾಯಕತ್ವದ ಗುಣಗಳಿರಬೇಕು ಎನ್ನುವುದನ್ನು ಶಿಕ್ಷಣ ಸಂಸ್ಥೆಗಳು ನಿರ್ಧರಿಸುವ ಬದಲು ರಾಜಕೀಯದಲ್ಲಿ ಯಶಸ್ವಿ ನಾಯಕರಾಗಲು ಎಂತಹ ಗುಣಗಳನ್ನು ರೂಢಿಸಿಕೊಳ್ಳಬೇಕು ಎನ್ನುವ ಪಾಠವನ್ನು ಹೊರಗಿನ ರಾಜಕೀಯ ನಾಯಕರುಗಳು ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತಿದ್ದಾರೆ.

ರಾಜಕೀಯ ಮುಖಂಡರೇ ಆದರ್ಶ: ವಿದ್ಯಾರ್ಥಿಗಳು ಆದರ್ಶ ನಾಯಕರಾಗುವ ಬದಲು ಈಗಿನ 'ಯಶಸ್ವಿ' ರಾಜಕೀಯ ನಾಯಕರು ಭಾವಿ ನಾಯಕರಾಗುವ 'ವಿದ್ಯಾರ್ಥಿ'ಗಳಿಗೆ ಆದರ್ಶಪ್ರಾಯರಾಗುತ್ತಾರೆ. ಸಮಾಜಕ್ಕೆ ಆದರ್ಶವಾಗುವಂತಹ ಸಂಸ್ಥೆಗಳಾಗಿ ಬೆಳೆಯಬೇಕಾದಂತಹ ವಿಶ್ವವಿದ್ಯಾಲಯಗಳು ರಾಜಕೀಯ ಶಕ್ತಿಗಳ ಅಡಿಯಲ್ಲಿ ತಮ್ಮ ಸತ್ವವನ್ನು ಕಳೆದುಕೊಳ್ಳುತ್ತಿವೆ. ಈ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಗೆ ನಡೆಯುವ ಚುನಾವಣೆಗಳು ಪ್ರತಿಭಾವಂತ ವಿದ್ಯಾರ್ಥಿಗಳನ್ನು ರಾಜಕೀಯ ನಾಯಕರನ್ನಾಗಿ ರೂಪುಗೊಳಿಸುವುದಿಲ್ಲ. ಬದಲಿಗೆ, ಭಾವಿ ರಾಜಕೀಯ ಪುಢಾರಿಗಳಾಗುವ ಆಕಾಂಕ್ಷೆಯನ್ನು ಹೊತ್ತವರು 'ವಿದ್ಯಾರ್ಥಿ'ಗಳ ವೇಷದಲ್ಲಿ ಶಿಕ್ಷಣ ಸಂಸ್ಥೆಗಳ ಒಳನುಸುಳುವುದಕ್ಕೆ ಇದು ಹೆದ್ದಾರಿಯಾಗುತ್ತದೆ.

ಲಿಂಗ್ಡೊ ಸಮಿತಿಯು, ವಿದ್ಯಾರ್ಥಿಗಳ ಚುನಾವಣೆಗಳಲ್ಲಿ ಅಪರಾಧೀಕರಣ; ಚುನಾವಣೆಗಳಲ್ಲಿ ಆರ್ಥಿಕ ಪಾರದರ್ಶಕತೆ; ವಿದ್ಯಾರ್ಥಿಗಳು ಚುನಾವಣೆ ಬಳಿಕ ಮಾಡಿರುವ ವೆಚ್ಚದ ವಿವರಗಳನ್ನು ನೀಡುವುದು; ವಯಸ್ಸಿನ ಮಿತಿ, ಶೈಕ್ಷಣಿಕ ಸಾಧನೆ ಸೇರಿದಂತೆ ಚುನಾವಣೆಯಲ್ಲಿ ಸ್ಪರ್ಧಿಸಲು ವಿದ್ಯಾರ್ಥಿಗಳಿಗೆ ಇರಬೇಕಾದ ಅರ್ಹತೆ; ಚುನಾವಣೆಗೆ ಸಂಬಂಧಿಸಿದಂತೆ ಬರುವ ದೂರುಗಳನ್ನು ನಿರ್ವಹಿಸುವ ವ್ಯವಸ್ಥೆ- ಇವೇ ಮೊದಲಾದ ನಿಬಂಧನೆಗಳನ್ನು ಹಾಕಿದೆ, ನಿಜ. ಆದರೆ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಇಂದಿನ ವಾಸ್ತವ ಸ್ಥಿತಿಗತಿಗಳನ್ನು ಅರಿತವರಿಗೆ ಇವುಗಳ ಪ್ರಾಮಾಣಿಕ ಅನುಷ್ಠಾನದ ಬಗ್ಗೆ ಸಂದೇಹಗಳು ಮೂಡುವುದು ಸಹಜ. ಹಾಗಾಗಿಯೇ ಇದಕ್ಕೆ ಶಿಕ್ಷಣ ತಜ್ಞರು, ಅಧ್ಯಾಪಕರು ಮತ್ತು ಪೋಷಕರ ವಿರೋಧವಿದೆ. ಅದರ ನಡುವೆಯೂ ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕಾಗಿ ಈ ಚುನಾವಣೆಯನ್ನು ಸ್ವಾಗತಿಸುತ್ತಿವೆ.

ನಿರೀಕ್ಷೆ ಹಾಸ್ಯಾಸ್ಪದ : ಇಲ್ಲಿರುವ ಒಂದು ವಿಪರ್ಯಾಸವನ್ನು ಗಮನಿಸಿ. ಲಿಂಗ್ಡೊ ಸಮಿತಿಯು ವಿದ್ಯಾರ್ಥಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಯಾವುದೇ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದೆ. ಆದರೂ ನಮ್ಮ ಶಿಕ್ಷಣ ಸಚಿವರು ಇದಕ್ಕೆ ಸಂಬಂಧಿಸಿದಂತೆ ಶಿಕ್ಷಣ ತಜ್ಞರೊಂದಿಗೆ ಸಮಾಲೋಚನೆ ನಡೆಸುವ ಬದಲು ರಾಜಕೀಯ ಪಕ್ಷಗಳ ಮುಖಂಡರ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಎಲ್ಲ ಪಕ್ಷಗಳು ಒಕ್ಕೊರಲಿನಿಂದ ಈ ಕ್ರಮವನ್ನು ಬೆಂಬಲಿಸಿವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಪ್ರವೇಶವು ಹಳ್ಳಿಯ ವಾತಾವರಣವನ್ನೇ ಕುಲಗೆಡಿಸಿರುವುದು ಎಲ್ಲರಿಗೂ ತಿಳಿದಿದೆ. ರಾಜಕೀಯ ಪಕ್ಷದ ವತಿಯಿಂದ ಶಿಕ್ಷಕರ ಕ್ಷೇತ್ರದಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳು ಏನೆಲ್ಲಾ ಕಸರತ್ತು ಮಾಡುತ್ತಾರೆ ಎನ್ನುವುದೂ ನಮಗೆ ತಿಳಿದಿದೆ. ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ಚುನಾವಣೆಯಿಂದ ಪಕ್ಷಗಳು ಹೊರಗಿರುತ್ತವೆ ಎಂದು ನಿರೀಕ್ಷಿಸುವುದು ಹಾಸ್ಯಾಸ್ಪದವಲ್ಲವೇ?

ಸರ್ಕಾರವು ಕ್ಯಾಂಪಸ್‌ಗಳಲ್ಲಿ ಚುನಾವಣೆಯ ಹವಾ ಸೃಷ್ಟಿಸುವ ಬದಲು ವಿಶ್ವವಿದ್ಯಾಲಯಗಳಿಗೆ ಆರ್ಥಿಕ ನೆರವು ನೀಡಿ, ಸಂಶೋಧನೆಗೆ ಒತ್ತು ಕೊಟ್ಟು, ಕಳೆದುಹೋದ ಶೈಕ್ಷಣಿಕ ಸ್ವಾಯತ್ತೆಯನ್ನು ಮರಳಿಸಬೇಕಿದೆ. ಪವಿತ್ರವಾದ ಶಿಕ್ಷಣ ಕೇಂದ್ರಗಳನ್ನು ರಾಜಕೀಯ ದಾಳಗಳನ್ನಾಗಿ ಬಳಸುವುದನ್ನು ನಿಲ್ಲಿಸದಿದ್ದರೆ, ಈ 'ವಿದ್ಯಾರ್ಥಿ ಚುನಾವಣೆ' ಎನ್ನುವುದು ಶೈಕ್ಷಣಿಕ ವಾತಾವರಣವನ್ನು ಶಾಶ್ವತವಾಗಿ ಕಲುಷಿತಗೊಳಿಸುವಂತಹ ಚಾರಿತ್ರಿಕ ಪ್ರಮಾದವಾಗಿ ಉಳಿಯುತ್ತದೆ.

ಕ್ಯಾಂಪಸ್‌ನಲ್ಲಿ ಅನಾಹುತಗಳು

1. ವಿಭಜಕ ಶಕ್ತಿಗಳ ಪ್ರವೇಶ: ಈ ಚುನಾವಣೆಗಳು ವಿದ್ಯಾರ್ಥಿಗಳನ್ನು ಜಾತಿ, ಧರ್ಮ, ಭಾಷೆ ಮತ್ತು ಪ್ರಾದೇಶಿಕತೆಯ ಆಧಾರದ ಮೇಲೆ ವಿಭಾಗಿಸುತ್ತವೆ. ಶೈಕ್ಷಣಿಕ ಚರ್ಚೆ ನಡೆಯಬೇಕಾದ ಜಾಗದಲ್ಲಿ 'ಓಟ್ ಬ್ಯಾಂಕ್' ರಾಜಕಾರಣದ ವಿಷಬೀಜ ಬಿತ್ತಲಾಗುತ್ತದೆ.
2. ಕ್ಯಾಂಪಸ್ ಹಿಂಸಾಚಾರ: ಈ ಹಿಂದೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದ ಚುನಾವಣೆಗಳ ಸಂದರ್ಭದಲ್ಲಿ ದಾವಣಗೆರೆ ಮತ್ತು ಶಿವಮೊಗ್ಗದ ವಿದ್ಯಾರ್ಥಿಗಳ ನಡುವೆ ನಡೆದ ಭೀಕರ ಘರ್ಷಣೆಯನ್ನು ನಿಯಂತ್ರಿಸಲು ಪೊಲೀಸರು ಬರಬೇಕಾಯಿತು. ರಾಜಕೀಯ ಪಕ್ಷಗಳ ಬೆಂಬಲಿತ ವಿದ್ಯಾರ್ಥಿ ಘಟಕಗಳು ಪರಸ್ಪರ ಶಕ್ತಿ ಪ್ರದರ್ಶನಕ್ಕೆ ಇಳಿದಾಗ ಕಲಿಕೆಯ ವಾತಾವರಣ ಸಂಪೂರ್ಣ ನಾಶವಾಗುತ್ತದೆ.
3. ಪ್ರತಿಭಾವಂತ ವಿದ್ಯಾರ್ಥಿಗಳ ಅಸಹಾಯಕತೆ: ಯಾವುದೇ ರ‍್ಯಾಂಕ್ ವಿದ್ಯಾರ್ಥಿಯಾಗಲಿ ಅಥವಾ ಬಡ ವಿದ್ಯಾರ್ಥಿಯಾಗಲಿ ಇಂತಹ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯ. ಕೇವಲ ಹಣ ಮತ್ತು ರಾಜಕೀಯ ಬೆಂಬಲ ಇರುವವರು ಮಾತ್ರ ವಿಜೃಂಭಿಸುತ್ತಾರೆ. ಇದು ಸಾಮಾನ್ಯ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ದೂರ ತಳ್ಳುತ್ತದೆ. ನಾಯಕತ್ವದ ಹೆಸರಿನಲ್ಲಿ 'ಪುಢಾರಿ'ಗಳ ಸೃಷ್ಟಿಗೆ ವಿದ್ಯಾರ್ಥಿ ಚುನಾವಣೆಗಳು ಕಾರಣವಾಗುತ್ತವೆ.
4. ವಿಶ್ವವಿದ್ಯಾಲಯಗಳು ಸಮಾಜಕ್ಕೆ ಆದರ್ಶ ನಾಯಕರನ್ನು ನೀಡಬೇಕಾದ ಕಾರ್ಖಾನೆಗಳಾಗಬೇಕು. ಆದರೆ, ಈ ಚುನಾವಣಾ ನಿರ್ಧಾರವು ಹೊರಗಿನ ರಾಜಕೀಯ ದೈತ್ಯಶಕ್ತಿಗಳಿಗೆ ತಮಗೆ ಬೇಕಾದ 'ಕೈಗೊಂಬೆ'ಗಳನ್ನು ಸೃಷ್ಟಿಸಲು ಕ್ಯಾಂಪಸ್‌ಗಳನ್ನು ಪ್ರಯೋಗಶಾಲೆಗಳನ್ನಾಗಿ ಮಾಡಿಕೊಡುತ್ತವೆ. ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ನಾಯಕತ್ವ ಬೆಳೆಸುವ ಹೆಸರಿನಲ್ಲಿ ಭ್ರಷ್ಟಾಚಾರ ಮತ್ತು ಪಕ್ಷಪಾತದ ಮೊದಲ ಪಾಠಗಳನ್ನು ಇಲ್ಲಿ ಕಲಿಸಿದಂತಾಗುತ್ತದೆ.

ಲೇಖಕ: ನಿವೃತ್ತ ಪ್ರಾಧ್ಯಾಪಕ, ಕುವೆಂಪು ವಿಶ್ವವಿದ್ಯಾಲಯ

ಗುಂಡಣ್ಣ

© 2025 by King Features Syndicate, Inc. World Rights reserved

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

02 ಮೇ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣಪ್ರತಿಪದ್ ಗಂ. 24-50 ನಕ್ಷತ್ರ: ವಿಶಾಖ ಅಹೋರಾತ್ರ ಯೋಗ: ವ್ಯತೀಪಾತ ಗಂ. 21-45 ಕರಣ: ಬಾಲವ ಗಂ. 11-50, ಮೇಷ ಮಾಸದ 19 ನೇ ದಿನ. ಮಳೆ ನಕ್ಷತ್ರ : ಭರಣಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-13 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 14 ಜುಲ್ಕಾದಾ, ಅದೃಷ್ಟ ಸಂಖ್ಯೆ : 5, 11

ಮೇಷ: ಕೆಲಸ ಕಾರ್ಯಗಳು ಆತಂಕವಿಲ್ಲದೆ ಸಾಗುವುದು ನೆಮ್ಮದಿ ತರಲಿದೆ. ಒಡಹುಟ್ಟಿದವರೊಂದಿಗಿನ ಪರಸ್ಪರ ಸಹಕಾರದಿಂದ ಮಾನಸಿಕ ನೆಮ್ಮದಿ ಹೊಂದುವಿರಿ.

ವೃಷಭ: ಪರಿಸ್ಥಿತಿಗಳು ಸ್ವಲ್ಪ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮದ ಅಗತ್ಯವಿದೆ. ವಿಘ್ನ ಭಯದಿಂದ ಹೊರಬರಲು ಮಹಾಗಣಪತಿಯನ್ನು ಆರಾಧಿಸಿ.

ಮಿಥುನ: ಮಗಳ ಜೀವನದ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ಸಿವಿಲ್ ಎಂಜಿನಿಯರ್‌ಗೆ ಉತ್ತಮ ಅವಕಾಶಗಳು ಸಿಗಲಿವೆ.

ಕರ್ಕಾಟಕ: ಸಜ್ಜನರ ಸಹವಾಸ ಮಾಡುವ ಹಂಬಲಕ್ಕೆ ಪೂರಕ ವಾತಾವರಣ ಸಿಗಲಿದೆ. ಲೇವಾದೇವಿ ವ್ಯವಹಾರಗಳಲ್ಲಿ ಜಾಗ್ರತೆ ವಹಿಸಬೇಕಾಗುವುದು. ಕೆಲಸ ಕಾರ್ಯದಲ್ಲಿ ಏಕಾಗ್ರತೆ ಕಡಿಮೆಯಾಗಲಿದೆ.

ಸಿಂಹ: ಮನೆಯಲ್ಲಿನ ಕೆಲ ಸಮಸ್ಯೆಗಳು ಸುಲಭವಾಗಿ ಪರಿಹಾರವಾಗುವುದು. ಎಲೆಕ್ಟ್ರಾನಿಕ್ ಉಪಕರಣಗಳ ರಿಪೇರಿಯಿಂದ ಖರ್ಚು ಉಂಟಾಗಲಿದೆ. ಯಂತ್ರೋಪಕರಣಗಳನ್ನು ಜಾಗ್ರತೆಯಿಂದ ಬಳಸಿ.

ಕನ್ಯಾ: ಪರಿಶ್ರಮವಿದ್ದರೂ ಅಲ್ಪ ಕಾರ್ಯಸಿದ್ಧಿಯಾಗುವುದು ದುಃಖಕ್ಕೆ ಮೂಲ ಕಾರಣ. ಧ್ಯಾನ ಹಾಗೂ ಕ್ರೀಡೆಯಂಥ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ಸೇವಾನಿರತ ವ್ಯಕ್ತಿಗಳಿಗೆ ಜನಪ್ರಿಯತೆ ಹೆಚ್ಚುತ್ತದೆ.

ತುಲಾ: ಸಹಕಾರವನ್ನು ಪಡೆದು ನಿಮ್ಮನ್ನೇ ಮೂರ್ಖರನ್ನಾಗಿ ಮಾಡುವವರು ಎದುರಾಗುವರು. ತಾಯಿಯ ಸಹಾಯದಿಂದ ಸ್ವಂತ ಉದ್ಯೋಗದಲ್ಲಿ ಅಧಿಕ ಲಾಭವಾಗುವುದು. ಮನೆಯಲ್ಲಿ ವಿವಾಹ ಸಿದ್ಧತೆಗಳು ಭರದಿಂದ ಸಾಗಲಿವೆ.

ವೃಶ್ಚಿಕ: ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ಇರಿ. ಕಾರ್ಖಾನೆಯಲ್ಲಿ ವಿದ್ಯುತ್ ಶಕ್ತಿಯ ಲೋಪದಿಂದ ನಷ್ಟ ಸಂಭವಿಸಬಹುದು. ಹೂಡಿಕೆ ವಿಚಾರದಲ್ಲಿ ಜಾಗ್ರತೆಯಿಂದ ವ್ಯವಹರಿಸಿ.

ಧನು: ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆ ಮುಖ್ಯ. ಕೇವಲ ಮನರಂಜನೆಗಾಗಿ ಅಧಿಕ ಮಟ್ಟದಲ್ಲಿ ಧನ ಹಾನಿ ಆಗಲಿದೆ. ಸ್ವ ಇಚ್ಛೆಯೇ ಅಂತಿಮವಾಗಿರಲಿ.

ಮಕರ: ಮನೆಯ ಸದಸ್ಯರಲ್ಲಿದ್ದ ಭಿನ್ನಾಭಿಪ್ರಾಯ, ವೈಮನಸ್ಸಿಗೆ ಕಾರಣ ಮತ್ತು ಪರಿಹಾರವನ್ನು ಕಂಡುಕೊಳ್ಳುವಿರಿ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ಬೇಳೆ ವ್ಯಾಪಾರಸ್ಥರಿಗೆ ಅಧಿಕ ವ್ಯಾಪಾರವಿರುವುದು.

ಕುಂಭ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸರಿಯಲ್ಲ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳುವುದರಿಂದ ನೋವು ಕಡಿಮೆಯಾಗುವುದು.

ಮೀನ: ಸತ್ಕಾರ್ಯ ನೆರವೇರಿಸುವ ಬಗ್ಗೆ ಪೂರ್ವಭಾವಿಯಾಗಿ ಕುಟುಂಬದವರೊಡನೆ ದೀರ್ಘ ಸಮಾಲೋಚನೆ ನಡೆಸಿ. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಿಗೆ ಬರುವರು.

ಪದಬಂಧ 6391

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಸೆಮಣೆಯನ್ನೇರುತ್ತಿರುವ ಪುತ್ರ (4)
3.ಓಲಗದ ಸದ್ದಿರುವ ರಾಜನ ದರ್ಬಾರು (4)
5.ಒಲುಮೆಯಿಂದಲೇ ಮಾಡಿದ ಒತ್ತಾಯ (3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ! (3)
9.ಕಾಗೆ ಹತ್ತಿರ ಕಾಣಿಸಿದ ಅಭ್ರಕ (5)
10.ಶ್ವಾಸ ವನ್ನು ಹೀಗೆ ಹೇಳಿ (3)
11.ನಗ ಖರೀದಿಸಿದಾಗ ಕೈಯ್ಯಲ್ಲಿರುವ ಹಣ (3)
13.ಅರ್ಹವಾಗಿದ್ದು ಒದಗಬಹುದಾದದ್ದು (3)
15.ಯುದ್ಧದ ನಗಾರಿ (4)
16.ಅದೃಷ್ಟವೇ ಇಲ್ಲದವ (4)

ಮೇಲಿಂದ ಕೆಳಕ್ಕೆ
1.ಕೊಬ್ಬೇರಿದ ಆನೆಯಿದು (4)
2.ಛೇ!ಜಗಲಿಯ ಆಜುಬಾಜು ಎಲ್ಲಾ ಕೊಳೆಕಸ ! (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ? (3)
4.ಕುಳ್ಳನಲ್ಲ! ಭಾರೀ ಶ್ರೀಮಂತ! (4)
7.ಕೊನೆಗೆ ಕಾರು ಇದ್ದಗಲೇ ಇದು ಅಪವಾದ (3)
8.ಪಾಪಿಗಳ ಲೋಕ ಉಲ್ಟಾ ಪಲ್ಟಾ ಕಾಣುತ್ತಿದೆ (3)
10.ಅಪಕಾರದ ವಿರುದ್ಧ ಪದ (4)
12.ಕೆಟ್ಟ ಅದೃಷ್ಟವಿದು (4)
13.ತಿರುಗುತ್ತಲೇ ಇರುವ ಆಚಾರಿ! (3)
14.ವ್ಯವಸಾಯಗಾರನ ದುಃಖ (3)



6390ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪರಮಪದ 6.ಕಟಾಕ್ಷ 7.ನಿರ್ಗತ 8.ಸರಸ 12.ವಿನಿಯೋಗ 13.ಜೀವಚ್ಛವ 14.ಸುದಿನ 16.ವಲ್ಮೀಕ 18.ಬುದ್ಬುದ 20.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಮಂಠ 2.ಪಕ್ಷ 3.ಮತ್ಸರ 4.ದನಿ 5.ಪ್ರತಿ 8.ಸವಿಗನಸು 9.ಸಹಜೀವನ 10.ಹವಿಸ್ಸು 11.ಬವಣೆ 15.ದಿವಾನ 16.ವಸ್ತ್ರ 17.ಕವಿ 18.ಬುಧ 19.ದಡಿ

ಸುಡೊಕು 6774

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		3	5		6		4	7
				4				
7		4	9			5		3
9	1							8
		7		9			1	
5	2				3			4
8		1					6	
	5		1		4	8		9
4		9		6			5	

6773 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಹೊರ್ಮುಜ್: ಜಲಬಾಂಬ್ ಪತ್ತೆಗೆ ಕೃತಕ ಬುದ್ಧಿಮತ್ತೆ ಬಲ


ಹೊರ್ಮುಜ್ ಜಲಸಂಧಿ

ವಾಷಿಂಗ್ಟನ್ (ರಾಯಿಟರ್ಸ್): ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ಅಳವಡಿಸಿರುವ ಜಲಬಾಂಬ್‌ಗಳನ್ನು ಪತ್ತೆಹಚ್ಚಲು ಅಮೆರಿಕದ ನೌಕಾಪಡೆಯು ತನ್ನ ಕೃತಕ ಬುದ್ಧಿಮತ್ತೆ (ಎ.ಐ) ಸಾಮರ್ಥ್ಯವನ್ನು ಹೆಚ್ಚಿಸುತ್ತಿದೆ.

ಇದಕ್ಕಾಗಿ ನೌಕಾಪಡೆಯು 'ಸಮುದ್ರ ಕಾರ್ಯಾಚರಣೆಗಳಿಗಾಗಿ ವೇಗದ ಮಷಿನ್ ಲರ್ನಿಂಗ್ ತಂತ್ರಜ್ಞಾನ ಯೋಜನೆ'ಯಡಿ (ಪ್ರಾಜೆಕ್ಟ್ ಎಎಂಎಂಒ) ಸ್ಯಾನ್ ಫ್ರಾನ್ಸಿಸ್ಕೊದ ಎ.ಐ ಕಂಪನಿ 'ಡೊಮಿನೊ ಡೇಟಾ ಲ್ಯಾಬ್'ನೊಂದಿಗೆ 99.7 ಮಿಲಿಯನ್ ಡಾಲರ್ (ಸುಮಾರು ₹945.8 ಕೋಟಿ) ಮೊತ್ತದ ಒಪ್ಪಂದ ಮಾಡಿಕೊಂಡಿದೆ.

ಈ ಯೋಜನೆಗೆ ಅಗತ್ಯವಿರುವ ಎ.ಐ ವ್ಯವಸ್ಥೆಯನ್ನು ಡೊಮಿನೊ ಕಂಪನಿ ಒದಗಿಸಲಿದೆ. ಇದರಿಂದ ಜಲ ಬಾಂಬ್‌ಗಳನ್ನು ಪತ್ತೆಹಚ್ಚುವ ಪ್ರಕ್ರಿಯೆಯಲ್ಲಿ ವೇಗ ಹಾಗೂ ನಿಖರತೆ ದೊರೆಯಲಿದೆ. ಅಲ್ಲದೆ, ಈ ಕಾರ್ಯದಲ್ಲಿ ನಾವಿಕರು ನೇರವಾಗಿ ತೊಡಗಿಸಿಕೊಳ್ಳುವುದು ಕಡಿಮೆಯಾಗಲಿದೆ.

'ಸಮುದ್ರದಾಳದಲ್ಲಿರುವ ಸ್ಫೋಟಕಗಳನ್ನು ಪತ್ತೆ ಮಾಡುವುದು ಈ ಹಿಂದೆ ಹಡಗುಗಳ ಕೆಲಸವಾಗಿತ್ತು. ಈಗ ಆ ಕೆಲಸವನ್ನು ಎ.ಐ ಮಾಡಲಿದೆ' ಎಂದು ಡೊಮಿನೊ ಸಂಸ್ಥೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಥಾಮಸ್ ರಾಬಿನ್ಸನ್ ತಿಳಿಸಿದ್ದಾರೆ.

'ತೈಲ ಸಾಗಣೆಯ ಪ್ರಮುಖ ಸಮುದ್ರ ಮಾರ್ಗವಾಗಿರುವ ಈ ಜಲಸಂಧಿಯಲ್ಲಿ ಇರಾನ್‌ನ ಜಲಬಾಂಬ್‌ಗಳನ್ನು ನಮ್ಮ ನೌಕಾಪಡೆಯು ತೆರವುಗೊಳಿಸುತ್ತಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಈ ಮಾರ್ಗದಲ್ಲಿ ಹಡಗುಗಳ ಸಂಚಾರಕ್ಕೆ ಉಂಟಾಗುತ್ತಿರುವ ಅಡಚಣೆಯಿಂದಾಗಿ ಜಾಗತಿಕ ಆರ್ಥಿಕತೆಯ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿದೆ. ಅಮೆರಿಕ ಮತ್ತು ಇರಾನ್ ನಡುವೆ ತಾತ್ಕಾಲಿಕವಾಗಿ ಕದನ ವಿರಾಮ ಏರ್ಪಟ್ಟಿದ್ದರೂ, ಸಮುದ್ರದೊಳಗಿನ ಸ್ಫೋಟಕಗಳನ್ನು ಪತ್ತೆಹಚ್ಚಿ ತೆರವುಗೊಳಿಸಲು ಹಲವು ತಿಂಗಳುಗಳೇ ಹಿಡಿಯುವ ಸಾಧ್ಯತೆ ಇದೆ.

ಮುಖ್ಯಾಂಶಗಳು

- ₹945.8 ಕೋಟಿ ಮೊತ್ತದ ಒಪ್ಪಂದ
- ಸಮುದ್ರದಾಳದಲ್ಲಿ ಸ್ಫೋಟಕಗಳ ಪತ್ತೆಗೆ ಸಹಕಾರಿ
- ಪತ್ತೆ ಕಾರ್ಯದಲ್ಲಿ ನಾವಿಕರ ಪಾಲ್ಗೊಳ್ಳುವಿಕೆ ಕಡಿಮೆಗೊಳಿಸಬಹುದು

ಜಿಎಸ್‌ಟಿ: ₹2.43 ಲಕ್ಷ ಕೋಟಿ

ದೇಶೀಯ, ಆಮದು ವಹಿವಾಟು ಹೆಚ್ಚಳದಿಂದ ವರಮಾನ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಮೊದಲ ತಿಂಗಳಾದ ಏಪ್ರಿಲ್‌ನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ₹2.43 ಲಕ್ಷ ಕೋಟಿ ದಾಖಲೆಯ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ಈ ಬಾರಿಯ ವರಮಾನದ ಸಂಗ್ರಹದಲ್ಲಿ ಶೇ 8.7ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನದಲ್ಲಿ ಏರಿಕೆಯಾಗಿರುವುದು, ದೇಶದ ಮಾರುಕಟ್ಟೆಯಲ್ಲಿ ಮಾರಾಟ ಮತ್ತು ಖರೀದಿ ಹೆಚ್ಚಳ ಆಗಿರುವುದು ಜಿಎಸ್‌ಟಿ ಸಂಗ್ರಹ ಜಾಸ್ತಿ ಆಗಿರುವುದಕ್ಕೆ ಕಾರಣ ಎಂದು ತಿಳಿಸಿದೆ.

ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನದಲ್ಲಿ ಶೇ 4.3ರಷ್ಟು ಏರಿಕೆಯಾಗಿದ್ದು, ₹1.85 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ಮಾಡಿಕೊಂಡ ಸರಕುಗಳಿಂದ ₹57,580 ಕೋಟಿ ಸಂಗ್ರಹವಾಗಿದ್ದು, ಶೇ 25.8ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮರುಪಾವತಿಯು ಶೇ 19.3ರಷ್ಟು ಏರಿಕೆಯಾಗಿದ್ದು, ₹31,793 ಕೋಟಿಯಷ್ಟಾಗಿದೆ. ಮರುಪಾವತಿ ಬಳಿಕ ನಿವ್ವಳ ಜಿಎಸ್‌ಟಿ ಸಂಗ್ರಹ ಶೇ 7.3ರಷ್ಟು ಹೆಚ್ಚಳವಾಗಿದ್ದು, ₹2.11 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

'ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಜಾರಿಯಾದ ಜಿಎಸ್‌ಟಿ 2.0 ಬಳಿಕ, ಆರಂಭದಲ್ಲಿ ಸಂಗ್ರಹವು ಇಳಿಕೆಯಾಗಿತ್ತು. ಬಳಿಕ ಏರಿಕೆ ಕಾಣುತ್ತಿದ್ದು, ಸಂಗ್ರಹದ ಮಾಸಿಕ ಬೆಳವಣಿಗೆಯು ಶೇ 7ರಿಂದ ಶೇ 8ರಷ್ಟಿದೆ' ಎಂದು ಪ್ರೈಸ್ ವಾಟರ್‌ಹೌಸ್ ಆ್ಯಂಡ್ ಎಲ್‌ಎಲ್‌ಪಿ ಪಾಲುದಾರ ಪ್ರತೀಕ್ ಜೈನ್ ಹೇಳಿದ್ದಾರೆ.

'ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನ ಹೆಚ್ಚಳವಾಗಿದೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಇದ್ದರೂ ದೇಶದ ವ್ಯಾಪಾರ ವಹಿವಾಟು ಉತ್ತಮವಾಗಿದೆ. ಇದು ವರಮಾನ ಹೆಚ್ಚಲು ಕಾರಣ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಮಹೇಶ್ ಜೈಸಿಂಗ್ ಹೇಳಿದ್ದಾರೆ.

ಜಿಎಸ್‌ಟಿ: ಯಾವ ಮೂಲದಿಂದ ಎಷ್ಟು ಸಂಗ್ರಹ (₹ಕೋಟಿಗಳಲ್ಲಿ)

ಸಿಜಿಎಸ್‌ಟಿ	₹52,140
ಎಸ್‌ಜಿಎಸ್‌ಟಿ	₹61,331
ಐಜಿಎಸ್‌ಟಿ	₹1,29,232
ಒಟ್ಟು ಸಂಗ್ರಹ	₹2,42,703

ಸುದ್ದಿ 2 ನಿಮಿಷ

₹60,847 ಕೋಟಿ ವಾಪಸ್

ನವದೆಹಲಿ (ಪಿಟಿಐ): ಏಪ್ರಿಲ್ ತಿಂಗಳಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಯಿಂದ ₹60,847 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟು ಮತ್ತು ಆರ್ಥಿಕತೆ ಅನಿಶ್ಚಿತತೆಯು ವಿದೇಶಿ ಬಂಡವಾಳದ ಹೊರಹರಿವಿಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

2025ರ ಪೂರ್ಣ ಕ್ಯಾಲೆಂಡರ್ ವರ್ಷದಲ್ಲಿ ₹1.66 ಲಕ್ಷ ಕೋಟಿ ಬಂಡವಾಳ ಹೊರಹರಿವಾಗಿತ್ತು. ಆದರೆ, ಪ್ರಸಕ್ತ ವರ್ಷದ ಜನವರಿಯಿಂದ ಏಪ್ರಿಲ್‌ವರೆಗೆ ₹1.92 ಲಕ್ಷ ಕೋಟಿ ಬಂಡವಾಳ ವಾಪಸ್ ಆಗಿದೆ.

ಜನವರಿಯಲ್ಲಿ ₹35,962 ಕೋಟಿ, ಮಾರ್ಚ್‌ನಲ್ಲಿ ₹1.17 ಲಕ್ಷ ಕೋಟಿ ಮತ್ತು ಏಪ್ರಿಲ್‌ನಲ್ಲಿ ₹60,847 ಕೋಟಿ ಬಂಡವಾಳ ಹೊರಹರಿವಾಗಿದೆ. ಆದರೆ, ಫೆಬ್ರುವರಿ ತಿಂಗಳಿನಲ್ಲಿ ಮಾತ್ರ ₹22,615 ಕೋಟಿ ಹೂಡಿಕೆ ಆಗಿತ್ತು ಎಂದು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಅಂಕಿ–ಅಂಶವು ತಿಳಿಸಿದೆ.

'ಪಶ್ಚಿಮ ಏಷ್ಯಾದ ಸಂಘರ್ಷದಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಹೆಚ್ಚಾಗುವ ಆತಂಕ ಉಂಟು ಮಾಡಿದೆ. ಇದರಿಂದ ಹೂಡಿಕೆದಾರರು ಭಾರಿ ಪ್ರಮಾಣದಲ್ಲಿ ಬಂಡವಾಳವನ್ನು ವಾಪಸ್ ಪಡೆಯಲು ಮುಂದಾದರು' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಪ್ರಧಾನ ಸಂಶೋಧನಾ ವ್ಯವಸ್ಥಾಪಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಚೋರಾಯಸಿ: ದೇಶದ ಮೊದಲ ತಡೆರಹಿತ ಟೋಲ್

ನವದೆಹಲಿ (ಪಿಟಿಐ): ಗುಜರಾತ್‌ನ ಸೂರತ್–ಭರೂಚ್ ವಿಭಾಗದ ರಾಷ್ಟ್ರೀಯ ಹೆದ್ದಾರಿ 48ರಲ್ಲಿನ ಚೋರಾಯಸಿ ಟೋಲ್ ಪ್ಲಾಜಾ, ದೇಶದ ಮೊದಲ ತಡೆರಹಿತ ಟೋಲ್ ಸಂಗ್ರಹ ವ್ಯವಸ್ಥೆ ಹೊಂದಿದ್ದು, ಶುಕ್ರವಾರದಿಂದ ಕಾರ್ಯಾರಂಭ ಮಾಡಿದೆ.

'ಅತ್ಯಾಧುನಿಕ ವ್ಯವಸ್ಥೆಯು, ಸ್ವಯಂಚಾಲಿತವಾಗಿ ವಾಹನಗಳ ಸಂಖ್ಯಾಫಲಕ ಗುರುತಿಸುವಿಕೆ (ಎಎನ್‌ಪಿಆರ್) ಮತ್ತು ಫಾಸ್ಟ್ಯಾಗ್ ನಂತಹ ಸುಧಾರಿತ ತಂತ್ರಜ್ಞಾನಗಳನ್ನು ಬಳಸಿಕೊಂಡು ವಾಹನಗಳನ್ನು ನಿಲ್ಲಿಸುವ ಅಗತ್ಯವಿಲ್ಲದೆಯೇ ಸರಾಗವಾಗಿ ಟೋಲ್ ಸಂಗ್ರಹವನ್ನು ಸಾಧ್ಯವಾಗಿಸಲಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಈ ವ್ಯವಸ್ಥೆಯಿಂದ ಪ್ರಯಾಣದ ಸಮಯ ಉಳಿಯಲಿದೆ. ಹೆದ್ದಾರಿಗಳಲ್ಲಿ ವಾಹನಗಳ ದಟ್ಟಣೆ ಕಡಿಮೆಯಾಗಲಿದ್ದು, ಇಂಧನ ಉಳಿತಾಯವಾಗಲಿದೆ. ಅಲ್ಲದೆ, ಟೋಲ್ ಸಂಗ್ರಹ ಕಾರ್ಯಾಚರಣೆಯಲ್ಲಿ ಮಾನವ ಹಸ್ತಕ್ಷೇಪವನ್ನು ಕಡಿಮೆ ಮಾಡುತ್ತದೆ ಎಂದು ತಿಳಿಸಿದ್ದಾರೆ.

'ಡಿಸೆಂಬರ್ ವೇಳೆಗೆ ದೇಶದ ಹಲವಾರು ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ತಡೆರಹಿತ ಸಂಚಾರ ವ್ಯವಸ್ಥೆ ಜಾರಿಗೆ ತರಲು ಯೋಜಿಸಲಾಗಿದೆ' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಇತ್ತೀಚೆಗೆ ಹೇಳಿದ್ದರು.

ಅಡಿಗಾಸ್ ಯಾತ್ರಾ: ₹ 20 ಸಾವಿರ ಕಡಿತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಜ್ಯದ ಅಡಿಗಾಸ್ ಯಾತ್ರಾ ಪ್ರವಾಸಿ ಸಂಸ್ಥೆಯು ತನ್ನ ಪ್ರವಾಸಿಗರಿಗೆ ಅಂತರರಾಷ್ಟ್ರೀಯ ಪ್ರವಾಸಗಳ ದರಗಳಲ್ಲಿ ವಿಶೇಷ ರಿಯಾಯಿತಿ ಘೋಷಿಸಿದೆ. ವಿದೇಶ ಪ್ರವಾಸದಲ್ಲಿ ಎಲ್ಲ ರೀತಿಯ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡುವ ಸಂಸ್ಥೆಯು 'ನಮ್ಮ ಗ್ಯಾರಂಟಿ' ಯೋಜನೆಯಡಿ ಎಲ್ಲ ವಿದೇಶಿ ಪ್ರವಾಸಗಳಿಗೆ ₹2 ಸಾವಿರದಿಂದ ಗರಿಷ್ಠ ₹20 ಸಾವಿರದವರೆಗೆ ರಿಯಾಯಿತಿ ಘೋಷಿಸಿದೆ.

ಒಂದು ವೇಳೆ ಅಂತರರಾಷ್ಟ್ರೀಯ ಪ್ರವಾಸದಲ್ಲಿ ಗರಿಷ್ಠ ರಿಯಾಯಿತಿ ಬಳಸದಿದ್ದರೆ, ದೇಶೀಯ ಪ್ರವಾಸದಲ್ಲಿ ಆ ರಿಯಾಯಿತಿಯ ಜೊತೆಗೆ ₹5 ಸಾವಿರ ಹೆಚ್ಚುವರಿ ಕೊಡುಗೆಯನ್ನೂ ಪಡೆಯಬಹುದು. ಇದು ಸೀಮಿತ ಅವಧಿಗೆ ಲಭ್ಯವಿದೆ.

'ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಬಿಕ್ಕಟ್ಟು, ರೂಪಾಯಿ ಮೌಲ್ಯ ಕುಸಿತ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇರಾನ್- ಅಮೆರಿಕ ಯುದ್ಧ ಸೇರಿ ಹಲವು ಕಾರಣಗಳಿಂದ ಅಂತರರಾಷ್ಟ್ರೀಯ ಪ್ರವಾಸೋದ್ಯಮ ದುಬಾರಿ ಆಗಿದೆ. ಹೀಗಿದ್ದರೂ, ಪ್ರವಾಸಿಗರಿಗೆ ಯಾವುದೇ ಸಮಸ್ಯೆ ಆಗದಿರಲೆಂದು ಈ ರಿಯಾಯಿತಿ ಘೋಷಿಸಲಾಗಿದೆ' ಎಂದು ಅಡಿಗಾಸ್ ಯಾತ್ರಾ ಸಂಸ್ಥೆ ಸ್ಥಾಪಕ ಕೆ. ನಾಗರಾಜ ಅಡಿಗ ತಿಳಿಸಿದ್ದಾರೆ.

ರಿಯಾಯಿತಿ: ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ಯುರೋಪ್, ಸಿಂಗಪುರ, ಮಲೇಷ್ಯಾ, ಥಾಯ್ಲೆಂಡ್, ದಕ್ಷಿಣ ಆಫ್ರಿಕಾ, ವಿಯೆಟ್ನಾಂ, ಕಾಂಬೋಡಿಯಾ, ಬಾಲಿ, ಶ್ರೀಲಂಕಾ, ನೇಪಾಳ-ಮುಕ್ತಿನಾಥ, ಕೈಲಾಸ ಮಾನಸ ಸರೋವರ ಯಾತ್ರಾಗೆ ರಿಯಾಯಿತಿ ಸೌಲಭ್ಯವಿದೆ. ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 7022259008 ಅಥವಾ 9449478944.

ಮುಂಬೈ ಧಾರಣೆ (ಶೇಂಗಾ) 01-05-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1453 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1550)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,48,400 (1,46,400)
ಬೆಳ್ಳಿ ಕೆ.ಜಿಗೆ	2,44,000 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕಾರ್ಮಿಕರ ಮಕ್ಕಳಿಗೆ 'ಶಾಲಾ ಕಿಟ್'

ಒಂದನೇ ಪುಟದಿಂದ...

ಯೋಜನೆಗೆ ತಗುಲುವ ವೆಚ್ಚ ₹115.84 ಕೋಟಿಯನ್ನು ಮಂಡಳಿಯ ಸುಂಕ ನಿಧಿಯಿಂದ ಭರಿಸಲಾಗುವುದು. ಸರ್ಕಾರದ ಬೊಕ್ಕಸಕ್ಕೂ ಹೊರೆಯಾಗುವುದಿಲ್ಲ ಎಂದು ಇಲಾಖಾ ಅಧಿಕಾರಿಗಳು ತಿಳಿಸಿದ್ದಾರೆ.

ಆರ್ಥಿಕ ಇಲಾಖೆ ಷರತ್ತುಗಳು: 4ಜಿ ವಿನಾಯಿತಿ ಹೊಂದಿರುವ ವಸ್ತುಗಳನ್ನು ಮಾತ್ರ ಎಂಎಸ್‌ಐಎಲ್ ಮೂಲಕ ಖರೀದಿಸಬೇಕು. 4ಜಿ ವಿನಾಯಿತಿ ವ್ಯಾಪ್ತಿಗೆ ಒಳಪಡದ ಇತರೆ ವಸ್ತುಗಳ ಖರೀದಿಯನ್ನು ಕೆಟಿಪಿಪಿ ಕಾಯ್ದೆ ಪ್ರಕಾರ ಮುಕ್ತ ಟೆಂಡರ್ ಮೂಲಕ ಕೈಗೊಳ್ಳಬೇಕು ಎಂದು ಆರ್ಥಿಕ ಇಲಾಖೆ ಷರತ್ತು ವಿಧಿಸಿದೆ.

ಕಿಟ್‌ನಲ್ಲಿ ಏನೇನಿರುತ್ತವೆ?

- ಶಾಲಾ ಚೀಲ ಮತ್ತು ಪುಸ್ತಕಗಳು
- ವಿವಿಧ ವಿಷಯಗಳಿಗೆ ಸಂಬಂಧಿಸಿದ ನೋಟ್ ಪುಸ್ತಕಗಳು
- ಪೆನ್, ಪೆನ್ಸಿಲ್, ರಬ್ಬರ್ ಮತ್ತು ಲೇಖನ ಸಾಮಗ್ರಿಗಳು
- ಜಾಮಿಟ್ರಿ ಬಾಕ್ಸ್, ಶೈಕ್ಷಣಿಕ ಪೂರಕ ವಸ್ತುಗಳು

ಫಲಾನುಭವಿಗಳು– ಕಿಟ್‌ನ ವೆಚ್ಚ

ತರಗತಿ	ವಿದ್ಯಾರ್ಥಿ ಸಂಖ್ಯೆ	ಕಿಟ್ ದರ (₹)	ಕಿಟ್‌ನ ಪ್ಯಾಕಿಂಗ್ ವೆಚ್ಚ(₹)	ಕಿಟ್‌ನ ವೆಚ್ಚ	ಒಟ್ಟು ವೆಚ್ಚ (₹ಲಕ್ಷ)
1-5	45,000	8625.35	81.47	8706.82	39,18,06,900
6-8	35,000	8199.24	81.47	8280,71	28,98,24,850
9-12	50,000	9454.16	81.47	9535.63	47,67,81,500
ಒಟ್ಟು	1,30,000	-	-	-	115,84,13,250

ಎಚ್‌ಎಎಲ್‌ಗೆ ಕನ್ನಡಿಗನ ಸಾರಥ್ಯ

ಒಂದನೇ ಪುಟದಿಂದ...

ಎಚ್‌ಎಎಲ್‌ನ ನಿರ್ದೇಶಕರಾಗಿಯೂ (ಕಾರ್ಯಾಚರಣೆ) ಸೇವೆ ಸಲ್ಲಿಸಿದ್ದು, ಎಚ್‌ಎಎಲ್‌ಗೆ ಮಹಾರತ್ನ ಸ್ಥಾನ ಲಭಿಸುವಲ್ಲಿ ರವಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ.

ಕರ್ನಾಟಕದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ರವಿ ಅವರು, ಅಹಮದಾಬಾದ್‌ನ ಐಐಎಂ ಮತ್ತು ಫ್ರಾನ್ಸ್‌ನ ಐಎಎಸ್‌ಟಿ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾಗಿದ್ದಾರೆ.

ಡಿ.ಕೆ. ಸುನೀಲ್ ಅವರ ಅಧಿಕಾರಾವಧಿ ಏಪ್ರಿಲ್ 30ಕ್ಕೆ ಕೊನೆಗೊಂಡಿತು. ಇವರ ಸ್ಥಾನಕ್ಕೆ ರವಿ ನೇಮಕವಾಗಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹590
	12 ಕ್ಕೆ	₹84
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-552
ದ್ವಿತಳಿ (ಬಿ.ವಿ)	₹355-722

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹244
ಆರ್‌ಎಸ್‌ಎಸ್-5	₹239
ಗುಡ್ ಲಾಟ್	₹211

ಪಶ್ಚಿಮ ಏಷ್ಯಾ ಸಂಘರ್ಷ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ

'ಒಪ್ಪಂದ ಮಾಡಿಕೊಳ್ಳಲು ಇರಾನ್ ಬಯಕೆ'

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಕದನ ವಿರಾಮದ ಕಾರಣದಿಂದ ಈಗ ಸ್ಥಗಿತಗೊಂಡಿರುವ ಯುದ್ಧವನ್ನು ಕೊನೆಗಾಣಿಸಲು ಅಮೆರಿಕದ ಜೊತೆಗೆ ಇರಾನ್ ಒಪ್ಪಂದ ಮಾಡಿಕೊಳ್ಳಲು ಬಯಸುತ್ತಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಇರಾನ್ ಮೇಲೆ ಮತ್ತೆ ವಾಯುದಾಳಿ ಮತ್ತೆ ನಡೆಸುವ ಸಾಧ್ಯತೆಯನ್ನು ಅವರು ತಳ್ಳಿಹಾಕಿದ್ದಾರೆ.

ಇಲ್ಲಿನ ಓವಲ್ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ನಡೆಸಿದ ಸಂವಾದದಲ್ಲಿ ಮಾತನಾಡಿದ ಅವರು, 'ಏಪ್ರಿಲ್ 8ರಂದು ಕೈಗೊಂಡ ಒಪ್ಪಂದದ ಪ್ರಕಾರ ಉಭಯ ರಾಷ್ಟ್ರಗಳು ಕದನ ವಿರಾಮಕ್ಕೆ ಒಪ್ಪಿವೆ. ಒಂದೊಮ್ಮೆ ಅಮೆರಿಕವು ಯುದ್ಧ ಪುನಾರರಂಭಿಸಿ ದರೆ, ಮತ್ತೆ ವಾಯುದಾಳಿ ನಡೆಸುವುದಾಗಿ ಇರಾನ್ ಬೆದರಿಕೆ ವೊಡ್ಡಿದೆ. ಆದರೆ, ಈಗ ಅದರ ಅಗತ್ಯವಿಲ್ಲ. ಅವರೇ ಕದನ ವಿರಾಮ ಮುರಿಯಲು ಸಿದ್ಧರಿಲ್ಲ' ಎಂದು ಟ್ರಂಪ್ ತಿಳಿಸಿದ್ದಾರೆ.

'ಇರಾನ್ ಮೇಲೆ ನಾವು ನಡೆಸಿದ ಸೇನಾ ಕಾರ್ಯಾಚರಣೆಯ ಬಳಿಕ ಆ ದೇಶದ ಸೇನಾ ಸಾಮರ್ಥ್ಯ ತೀವ್ರವಾಗಿ ಕುಗ್ಗಿದೆ' ಎಂದು ಹೇಳಿದ್ದಾರೆ.

'ಅವರ ನೌಕಾಪಡೆ ನಾಶವಾಗಿದೆ, ವಾಯುಸೇನೆ ನಾಶವಾಗಿದೆ. ಅವರ ಡ್ರೋನ್ ಕಾರ್ಖಾನೆಯು ಶೇಕಡ 82ರಷ್ಟು ನಾಶವಾಗಿದೆ. ಅವರ ಕ್ಷಿಪಣಿ ತಯಾರಿಕಾ ಘಟಕಕ್ಕೂ ತೀವ್ರವಾಗಿ ಹಾನಿಯಾಗಿದ್ದು, ಶೇಕಡ 90ರಷ್ಟು ಕ್ಷಿಪಣಿ ನಾಶಪಡಿಸಲಾಗಿದೆ' ಎಂದು ಟ್ರಂಪ್ ವಿವರಿಸಿದ್ದಾರೆ.

'ಇರಾನ್‌ನ ಪರಮಾಣು ಸಾಮರ್ಥ್ಯವನ್ನು ನಾವು ಅಳಿಸಿ ಹಾಕಿದ್ದೇವೆ. ಹೊರ್ಮುಜ್ ಜಲಸಂಧಿಯನ್ನು ನಾವು ತಡೆದಿದ್ದರಿಂದ ಇರಾನ್ ಆರ್ಥಿಕತೆಯೂ ತೀವ್ರವಾಗಿ ಕುಸಿದಿದೆ' ಎಂದು ತಿಳಿಸಿದ್ದಾರೆ.

'ಅವರಿಗೆ ತೈಲದಿಂದ ಯಾವ ಕಡೆಯಿಂದಲೂ ಹಣ ದೊರೆಯುತ್ತಿಲ್ಲ. ಆದಷ್ಟು ಬೇಗ ಸರಿಹೋಗಬಹುದು. ಇರಾನ್ ನಮ್ಮ ಜೊತೆಗೆ ಒಪ್ಪಂದ ಮಾಡಲು ಬಯಸುತ್ತಿದೆ. ಮಾತುಕತೆಯ ಸ್ಥಿತಿಗತಿಯ ಕುರಿತು ಕೆಲವು ಮಂದಿಗಷ್ಟೇ ತಿಳಿದಿದೆ. ಇರಾನ್ ನಮ್ಮ ಜೊತೆಗೆ ಒಪ್ಪಂದ ಮಾಡಲು ಬಯಸುತ್ತಿದೆ. ಮಾತುಕತೆ ಏನು ನಡೆಯುತ್ತಿದೆ ಎಂಬುದರ ಕುರಿತು ನನಗೆ ಹಾಗೂ ಕೆಲವು ವ್ಯಕ್ತಿಗಳಿಗೆ ಮಾತ್ರ ತಿಳಿದಿದೆ' ಎಂದು ಟ್ರಂಪ್ ಹೇಳಿದ್ದಾರೆ.

ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ: ಇರಾನ್ ವಿಚಾರವನ್ನು ಪ್ರಸ್ತಾಪದ ವೇಳೆ ಮತ್ತೆ ಹಳೆಯ ವಿಚಾರಗಳನ್ನು ಡೊನಾಲ್ಡ್ ಟ್ರಂಪ್ ನೆನಪಿಸಿಕೊಂಡಿದ್ದಾರೆ.

'ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷನಾದ ಬಳಿಕ ಭಾರತ ಹಾಗೂ ಪಾಕಿಸ್ತಾನ ಸೇರಿದಂತೆ 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಇಲ್ಲದಿದ್ದರೆ, ಭಾರಿ ಸುಂಕ ಹೇರುವುದಾಗಿ ಎಚ್ಚರಿಕೆ ನೀಡಿದ್ದೆ. ಪ್ರತಿ ಪ್ರಕರಣದಲ್ಲಿಯೂ ಪ್ರಧಾನಮಂತ್ರಿ ಹಾಗೂ ಆಯಾಯ ದೇಶಗಳ ಅಧ್ಯಕ್ಷರು ನನಗೆ ವೈಯಕ್ತಿಕವಾಗಿ ಪತ್ರ ಬರೆದು ಧನ್ಯವಾದ ಸಲ್ಲಿಸಿದ್ದಾರೆ' ಎಂದಿದ್ದಾರೆ.

'ಏಕಪಕ್ಷೀಯ ಒಪ್ಪಂದ ಒಪ್ಪಲ್ಲ'

ವಾಷಿಂಗ್ಟನ್/ ದುಬೈ: 'ಹೊರ್ಮುಜ್ ಜಲಸಂಧಿಯ ವಿಚಾರದಲ್ಲಿ ಇರಾನ್ ಕೈಗೊಳ್ಳುವ ಏಕಪಕ್ಷೀಯ ಒಪ್ಪಂದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಸಂಯುಕ್ತ ಅರಬ್ ಒಕ್ಕೂಟದ (ಯುಎಇ) ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅಂತರರಾಷ್ಟ್ರೀಯ ಸಾಮೂಹಿಕ ಇಚ್ಛಾಶಕ್ತಿ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವುದೇ ಪ್ರಾಥಮಿಕ ಗ್ಯಾರಂಟಿಯಾಗಿದೆ. ಇರಾನ್‌ನ ಏಕಪಕ್ಷೀಯ ನಿರ್ಧಾರವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಯುಎಇ ಅಧ್ಯಕ್ಷರ ಸಲಹೆಗಾರ ಅನ್ವರ್ ಗರ್ಗಶ್ ತಿಳಿಸಿದ್ದಾರೆ.

ಹೊಸ ಪ್ರಸ್ತಾವಕ್ಕೆ ಅಮೆರಿಕ ಅತೃಪ್ತಿ

ಟೆಹರಾನ್ (ಎಎಫ್‌ಪಿ): ತಮ್ಮೊಂದಿಗೆ ಮಾತುಕತೆಗಾಗಿ ಹೊಸ ಪ್ರಸ್ತಾವವನ್ನು ಇರಾನ್ ಗುರುವಾರ ಪಾಕಿಸ್ತಾನದ ಮೂಲಕ ಕಳುಹಿಸಿದೆ.

'ಅಮೆರಿಕದೊಂದಿಗಿನ ಮಾತುಕತೆಗೆ ಇರಾನ್ ಹೊಸ ಪ್ರಸ್ತಾವನೆಯನ್ನು ಗುರುವಾರ ರಾತ್ರಿ ಪಾಕಿಸ್ತಾನಕ್ಕೆ ಕಳುಹಿಸಿದೆ' ಎಂದು ಇರಾನ್‌ನ ಅಧಿಕಾರಿಯೊಬ್ಬರು ಐಆರ್‌ಎನ್‌ಎ ಸುದ್ದಿಸಂಸ್ಥೆ ವರದಿ ಮಾಡಿದೆ. ಈ ಪ್ರಸ್ತಾವವು ನನಗೆ ಸಂತೃಪ್ತಿ ಕೊಟ್ಟಿಲ್ಲ ಎಂದು ಟ್ರಂಪ್ ತಿಳಿಸಿದ್ದಾರೆ.

ಹೊಸ ಪ್ರಸ್ತಾದಲ್ಲಿ ಯಾವ ವಿಷಯ ಒಳಗೊಂಡಿದೆ ಎಂಬುದು ಖಚಿತಪಟ್ಟಿಲ್ಲ.

ಗಡುವು ಮುಕ್ತಾಯ

ಇರಾನ್ ಜೊತೆಗಿನ ಅಮೆರಿಕ ಘೋಷಿಸಿರುವ 60 ದಿನಗಳ ಕದನ ವಿರಾಮವು ಮೇ 1ಕ್ಕೆ ಕೊನೆಗೊಂಡಿದೆ. ಯುದ್ಧ ಮುಂದುವರಿಸುವುದಾದರೆ, ಡೊನಾಲ್ಡ್ ಟ್ರಂಪ್ ಸರ್ಕಾರವು ಸಂಸತ್ತಿನ ಅನುಮೋದನೆ ಪಡೆಯುವುದು ಅನಿವಾರ್ಯವಾಗಿದೆ.

ಇರಾನ್ ಮೇಲೆ ಅಮೆರಿಕ ದಾಳಿ ನಡೆಸಿದ ಕುರಿತು ಟ್ರಂಪ್ ಮಾರ್ಚ್ 2ರಂದು ಸಂಸತ್ತಿಗೆ ತಿಳಿಸಿದ್ದು, ಮೇ 1ಕ್ಕೆ 60 ದಿನ ಪೂರ್ಣಗೊಂಡಿದೆ. ಯುದ್ಧ ಮುಂದುವರಿಸಲು ಸಂಸತ್ತಿನ ಅನುಮೋದನೆ ಪಡೆಯದ ಹೊರತು, ಅಮೆರಿಕ ಸಶಸ್ತ್ರ ಪಡೆಗಳ ಬಳಕೆಯನ್ನು 60 ದಿನಗಳ ಕೊನೆಗೊಳಿಸಬೇಕು ಎಂದು ಅಮೆರಿಕದ ಕಾನೂನು ಹೇಳುತ್ತದೆ. ಹೀಗಾಗಿ, 'ಇರಾನ್ ಜೊತೆಗಿನ ಅಮೆರಿಕದ ಯುದ್ಧ ಮುಕ್ತಾಯವಾಗಿದೆ' ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ ಎಂದು 'ಬಿಬಿಸಿ' ವರದಿ ಮಾಡಿದೆ.

ಕದನ ವಿರಾಮದ ಹೊರತಾಗಿಯೂ ಎರಡು ದೇಶಗಳು ಕೂಡ ಇದುವರೆಗೂ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ.

ಕೇರಳ: 6ರಂದು ಹೋಟೆಲ್ ಬಂದ್

ಕೊಚ್ಚಿ (ಪಿಟಿಐ): ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆಯನ್ನು ಖಂಡಿಸಿ ಕೇರಳ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘವು ಮೇ 6ರಂದು ರಾಜ್ಯದಾದ್ಯಂತ ಮುಷ್ಕರ ಹಮ್ಮಿಕೊಂಡಿದೆ.

'ಮುಷ್ಕರಕ್ಕೂ ಮುನ್ನ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆಗಳನ್ನು ನಡೆಸಲಾಗುವುದು. ಮೇ 6ರಂದು ಎಲ್ಲ ಹೋಟೆಲ್, ರೆಸ್ಟೋರೆಂಟ್‌ಗಳನ್ನು ಬಂದ್ ಮಾಡಲಾಗುತ್ತದೆ. ಜತೆಗೆ, ಜಿಲ್ಲಾ ಕೇಂದ್ರ ಮತ್ತು ತೈಲ ಕಂಪನಿ ಕಚೇರಿಗಳ ಎದುರು ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು' ಎಂದು ಸಂಘದ ಅಧ್ಯಕ್ಷ ಜಿ. ಜಯಪಾಲ್ ತಿಳಿಸಿದ್ದಾರೆ.

ಹೋಟೆಲ್ ಆಹಾರ ಬೆಲೆ ಏರಿಕೆ ಸಾಧ್ಯತೆ

ಒಂದನೇ ಪುಟದಿಂದ...

'ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ಮಾತನಾಡಿ, 'ಎಲ್‌ಪಿಜಿ ದರ ಹೆಚ್ಚಳದಿಂದ ಆಹಾರ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ. ದುಬಾರಿ ಹಣ ನೀಡಿ ಸಿಲಿಂಡರ್ ಖರೀದಿಸಿ, ಹೋಟೆಲ್ ಉದ್ಯಮ ನಡೆಸುವುದು ಕಷ್ಟ. ಚುನಾವಣೆ ಮುಗಿಯುತ್ತಿದ್ದಂತೆ ಕೇಂದ್ರ ದರ ಹೆಚ್ಚಳ ಮೂಲಕ ಆಘಾತ ನೀಡಿದೆ. ಕೂಡಲೇ ಎಲ್‌ಪಿಜಿ ದರ ಇಳಿಕೆ ಮಾಡುವಂತೆ ಕೇಂದ್ರವನ್ನು ಒತ್ತಾಯಿಸುತ್ತೇವೆ' ಎಂದರು.

'ಎಲ್‌ಪಿಜಿ ಸಿಲಿಂಡರ್ ಅಭಾವದಿಂದ ಕೆಲ ವಾರಗಳ ಹಿಂದೆಯೇ ಆಹಾರ ದರ ಹೆಚ್ಚಿಸಲಾಗಿದೆ. 19 ಕೆ.ಜಿ. ಸಿಲಿಂಡರ್‌ಗೆ ₹5 ಸಾವಿರ ನೀಡಿ ಖರೀದಿಸಿರುವುದು ಉಂಟು. ಇಂತಹ ಪರಿಸ್ಥಿತಿಯಲ್ಲಿ ವ್ಯವಹಾರ ನಡೆಸುವುದೇ ಕಷ್ಟವಾಗಿದೆ' ಎಂದು ದರ್ಶಿನಿ ಮಾಲೀಕ ಶ್ರೀನಾಥ್ ಭಟ್ ಹೇಳಿದರು.

'ಯುದ್ಧ ಆರಂಭವಾದಾಗಿನಿಂದ ಅಂದರೆ 60 ದಿನಗಳಲ್ಲಿ ಮೂರು, ನಾಲ್ಕು ಬಾರಿಗೆ ಸಿಲಿಂಡರ್ ದರ ಹೆಚ್ಚಿಸಲಾಗಿದೆ. ಸಿಲಿಂಡರ್ ಅಭಾವದಿಂದ ಹೋಟೆಲ್ ಮಾಲೀಕರು ದುಪ್ಪಟ್ಟು ನೀಡಿ ಎಲ್‌ಪಿಜಿ ಖರೀದಿಸುತ್ತಿದ್ದಾರೆ. ಇದೇ ರೀತಿ ದರ ಹೆಚ್ಚಳ ಮಾಡುತ್ತಿದ್ದರೆ, ಗ್ಯಾಸ್ ಏಜೆನ್ಸಿಗಳು ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡುತ್ತವೆ. ಈಗಾಗಲೇ ಸಿಲಿಂಡರ್ ಅಭಾವ ಹಾಗೂ ದರ ಹೆಚ್ಚಳ ಕಾರಣ ಹಲವು ಹೋಟೆಲ್, ದರ್ಶಿನಿಗಳು ಬಂದ್ ಆಗಿವೆ' ಎಂದು ಹೋಟೆಲ್ ಮಾಲೀಕರು ಬೇಸರ ವ್ಯಕ್ತಪಡಿಸಿದರು.

> **ಕೇಂದ್ರದ ಬೆಲೆ ಏರಿಕೆ ತೀರ್ಮಾನ ಖಂಡನೀಯ. ಇದರ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸುತ್ತದೆ. ರಾಜ್ಯದ ಜನರ ಪರ ಧ್ವನಿ ಎತ್ತದ ಬಿಜೆಪಿ ನಾಯಕರಾದ ವಿಜಯೇಂದ್ರ, ಅಶೋಕ ಸೇರಿದಂತೆ ಎಲ್ಲರೂ ಬೊಗಳೆ ದಾಸರು**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> **ಜಗತ್ತಿನ ಪರಿಸ್ಥಿತಿ ಎಲ್ಲರಿಗೂ ತಿಳಿದಿದೆ. ಎಲ್ಲಾ ದೇಶಗಳಲ್ಲೂ ಇದೇ ಸ್ಥಿತಿ ನಿರ್ಮಾಣವಾಗಿದೆ. ಕಾಂಗ್ರೆಸ್‌ನವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ**
> **ಬಿ.ವೈ.ವಿಜಯೇಂದ್ರ,** ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಸಂಘಟಿತ ಲೂಟಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ರಾಜ್ಯಗಳಲ್ಲಿ ಮತದಾನ ಮುಗಿಯುತ್ತಿದ್ದಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು ₹993 ಏರಿಕೆ ಮಾಡಿದೆ. ಇವರದ್ದು ಆಡಳಿತವಲ್ಲ, ಸಂಘಟಿತ ಲೂಟಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕೇವಲ ನಾಲ್ಕು ತಿಂಗಳಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಐದು ಬಾರಿ ಸ್ವಲ್ಪ–ಸ್ವಲ್ಪ ಏರಿಕೆ ಮಾಡಿದ್ದರು. ಚುನಾವಣೆ ಅವಧಿಯಲ್ಲಿ ಭಾರಿ ಪ್ರಮಾಣದ ಏರಿಕೆಯನ್ನು ತಡೆಹಿಡಿದು, ಈಗ ಒಮ್ಮೆಗೇ ₹993 ಹೆಚ್ಚಿಸಿದ್ದಾರೆ. ಒಟ್ಟಾರೆ ಗ್ರಾಹಕರಿಗೆ ₹1,518 ಹೊರೆಯಾಗಿದೆ' ಎಂದಿದ್ದಾರೆ.

'ಪ್ರತಿ ಬಾರಿ ಜಾಗತಿಕ ಸಂಘರ್ಷ ಮತ್ತು ಇತರ ಬೆಳವಣಿಗೆಗಳಿಂದ ಬೆಲೆ ಹೆಚ್ಚಳವಾದಾಗ, ಮೋದಿ ಅವರು ಅದನ್ನು ಜನ ಸಾಮಾನ್ಯರ ಹೆಗಲಿಗೆ ವರ್ಗಾಯಿಸಿದ್ದಾರೆ' ಎಂದು ಹೇಳಿದ್ದಾರೆ.

ವಾಣಿಜ್ಯ ಎಲ್‌ಪಿಜಿ: ₹993 ಹೆಚ್ಚಳ

ಒಂದನೇ ಪುಟದಿಂದ...

ನಾಲ್ಕನೇ ಬಾರಿ ಹೆಚ್ಚಳ: ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಪ್ರಾರಂಭವಾದ ಬಳಿಕ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಹೆಚ್ಚಳವಾಗುತ್ತಿದೆ. ಕಳೆದ ಮೂರು ತಿಂಗಳಿನಲ್ಲಿ ನಾಲ್ಕನೇ ಬಾರಿ ಏರಿಸಲಾಗಿದೆ.

ಕೊನೆಯದಾಗಿ ಏಪ್ರಿಲ್ 1ರಂದು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹195.50ರಷ್ಟು ಹೆಚ್ಚಿಸಲಾಗಿತ್ತು. ಅದಕ್ಕೂ ಮುನ್ನ ಮಾರ್ಚ್‌ನಲ್ಲಿ ₹142ರಷ್ಟು ಏರಿಕೆ ಮಾಡಲಾಗಿತ್ತು. ಇದರಿಂದ ಇಲ್ಲಿಯವರೆಗೆ ವಾಣಿಜ್ಯ ಸಿಲಿಂಡರ್ ದರ ₹1,331ರಷ್ಟು ಏರಿಕೆ ಕಂಡಿದೆ.

ಈ ಬಾರಿ, 14.2 ಕೆ.ಜಿ ತೂಕದ ಗೃಹಬಳಕೆಯ ಸಿಲಿಂಡರ್ ದರದಲ್ಲಿ ಬದಲಾವಣೆ ಆಗಿಲ್ಲ. ಅದು ₹913ರಷ್ಟೇ ಇದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ದೇಶದ ವಿಮಾನಯಾನ ಸಂಸ್ಥೆಗಳ ವಿಮಾನ ಇಂಧನ ಬೆಲೆಗಳು ಬದಲಾಗದೆ ಉಳಿದಿವೆ.

ಎಟಿಎಫ್, ಕೈಗಾರಿಕಾ ಡೀಸೆಲ್ ಹೆಚ್ಚಳ: ಆದರೆ, ಅಂತರರಾಷ್ಟ್ರೀಯ ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ದರ ಸುಮಾರು ಶೇ 5ರಷ್ಟು ಹಾಗೂ ಕೈಗಾರಿಕಾ ಬಳಕೆದಾರರು ಬಳಸುವ ಡೀಸೆಲ್ ಬೆಲೆ ಲೀಟರ್‌ಗೆ ₹137ರಿಂದ ₹149ಕ್ಕೆ ಏರಿಕೆಯಾಗಿದೆ.

ಸರ್ಕಾರಿ ಸ್ವಾಮ್ಯದ 'ಇಂಡಿಯನ್ ಆಯಿಲ್ ಕಾರ್ಪೊರೇಷನ್', 'ಭಾರತ್ ಪೆಟ್ರೋಲಿಯಂ', 'ಹಿಂದೂಸ್ತಾನ್ ಪೆಟ್ರೋಲಿಯಂ' ಸಂಸ್ಥೆಗಳು ಅಂತರರಾಷ್ಟ್ರೀಯ ಮಾನದಂಡಗಳು ಮತ್ತು ವಿನಿಮಯ ದರದ ಆಧಾರದ ಮೇಲೆ ಪ್ರತಿ ತಿಂಗಳ ಮೊದಲ ದಿನದಂದು ಎಟಿಎಫ್ ಮತ್ತು ಎಲ್‌ಪಿಜಿ ದರಗಳನ್ನು ಪರಿಷ್ಕರಿಸುತ್ತವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಇಂಧನ ಪೂರೈಕೆ ಸರಪಳಿಗಳನ್ನು ಅಡ್ಡಿಪಡಿಸಿದ್ದು, ಅದರಿಂದ ತೈಲ ದರ ಸುಮಾರು ಶೇ 50ರಷ್ಟು ಹೆಚ್ಚಳವಾಗಿದೆ.

'ಛೋಟಾ' ಸಿಲಿಂಡರ್- ₹261ರಷ್ಟು ಏರಿಕೆ: 5 ಕೆ.ಜಿ ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ₹549ರಿಂದ ₹810ಕ್ಕೆ (₹261) ಏರಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರು, ವಲಸಿಗರು, ವಿದ್ಯಾರ್ಥಿಗಳು, ಸಣ್ಣ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಈ 'ಛೋಟಾ' ಸಿಲಿಂಡರ್ ಬಳಸುತ್ತಿದ್ದಾರೆ. ಇದರ ಬೆಲೆ ಹೆಚ್ಚಳವು ಈ ವರ್ಗದ ಜನರ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತದೆ ಎಂದು ವಿಶ್ಲೇಷಿಸಲಾಗಿದೆ.

ವಿಳಾಸ ದೃಢೀಕರಣ ಸೇರಿದಂತೆ ಹೆಚ್ಚಿನ ದಾಖಲೆಗಳಿಲ್ಲದೆಯೇ, ಒಂದು ಗುರುತಿನ ಚೀಟಿ ಆಧಾರದ ಮೇಲೆ 5 ಕೆ.ಜಿ ಸಿಲಿಂಡರ್ ಅನ್ನು ವಿತರಿಸುವ ವ್ಯವಸ್ಥೆಯಿದೆ. ಎಲ್‌ಪಿಜಿ ವಿತರಣೆಯ ವಿವಿಧ ಸಂಸ್ಥೆಯವರು ಸರ್ಕಾರದ ಸೂಚನೆ ಮೇರೆಗೆ, ಇತ್ತೀಚೆಗೆ ಈ ಸಿಲಿಂಡರ್ ಖರೀದಿಸುವಂತೆ ಜನರನ್ನು ಉತ್ತೇಜಿಸಲು ಅಭಿಯಾನಗಳನ್ನೂ ನಡೆಸಿವೆ. ಇದೆಲ್ಲರ ಪರಿಣಾಮ ಸಣ್ಣ ಸಿಲಿಂಡರ್ ಬಳಸುವವರ ಸಂಖ್ಯೆ ಹೆಚ್ಚಾಗಿದೆ.

ಸಾಮಾನ್ಯವಾಗಿ ಗೃಹ ಬಳಕೆಗೆ ಹೆಚ್ಚಾಗಿ ಈ ಸಣ್ಣ ಸಿಲಿಂಡರ್ ಬಳಕೆ ಆಗುತ್ತದೆ. ಆದರೆ, ಈಗ 5 ಕೆ.ಜಿ ಸಿಲಿಂಡರ್ ಬೆಲೆಯು, 14.2 ಕೆ.ಜಿ ಸಿಲಿಂಡರ್ ಬೆಲೆಯ (₹913) ಸಮೀಪವೇ ಬಂದಿದೆ. ಸಣ್ಣ ಸಿಲಿಂಡರ್ ಬೆಲೆಯನ್ನು ವಾಣಿಜ್ಯ ಬಳಕೆ ಸಿಲಿಂಡರ್ ದರದಂತೆ ಹೆಚ್ಚಿಸಿರುವುದು ಬಳಕೆದಾರರಿಗೆ ಹೊರೆಯಾಗಲಿದೆ ಎಂದು ಹೇಳಲಾಗುತ್ತಿದೆ.

'ಪೆಟ್ರೋಲ್, ಡೀಸೆಲ್ ದರ ಏರಿಕೆ ತಳ್ಳಿಹಾಕಲಾಗದು'

ಜಾಗತಿಕ ಕಚ್ಚಾ ತೈಲ ಬೆಲೆಗಳಲ್ಲಿ ತೀವ್ರ ಏರಿಕೆ ಆಗುತ್ತಿರುವ ಕಾರಣ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ಹೆಚ್ಚಳವಾಗುವ ಸಾಧ್ಯತೆಯನ್ನು ತಳ್ಳಿಹಾಕಲು ಆಗದು ಎಂದು ಸರ್ಕಾರಿ ಮೂಲಗಳು ಶುಕ್ರವಾರ ತಿಳಿಸಿವೆ.

ಈ ವಾರ ಜಾಗತಿಕ ಕಚ್ಚಾ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 126 ಡಾಲರ್‌ಗೆ ಏರಿಕೆಯಾಗಿತ್ತು. ಅದು ನಾಲ್ಕು ವರ್ಷಗಳ ಗರಿಷ್ಠ ಮಟ್ಟ. ನಂತರ ಸ್ವಲ್ಪ ಇಳಿಕೆ ಕಂಡಿತು.

ಹೊರ್ಮುಜ್ ಜಲಸಂಧಿಯಲ್ಲಿ ನಿರ್ಬಂಧ, ಅಮೆರಿಕ ಮತ್ತು ಇರಾನ್ ನಾಯಕರ ನಡುವಿನ ಶಾಂತಿ ಮಾತುಕತೆ ಸ್ಥಗಿತ, ಮುಂದುವರಿದ ವಾಗ್ವಾದಗಳಿಂದಾಗಿ ಸದ್ಯ ಬ್ಯಾರೆಲ್‌ಗೆ 110 ಡಾಲರ್‌ಗಿಂತ ಹೆಚ್ಚಿನ ಬೆಲೆಯಿದೆ. ಕಳೆದ ವರ್ಷ ಬ್ಯಾರೆಲ್‌ಗೆ 70 ಡಾಲರ್ ಇದ್ದ ಕಚ್ಚಾ ತೈಲ, ಏಪ್ರಿಲ್ ತಿಂಗಳಲ್ಲಿ ಸರಾಸರಿ 114 ಡಾಲರ್‌ನಷ್ಟಿತ್ತು.

ಆದರೆ, ಅಂತರರಾಷ್ಟ್ರೀಯ ಇಂಧನ ಖರೀದಿ ವೆಚ್ಚದಲ್ಲಿ ಏರಿಕೆಯ ಹೊರತಾಗಿಯೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಮತ್ತು ಗೃಹ ಬಳಕೆ ಎಲ್‌ಪಿಜಿ ದರಗಳನ್ನು ಹೆಚ್ಚಿಸುವುದಿಲ್ಲ ಎಂದು ಭಾರತೀಯ ತೈಲ ನಿಗಮ (ಐಒಸಿ) ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ತೈಲ ಸಂಸ್ಥೆಗಳು ವೆಚ್ಚಕ್ಕೆ ಅನುಗುಣವಾಗಿ ವಾಣಿಜ್ಯ ಎಲ್‌ಪಿಜಿ, ಕೈಗಾರಿಕಾ ಡೀಸೆಲ್, 5 ಕೆ.ಜಿ ಎಲ್‌ಪಿಜಿ ಮತ್ತು ಅಂತರರಾಷ್ಟ್ರೀಯ ವಿಮಾನಗಳಲ್ಲಿ ಬಳಸುವ ಇಂಧನ ಬೆಲೆಗಳನ್ನು ಹೆಚ್ಚಿಸಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನ ಮುಕ್ತಾಯದ (ಏ.29) ಬಳಿಕ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ಲೀಟರ್‌ಗೆ ₹25ರಿಂದ ₹28ರಷ್ಟು ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಈ ಹಿಂದೆ ಹೇಳಿದ್ದರು.

> ಸಿಲಿಂಡರ್ ದರ ಹೆಚ್ಚಳ ಮಾಡುವುದಿಲ್ಲ ಎಂದು ಮೋದಿ ಹೇಳಿಕೆ ನೀಡಿದ್ದರು. ಆದರೆ, ಈಗ ರಾತ್ರೋರಾತ್ರಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ₹993ರಷ್ಟು ಹೆಚ್ಚಿಸಿದ್ದಾರೆ. ಈ ಮೂಲಕ ಜನರಿಗೆ ಆಘಾತ ನೀಡಿದ್ದಾರೆ. ಹೀಗಿದ್ದರೂ ಜನ ಅವರನ್ನು ಬೆಂಬಲಿಸುತ್ತಿರು ವುದು ಅಚ್ಚರಿ ತಂದಿದೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ಸಾಮಾನ್ಯ ಜನರ ಕಷ್ಟಗಳ ಬಗ್ಗೆ ಆಡಳಿತ ಪಕ್ಷಕ್ಕಿರುವ ಕಾಳಜಿ ಚುನಾವಣಾ ಗಿಮಿಕ್‌ಗಳಿಗೆ ಸೀಮಿತವಾಗಿದೆ. ಚುನಾವಣೆ ಮುಗಿದ ತಕ್ಷಣ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಲು ಮೋದಿ ಸರ್ಕಾರ ಸಮಯ ವ್ಯರ್ಥ ಮಾಡಲಿಲ್ಲ
> **ಕೆ.ಸಿ. ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿತಕ್ಕೆ ಸರ್ಕಾರದ ನಿರ್ಲಕ್ಷ್ಯ ಕಾರಣವೇ?
ಹೌದು / ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದವರಿಗೂ. 20,000 / 25,000 ಕೊರಿಯರ್, 7090177446

Domestic Helpers / Housekeeping

ಆಫೀಸ್ ನಲ್ಲಿ ಹೌಸ್ ಕೀಪಿಂಗ್ ಕೆಲಸ ಖಾಲಿ ಇದೆ. ವೇತನ ತಿಂಗಳಿಗೆ 10,000/- ರೂ. ಶೇಷಾದ್ರಿಪುರಂ ಬೆಂಗಳೂರು. ಸಂಪರ್ಕಿಸಿ: 9036316959.

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಪ್ರವಾಸ

Travel Agencies

13 ದಿನಗಳ ಚಾರ್ ಧಾಮ್ ಪ್ರವಾಸ 26/5, 9 ದಿನ ನೇಪಾಳ ಪ್ರವಾಸ 21/5, 9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5, 7 ದಿನ ಭೂತನ್ ಪ್ರವಾಸ 8/5, 4 ದಿನ ಕಾಶಿ ಪ್ರವಾಸ 4/6 ಸುವರ್ಣಯಾತ್ರಾ 6360146483/ 9008381022

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಸ್.ಎನ್. ಸಾವಿತ್ರಿ
ಎಸ್.ಎನ್.ಗೋಪಾಲರೆಡ್ಡಿರವರ ಧರ್ಮಪತ್ನಿ, ಸುದ್ದಗುಂಟೆಪಾಳ್ಯ, ಬೆಂಗಳೂರು.
ಜನನ: 13.03.1957 ನಿಧನ: 02.05.2020
ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳು, ನಿಮ್ಮ ಅಗಲಿಕೆಯಿಂದ ನಿಮ್ಮ ಪ್ರೀತಿ, ವಾತ್ಸಲ್ಯ, ಆರೈಕೆಗಳು ನಮಗೆ ಇಂದು ನೆನಪು ಮಾತ್ರ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಪ್ರತಿ ನಿತ್ಯವೂ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,
ದುಃಖತಪ್ತರು: ಪತಿ, ಮಕ್ಕಳು, ಕುಟುಂಬದವರು ಹಾಗೂ ಬಂಧು–ಮಿತ್ರರು

ಭಾವಪೂರ್ಣ ಶ್ರದ್ಧಾಂಜಲಿ
ಶ್ರೀಮತಿ. ಯಶೋಧಮ್ಮ
ಬೆಜ್ಜಹಳ್ಳಿ ಆರ್. ಚಂದ್ರಯ್ಯ ನವರ ಧರ್ಮ ಪತ್ನಿ
ಇವರು ದಿನಾಂಕ: 24.04.2026 ರಂದು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾವು ಪ್ರಾರ್ಥಿಸುತ್ತೇವೆ.
ವೈಕುಂಠ ಸಮಾರಾಧನೆಯನ್ನು ದಿನಾಂಕ: 03.05.2026 ರಂದು ಆಯೋಜಿಸಲಾಗಿದೆ.
ಸ್ಥಳ: 330, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ, ಬೆಂಗಳೂರು–560079. (ಕಾರ್ನರ್ ಹೌಸ್ ಐಸ್ ಕ್ರೀಮ್ ಪಾರ್ಲರ್ ಹತ್ತಿರ)
ಇಂತಿ ದುಃಖತಪ್ತರು: ಕುಟುಂಬದವರು

ಮೋನಿಷಾ, ವಿನಯ್ ರಾಜ್‌ಕುಮಾರ್

ಮೇ 6ಕ್ಕೆ ಸಿಟಿ ಲೈಟ್ಸ್ ಹಾಡು

‘ದುನಿಯಾ’ ವಿಜಯ್ ನಿರ್ದೇಶಿಸಿರುವ, ವಿನಯ್ ರಾಜ್‌ಕುಮಾರ್ ನಟನೆಯ ‘ಸಿಟಿ ಲೈಟ್ಸ್’ ಚಿತ್ರದ ಹೊಸ ಹಾಡು ‘ಬವ ಬವ’ ಮೇ 6ರಂದು ಬಿಡುಗಡೆಯಾಗಲಿದೆ.

ಈ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ವಿಜಯ್ ಮಾಹಿತಿ ನೀಡಿದ್ದಾರೆ. ‘ಸಲಗ’, ‘ಭೀಮ’ ಮೂಲಕ ನಿರ್ದೇಶಕರಾಗಿ ಯಶಸ್ಸು ಕಂಡಿರುವ ವಿಜಯ್ ಅವರ ನಿರ್ದೇಶನದ ಮೂರನೇ ಸಿನಿಮಾ ಇದಾಗಿದೆ. ಈ ಚಿತ್ರದ ಮೂಲಕ ತಮ್ಮ ಕಿರಿಯ ಪುತ್ರಿ ಮೋನಿಷಾ ವಿಜಯ್‌ಕುಮಾರ್ ಅವರನ್ನು ಚಿತ್ರರಂಗಕ್ಕೆ ವಿಜಯ್ ಪರಿಚಯಿಸುತ್ತಿದ್ದಾರೆ. ಅವರ ಹಿರಿಯ ಪುತ್ರಿ ರಿತನ್ಯಾ ‘ಲ್ಯಾಂಡ್ ಲಾರ್ಡ್’ ಸಿನಿಮಾ ಮೂಲಕ ಈಗಾಗಲೇ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಾಗಿದೆ. ‘ಸಿಟಿ ಲೈಟ್ಸ್’ನಲ್ಲಿ ವಿನಯ್‌ಗೆ ಜೋಡಿಯಾಗಿ ಮೋನಿಷಾ ನಟಿಸಿದ್ದಾರೆ.

ದುನಿಯಾ ವಿಜಯ್

‘ಒಂದು ಹೊಸ ವಿಷಯವನ್ನು ಈ ಸಿನಿಮಾ ಮೂಲಕ ಹೇಳಲು ಹೊರಟಿದ್ದೇನೆ. ರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದ ನನಗೆ ಇಂದು ಅವರ ಮೊಮ್ಮಗನಿಗೆ ಸಿನಿಮಾ ಮಾಡುವ ಅವಕಾಶ ಸಿಕ್ಕಿದೆ’ ಎಂದಿದ್ದರು ವಿಜಯ್.

ಚಿತ್ರಕ್ಕೆ ‘ಜವಾಬ್ ದಾರಿ...ದೀಪಗಳು’ ಎಂಬ ಅಡಿಬರಹವಿದೆ. ಹಳ್ಳಿಯಿಂದ ಬೆಂಗಳೂರಿಗೆ ಬಂದ ಇಬ್ಬರು ಏನೆಲ್ಲ ಕಷ್ಟಗಳನ್ನು ಎದುರಿಸುತ್ತಾರೆ ಎನ್ನುವ ಕಥೆ ಚಿತ್ರದಲ್ಲಿದೆ. ಚಿತ್ರಕ್ಕೆ ಶಿವಸೇನಾ ಮತ್ತು ಹರ್ಷಗೌಡ ಛಾಯಾಚಿತ್ರಗ್ರಹಣ, ದೀಪು ಎಸ್.ಕುಮಾರ್ ಸಂಕಲನ, ಮಾಸ್ತಿ ಅವರ ಸಂಭಾಷಣೆ ಮತ್ತು ಚರಣ್ ರಾಜ್ ಸಂಗೀತವಿದೆ. ಕಾಕ್ರೋಚ್ ಸುಧಿ ಕೂಡಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಪಡೆದಿದೆ.

ಮುಂದಿನ ವರ್ಷ KD-2

ಧ್ರುವ ಸರ್ಜಾ ನಟಿಸಿ, ಪ್ರೇಮ್ ನಿರ್ದೇಶಿಸಿರುವ ‘KD’ ಚಿತ್ರ ಬಿಡುಗಡೆಗೊಂಡು ಉತ್ತಮ ಪ್ರದರ್ಶನ ಕಾಣುತ್ತಿದೆ. ಚಿತ್ರದಲ್ಲಿಯೇ ‘KD-2’ ಬರಲಿದೆ ಎಂದು ಚಿತ್ರತಂಡ ಘೋಷಿಸಿತ್ತು. ಇದೀಗ ನಿರ್ದೇಶಕ ಪ್ರೇಮ್ ಆ ಬಗ್ಗೆ ಸ್ಪಷ್ಟನೆ ನೀಡಿದ್ದು, ಮುಂದಿನ ವರ್ಷ ‘KD-2’ ತೆರೆಗೆ ಬರುವುದು ಖಚಿತ ಎಂದಿದ್ದಾರೆ.

ನಾನು ಈ ಹಿಂದಯೇ ಹೇಳಿದಂತೆ ‘KD-2’ ಚಿತ್ರ ಬರುವುದು ನೂರರಷ್ಟು ಖಚಿತ. ಇದಕ್ಕೆ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್‌ನ ಸಹಕಾರವೇ ಕಾರಣ. ‘KD’ ಮೊದಲು ಬೇರೆ ಭಾಷೆಗಳಲ್ಲಿ ಬಿಡುಗಡೆ ಆಗಲಿ. ಆಮೇಲೆ ‘KD-2’ ಈಗಾಗಲೇ ಚಿತ್ರೀಕರಣಗೊಂಡಿದೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳುತ್ತೇನೆ. ನಾವು ಸುಮ್ಮನೆ ಉತ್ಪ್ರೇಕ್ಷೆಗೆ ಹೇಳಿದರೆ ಪ್ರೇಕ್ಷಕರ ಕುತೂಹಲ ಜಾಸ್ತಿ ಆಗುತ್ತದೆ’ ಎಂದು ಜೋಗಿ ಪ್ರೇಮ್ ಹೇಳಿದ್ದಾರೆ.

‘KD’ ಚಿತ್ರದ ಕಥೆಯನ್ನು ನೋಡಿದರೆ, ಮುಂದುವರಿದ ಭಾಗದಲ್ಲಿ ಧ್ರುವ ಸರ್ಜಾ ಮತ್ತು ರಮೇಶ್ ಅರವಿಂದ್ ಹಾಗೂ ಶಿಲ್ಪಾ ಶೆಟ್ಟಿ ನಡುವೆ ಪ್ರಮುಖ ಕಥೆ ನಡೆಯಲಿದೆ ಎಂಬುದು ಗೊತ್ತಾಗುತ್ತದೆ. ಜತೆಗೆ ಚಿತ್ರದ ಕೊನೆಯಲ್ಲಿ ಸುದೀಪ್ ಕೂಡ ಕಾಣಿಸಿಕೊಳ್ಳುತ್ತಾರೆ. ಅವರದ್ದು ಅತಿಥಿ ಪಾತ್ರ ಎನ್ನಲಾಗಿತ್ತು. ಆದರೆ ‘KD-2’ನಲ್ಲಿ ಸುದೀಪ್ ಪಾತ್ರದ ಕುರಿತು ಪ್ರತಿಕ್ರಿಯಿಸಲು ಪ್ರೇಮ್ ನಿರಾಕರಿಸಿದ್ದಾರೆ.

ಧ್ರುವ ಸರ್ಜಾ ಶಿಲ್ಪಾ ಶೆಟ್ಟಿ

ನೆಟ್‌ಫ್ಲಿಕ್ಸ್‌ನಲ್ಲಿ ‘ಕರ್ತವ್ಯ’

ಸೈಫ್ ಅಲಿ ಖಾನ್

ಬಾಲಿವುಡ್ ನಟ ಸೈಫ್ ಅಲಿ ಖಾನ್ ಮುಖ್ಯಭೂಮಿಕೆಯಲ್ಲಿರುವ ನೆಟ್‌ಫ್ಲಿಕ್ಸ್ ಸಿನಿಮಾ ‘ಕರ್ತವ್ಯ’ ಮೇ 15ರಿಂದ ಸ್ಟ್ರೀಮ್ ಆಗಲಿದೆ. ಈ ಕುರಿತು ನಟ ಶಾರುಖ್ ಖಾನ್ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಪೊಲೀಸ್ ಅಧಿಕಾರಿ ಸುತ್ತ ನಡೆಯುವ ಕಥಾಹಂದರ ಸಿನಿಮಾದಲ್ಲಿದ್ದು, ಚಿತ್ರವನ್ನು ‘ಭಕ್ಷಕ್’ ಖ್ಯಾತಿಯ ಪುಲಕಿತ್ ನಿರ್ದೇಶಿಸಿದ್ದಾರೆ. ರೆಡ್ ಚಿಲ್ಲೀಸ್ ಎಂಟರ್‌ಟೇನ್‌ಮೆಂಟ್ಸ್‌ನಡಿ ಗೌರಿ ಖಾನ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ.

ರಸಿಕಾ ದುಗಾಲ್, ಸಂಜಯ್ ಮಿಶ್ರಾ, ಜಾಕಿರ್ ಹುಸೈನ್, ಮನಿಶಾ ಚೌಧರಿ, ಸೌರಭ್ ದ್ವಿವೇದಿ ತಾರಾಬಳಗದಲ್ಲಿದ್ದಾರೆ. ‘ಭಕ್ಷಕ್’ ಬಳಿಕ ನೆಟ್‌ಫ್ಲಿಕ್ಸ್‌ಗಾಗಿ ಪುಲಕಿತ್ ನಿರ್ದೇಶನ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಈ ಹಿಂದೆ ನೆಟ್‌ಫ್ಲಿಕ್ಸ್‌ನಲ್ಲೇ ತೆರೆಕಂಡ ‘ಜುವೆಲ್ ಥೀಫ್–ದಿ ಹೈಸ್ಟ್ ಬಿಗಿನ್ಸ್’ನಲ್ಲಿ ಸೈಫ್ ಕಾಣಿಸಿಕೊಂಡಿದ್ದರು. ಇದರ ಜೊತೆಗೆ ಪ್ರಿಯದರ್ಶನ್ ನಿರ್ದೇಶನದ ‘ಹೈವಾನ್’ನಲ್ಲಿ ಅಕ್ಷಯ್ ಕುಮಾರ್ ಜೊತೆಗೆ ಸೈಫ್ ಮತ್ತೊಮ್ಮೆ ತೆರೆಹಂಚಿಕೊಳ್ಳಲಿದ್ದಾರೆ.

ಕಾನ್ ಚಿತ್ರೋತ್ಸವದಲ್ಲಿ ಸೆಪ್ಟೆಂಬರ್ 21

ಪ್ರವೀಣ್ ಸಿಂಗ್, ಪ್ರಿಯಾಂಕಾ ಉಪೇಂದ್ರ

ಪ್ರಿಯಾಂಕಾ ಉಪೇಂದ್ರ ನಾಯಕಿಯಾಗಿ ನಟಿಸಿರುವ ‘ಸೆಪ್ಟೆಂಬರ್ 21’ ಚಿತ್ರ ಈ ವರ್ಷದ ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನ ಕಾಣಲಿದೆ. ಜತೆಗೆ ಈ ಚಿತ್ರದ ನಿರ್ದೇಶಕಿ ಕರೆನ್ ಕ್ಷಿತಿ ಸುವರ್ಣ 79ನೇ ಕಾನ್ ಚಿತ್ರೋತ್ಸವದ ‘ವರ್ಲ್ಡ್ ವುಮನ್ ಕಾನ್ ಅಜೆಂಡಾ 2026’ ಕಾರ್ಯಕ್ರಮದಲ್ಲಿ ಭಾಷಣ ಮಾಡಲಿದ್ದಾರೆ. ಕಾನ್ ವೇದಿಕೆಯಲ್ಲಿ ಈ ಗೌರವ ಪಡೆದ ಮೊದಲ ಕನ್ನಡತಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

ಹಿಂದಿ ಮತ್ತು ಕನ್ನಡದಲ್ಲಿ ಸಿದ್ಧವಾಗಿರುವ ‘ಸೆಪ್ಟೆಂಬರ್ 21’ ಚಿತ್ರವು ಮೇ 16ರಂದು ಸಂಜೆ 5.45ಕ್ಕೆ ಕಾನ್‌ನಲ್ಲಿ ಪ್ರೀಮಿಯರ್ ಆಗಲಿದೆ. ಮೇ 12 ಮತ್ತು 13ರಂದು ಕಾನ್ ನಗರದಲ್ಲಿ ‘ವರ್ಲ್ಡ್ ವುಮನ್ ಕಾನ್ ಅಜೆಂಡಾ 2026’ ಕಾರ್ಯಕ್ರಮ ನಡೆಯಲಿದೆ. ಅದರಲ್ಲಿ ಕರೆನ್ ಕ್ಷಿತಿ ಸುವರ್ಣ ಅವರು ಸಿನಿಮಾ, ಎಐ ಹಾಗೂ ಸಾಮಾಜಿಕ ಕ್ರಿಯಾಶೀಲತೆ ಕುರಿತು ಮಾತನಾಡಲಿದ್ದಾರೆ. ಅವರ ಜತೆ ಫೋರ್ಬ್ಸ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಮೋಯಿರಾ ಫೋರ್ಬ್ಸ್ ಹಾಗೂ ಇನ್ನಿತರ ಗಣ್ಯರು ವೇದಿಕೆ ಹಂಚಿಕೊಳ್ಳಲಿದ್ದಾರೆ.

ಕರೆನ್ ಕ್ಷಿತಿ

ದಕ್ಷಿಣ ಕನ್ನಡ ಮೂಲದ ಕರೆನ್ ಕ್ಷಿತಿ ಸುವರ್ಣ ಅವರಿಗೆ ಮೊದಲ ಸಿನಿಮಾವಿದು. ‘ಜಗತ್ತಿನ ಯಶಸ್ವಿ ಮಹಿಳೆಯರ ಜತೆ ಈ ವೇದಿಕೆ ಹಂಚಿಕೊಳ್ಳಲು ತುಂಬ ಸಂತಸವಾಗುತ್ತಿದೆ. ಇಲ್ಲಿ ಕನ್ನಡ ಚಿತ್ರರಂಗದ ಕುರಿತೂ ಮಾತನಾಡುವ ಆಸೆಯಿದೆ. ನಾನು ಮುಂಬೈನಲ್ಲಿ ಚಿತ್ರ ನಿರ್ದೇಶನದಲ್ಲಿ ಪದವಿ ಪಡೆದು, ಸದ್ಯ ಇಲ್ಲಿಯೇ ವಾಸವಾಗಿದ್ದೇನೆ’ ಎಂದು ಕ್ಷಿತಿ ಸಂತಸ ಹಂಚಿಕೊಂಡರು.

ಆಲ್ಝೈಮರ್ ಕಾಯಿಲೆಗೆ ತುತ್ತಾದ ರೋಗಿಗಳ ಕುರಿತಾದ ಕಥೆ ಹೊಂದಿರುವ ಚಿತ್ರ ಮೇ ತಿಂಗಳ ಅಂತ್ಯಕ್ಕೆ ತೆರೆಗೆ ಬರಲಿದೆ. ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಮಧ್ಯಮ ವರ್ಗದ ಮಹಿಳೆಯ ಪಾತ್ರ ಮಾಡಿದ್ದಾರೆ.

‘ಆಲ್ಝೈಮರ್ ಕಾಯಿಲೆಗೆ ತುತ್ತಾದ ರೋಗಿಗಳನ್ನು ಪಾಲನೆ ಮಾಡುವ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ವೃತ್ತಿ ಜೀವನದಲ್ಲಿ ಬಹಳ ತೃಪ್ತಿ ನೀಡಿದ ಪಾತ್ರವಿದು. ಅತ್ಯಂತ ಸವಾಲಿನ ಪಾತ್ರ ಕೂಡ ಆಗಿತ್ತು. ಅದನ್ನು ಅಷ್ಟೇ ಸೊಗಸಾಗಿ ಯುವ ನಿರ್ದೇಶಕಿ ಕಟ್ಟಿಕೊಟ್ಟಿದ್ದಾರೆ. ಗೋವಾ ಚಿತ್ರೋತ್ಸವದಲ್ಲಿಯೂ ನಮ್ಮ ಸಿನಿಮಾ ಪ್ರದರ್ಶನಗೊಂಡಿತ್ತು’ ಎಂದು ಪ್ರಿಯಾಂಕಾ ಉಪೇಂದ್ರ ತಿಳಿಸಿದ್ದಾರೆ.

ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯ, ಝರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ, ಸಚಿನ್ ಪಾಟೇಕರ್ ನಟಿಸಿದ್ದಾರೆ. ರಾಜಶೇಖರ್ ಕಥೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ಮತ ಎಣಿಕೆ ಕೇಂದ್ರಕ್ಕೆ ಹೆಚ್ಚಿದ ಬಿಗಿ ಭದ್ರತೆ

ಸ್ಟ್ರಾಂಗ್ ರೂಂ ಪ್ರದೇಶಕ್ಕೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭೇಟಿ, ಪರಿಶೀಲನೆ

ಕೋಲ್ಕತ್ತ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ದುರ್ಬಳಕೆಯ ಯತ್ನದ ಬಗ್ಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ ಬಳಿಕ ಮತ ಎಣಿಕೆ ಕೇಂದ್ರಗಳ ಸುತ್ತ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ.

ಮಮತಾ ಬ್ಯಾನರ್ಜಿ ಅವರು ಭವಾನಿಪುರ ಕ್ಷೇತ್ರದ ಸಖಾವತ್ ಮೆಮೋರಿಯಲ್ ಸರ್ಕಾರಿ ಬಾಲಕಿಯರ ಶಾಲೆಯಲ್ಲಿನ ಮತ ಎಣಿಕೆ ಕೇಂದ್ರಕ್ಕೆ ಖುದ್ದಾಗಿ ಗುರುವಾರ ರಾತ್ರಿ ತೆರಳಿದ್ದರು. ಸುಮಾರು ನಾಲ್ಕು ಗಂಟೆ ಮತ ಎಣಿಕೆ ಕೇಂದ್ರದಲ್ಲಿದ್ದುಕೊಂಡು ಪರಿಶೀಲನೆ ನಡೆಸಿದ್ದರು. ನಂತರ, ಮಧ್ಯರಾತ್ರಿ 12 ಗಂಟೆಯ ಸುಮಾರಿಗೆ ಅಲ್ಲಿಂದ ನಿರ್ಗಮಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮಮತಾ ಬ್ಯಾನರ್ಜಿ, ‘ಅಭ್ಯರ್ಥಿ ಅಥವಾ ಒಬ್ಬ ಏಜೆಂಟ್ ಮಾತ್ರ ಭದ್ರತಾ ಕೊಠಡಿಯ (ಸ್ಟ್ರಾಂಗ್ ರೂಮ್) ಸಮೀಪ ಬರಬಹುದು. ಮೊದಲಿಗೆ ಕೇಂದ್ರೀಯ ಪಡೆಗಳು ನನಗೆ ಅನುಮತಿ ನೀಡಿರಲಿಲ್ಲ’ ಎಂದು ತಿಳಿಸಿದರು.

‘ಪಾರದರ್ಶಕತೆ ಕಾಪಾಡುವುದು ಅಗತ್ಯ. ಜನರ ಮತವನ್ನು ರಕ್ಷಣೆ ಮಾಡಬೇಕು. ದೂರುಗಳನ್ನು ಸ್ವೀಕರಿಸಿದ ಬಳಿಕ ಇಲ್ಲಿ ಧಾವಿಸಿದ್ದೆ. ಇವಿಎಂ ದುರ್ಬಳಕೆ ಸಂಚು ರೂಪಿಸಿದ್ದರೆ, ಅದನ್ನು ಸಹಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು. ಭದ್ರತಾ ಸಿಬ್ಬಂದಿ ಈ ಪ್ರದೇಶದಲ್ಲಿ ನಿಗಾ ಇಟ್ಟಿರುವುದನ್ನು ಖಚಿತಪಡಿಸಿಕೊಂಡ ಬಳಿಕ ಅವರು ಸ್ಥಳದಿಂದ ನಿರ್ಗಮಿಸಿದರು.

ಇದಕ್ಕೂ ಮುನ್ನ ವಿಡಿಯೊ ಸಂದೇಶ ನೀಡಿದ್ದ ಬ್ಯಾನರ್ಜಿ ಅವರು, ‘ಸ್ಟ್ರಾಂಗ್ ರೂಮ್‌ಗಳಲ್ಲಿ 24 ತಾಸು ನಿಗಾ ವಹಿಸಿ’ ಎಂದು ಕಾರ್ಯಕರ್ತರು ಮತ್ತು ಏಜೆಂಟ್‌ಗಳಿಗೆ ಕರೆ ನೀಡಿದ್ದರು.

ಈ ಮಧ್ಯೆ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು, ‘ನಿರ್ಗಮಿತ ಮುಖ್ಯಮಂತ್ರಿ ಮತ್ತು ಟಿಎಂಸಿ ಅಭ್ಯರ್ಥಿ ಮಮತಾ ಬ್ಯಾನರ್ಜಿ ಅವರಿಗೆ ಯಾವುದೇ ರೀತಿಯ ಹೆಚ್ಚುವರಿ ಅನುಕೂಲ ಪಡೆಯಲು ಅವಕಾಶ ನೀಡುತ್ತಿಲ್ಲ ಎಂದು ಭವಾನಿಪುರ ಮತ್ತು ಪಶ್ಚಿಮ ಬಂಗಾಳ ಜನತೆಗೆ ಖಚಿತಪಡಿಸುತ್ತೇನೆ. ನಿಯಮಗಳ ಉಲ್ಲಂಘನೆಗೂ ಅವರಿಗೆ ಅವಕಾಶ ನೀಡುತ್ತಿಲ್ಲ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ. ಇದರೊಂದಿಗೆ ಮತ ಎಣಿಕೆ ಕೇಂದ್ರದ ಭದ್ರತಾ ಕೊಠಡಿಯ ಹೊರಗೆ ಮಮತಾ ಅವರು ನಿಂತಿರುವ ಫೋಟೊವನ್ನು ಹಂಚಿಕೊಂಡಿದ್ದಾರೆ.

ಇವಿಎಂ ಮೇಲೆ ನಿಗಾ: ಕೋಲ್ಕತ್ತ ಮತ್ತು ಇತರ ಜಿಲ್ಲೆಗಳ ಸ್ಟ್ರಾಂಗ್ ರೂಮ್‌ಗಳ ಮೇಲೆ ಭದ್ರತಾ ಪಡೆಗಳು ನಿಗಾ ಇಟ್ಟಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಮತ ಎಣಿಕೆ ಕೇಂದ್ರಕ್ಕೆ ಮಧ್ಯರಾತ್ರಿ ಭೇಟಿ ನೀಡಿದ್ದರು. (ಎಡಚಿತ್ರ) ಕೋಲ್ಕತ್ತದಲ್ಲಿ ಇವಿಎಂಗಳನ್ನು ಇಟ್ಟಿರುವ ಸಖಾವತ್ ಮೆಮೋರಿಯಲ್ ಸರ್ಕಾರಿ ಬಾಲಕಿಯರ ಶಾಲೆಗೆ ಭದ್ರತೆಯನ್ನು ಹೆಚ್ಚಿಸಲಾಗಿದೆ —ಪಿಟಿಐ ಚಿತ್ರ

15 ಮತಗಟ್ಟೆಗಳಲ್ಲಿ ಮರುಮತದಾನ

ದಕ್ಷಿಣ 24 ಪರಗಣ ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ಮೇ 2ರಂದು ಮರುಮತದಾನ ನಡೆಸಲು ಚುನಾವಣಾ ಆಯೋಗ ಶುಕ್ರವಾರ ಆದೇಶಿಸಿದೆ.

ಚುನಾವಣಾ ಅಕ್ರಮ ನಡೆದಿದೆ ಎಂಬ ವರದಿ ಬೆನ್ನಲ್ಲೇ ಆಯೋಗ ಈ ಕ್ರಮ ಕೈಗೊಂಡಿದೆ. ‘ಮಗರಹಾಟ್ ಪಶ್ಚಿಮ ಕ್ಷೇತ್ರದ 11 ಮತಗಟ್ಟೆಗಳಲ್ಲಿ ಮತ್ತು ಡೈಮಂಡ್ ಹಾರ್ಬರ್ ಕ್ಷೇತ್ರದ 4 ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಆದೇಶಿಸಲಾಗಿದೆ. ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದೆ’ ಎಂದು ಆಯೋಗ ತಿಳಿಸಿದೆ. ಈ ಮತಗಟ್ಟೆಗಳಲ್ಲಿ ಏಪ್ರಿಲ್ 29ರಂದು ಮತದಾನ ನಡೆದಿತ್ತು.

ಅಕ್ರಮಕ್ಕೆ ಅವಕಾಶ ಇಲ್ಲ: ಆಯೋಗ

‘ಮತ ಎಣಿಕೆ ಕೇಂದ್ರಗಳಲ್ಲಿ ಅಕ್ರಮಕ್ಕೆ ಅವಕಾಶವೇ ಇಲ್ಲ’ ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಅವರು ಹೇಳಿದರು.

‘ಸ್ಟ್ರಾಂಗ್ ರೂಮ್‌ಗಳಲ್ಲಿ 24 ತಾಸೂ ಸಿ.ಸಿ.ಟಿ.ವಿ ನಿಗಾ ವ್ಯವಸ್ಥೆ ಮಾಡಲಾಗಿದೆ. ಆದರೆ, ಈ ಬಗ್ಗೆ ಮಾಡುತ್ತಿರುವ ಆರೋಪಗಳು ನಿರಾಧಾರ’ ಎಂದರು.

ಹನಿಯೂರು ಚಂದ್ರೇಗೌಡ ಸೆರೆ

ಲೈಂಗಿಕ ದೌರ್ಜನ್ಯ: ಮೊಬೈಲ್‌ನಲ್ಲಿ ಫೋಟೊ, ವಿಡಿಯೊ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯನೆಂದು ಹೇಳಿಕೊಂಡಿರುವ ಹನಿಯೂರು ಚಂದ್ರೇಗೌಡ ಎಂಬುವವರನ್ನು ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ರಾಜರಾಜೇಶ್ವರಿ ನಗರ ಠಾಣೆಯ ಪೊಲೀಸರು ಗುರುವಾರ ರಾತ್ರಿ ಬಂಧಿಸಿದ್ದಾರೆ.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ವಿಡಿಯೊ ಹಾಗೂ ಫೋಟೊಗಳನ್ನು ಚಂದ್ರೇಗೌಡ ತೆಗೆದುಕೊಳ್ಳುತ್ತಿದ್ದರು. ಬಳಿಕ ಆ ಫೋಟೊ–ವಿಡಿಯೊಗಳನ್ನು ಇಟ್ಟುಕೊಂಡು ಪೀಡಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಯ ಮೊಬೈಲ್ ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಲಾಗಿದೆ. ಮೊಬೈಲ್‌ನಲ್ಲಿ 20ಕ್ಕೂ ಹೆಚ್ಚು ಮಹಿಳೆಯರ ಫೋಟೊಗಳು–ವಿಡಿಯೊ ಸಿಕ್ಕಿವೆ. ಕೆಲವು ಧಾರಾವಾಹಿಗಳಲ್ಲೂ ಚಂದ್ರೇಗೌಡ ನಟಿಸಿದ್ದರು. ಅಲ್ಲದೇ ಪತ್ರಕರ್ತ, ಉಪನ್ಯಾಸಕ, ಜಾನಪದ, ಬುಡಕಟ್ಟು ಸಂಶೋಧಕನಾಗಿ ಕೆಲಸ ಮಾಡುತ್ತಿದ್ದೇನೆ ಎಂಬುದಾಗಿ ಬಿಂಬಿಸಿಕೊಂಡಿದ್ದರು. ನಕಲಿ ಗುರುತಿನ ಚೀಟಿ ಮಾಡಿಕೊಂಡು ಹಲವರಿಗೆ ಬೆದರಿಕೆ ಹಾಕಿದ್ದರು ಎಂಬುದು ತನಿಖೆ ಯಿಂದ ಗೊತ್ತಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಚಂದ್ರೇಗೌಡ

ದೂರಿನಲ್ಲಿ ಏನಿದೆ?: ‘ಪತಿಯ ನಡುವೆ ವೈಮನಸ್ಸು ಉಂಟಾಗಿ ದೂರುದಾರೆ ಪ್ರತ್ಯೇಕವಾಗಿ ನೆಲಸಿದ್ದರು. ಮೇಕಪ್ ಆರ್ಟಿಸ್ಟ್ ಆಗಿ ಸಂತ್ರಸ್ತೆ ಕೆಲಸ ಮಾಡುತ್ತಿದ್ದರು. ಮದುವೆ ಸಮಾರಂಭ, ಚಿತ್ರೀಕರಣಕ್ಕೆ ಹೋಗಿ ಮೇಕಪ್ ಕೆಲಸ ಮಾಡುತ್ತಿದ್ದರು. 2021ರಲ್ಲಿ ಚಂದ್ರೇಗೌಡರ ಪರಿಚಯವಾಗಿತ್ತು. ಧಾರಾವಾಹಿಗಳಲ್ಲಿ ನಟಿಸಿದ್ದೇನೆ; ಶಾರದಾ ಲೇಔಟ್‌ನಲ್ಲಿ ನೆಲಸಿದ್ದೇನೆ ಎಂಬುದಾಗಿ ಆರೋಪಿಯು ಮಹಿಳೆಯನ್ನು ಪರಿಚಯಿಸಿ ಕೊಂಡಿದ್ದರು. ಮೊಬೈಲ್ ಸಂಖ್ಯೆ ಪಡೆದುಕೊಂಡು ಮೇಕಪ್ ಸಂಬಂಧಿಸಿದ ಕೆಲಸಗಳಿದ್ದರೆ ಕರೆ ಮಾಡುವುದಾಗಿ ಆರೋಪಿ ಹೇಳಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಪತ್ನಿಯಿಂದ ವಿಚ್ಛೇದನ ಪಡೆದುಕೊಂಡು ನಿಮ್ಮನ್ನೇ ಮದುವೆ ಆಗುತ್ತೇನೆಂದು ನಂಬಿಸಿ ದೂರುದಾರೆಯ ಜತೆಗೆ ಲೈಂಗಿಕ ಸಂಪರ್ಕ ನಡೆಸಿದ್ದರು. ಖಾಸಗಿ ಕ್ಷಣವನ್ನು ವಿಡಿಯೊ ಮಾಡಿಕೊಂಡಿದ್ದ ಆರೋಪಿ, ಆ ವಿಡಿಯೊ ಇಟ್ಟುಕೊಂಡು ಹೆದರಿಸುತ್ತಿದ್ದರು. ಹೇಳಿದಂತೆ ಕೇಳಬೇಕೆಂದು ಹೇಳಿ ಹಂತಹಂತವಾಗಿ ₹5 ಲಕ್ಷ ಪಡೆದುಕೊಂಡಿದ್ದಾರೆ’ ಎಂಬ ದೂರಿನ ಪ್ರತಿ ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಸಂತ್ರಸ್ತೆಯ ಆಧಾರ್ ಕಾರ್ಡ್ ಪಡೆದಿದ್ದ ಆರೋಪಿ, ಬಾಡಿಗೆ ಮನೆಯೊಂದಕ್ಕೆ ಕರಾರು ಪತ್ರವನ್ನೂ ಮಾಡಿಸಿದ್ದರು. ಅಲ್ಲದೇ ಸಂತ್ರಸ್ತೆಯ ಪುತ್ರಿಯ ಶೈಕ್ಷಣಿಕ ಸಂಬಂಧಿತ ದಾಖಲಾತಿಗಳನ್ನೂ ಬದಲಾಯಿಸಿ, ತಾನೇ ಮಹಿಳೆಯ ಪತಿ ಎಂಬುದಾಗಿ ಬಿಂಬಿಸಲು ಹೊರಟಿದ್ದರು. ಪೊಲೀಸ್ ಇಲಾಖೆಯ ನಕಲಿ ಗುರುತಿನ ಚೀಟಿ ಇಟ್ಟುಕೊಂಡು ಟೋಲ್‌ಗಳಲ್ಲಿ ತೋರಿಸುತ್ತಿದ್ದರು’ ಎಂದೂ ದೂರು ನೀಡಲಾಗಿದೆ.

ತಮಿಳುನಾಡಿನ ಮಧುರೈನಲ್ಲಿ ಶುಕ್ರವಾರ ನಡೆದ ‘ಚಿತ್ತಿರೈ’ ಮಹೋತ್ಸವದಲ್ಲಿ ವಿಷ್ಣುವಿನ ಮೂರ್ತಿಯನ್ನು ಭಕ್ತರ ಸಮೂಹ ಹೊತ್ತು ಸಾಗಿತು —ಪಿಟಿಐ ಚಿತ್ರ

ರಾಹುಲ್ ವಿರುದ್ಧದ ಅರ್ಜಿ ವಜಾ

ಪ್ರಯಾಗ್‌ರಾಜ್, ಉತ್ತರ ಪ್ರದೇಶ (ಪಿಟಿಐ): ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು 2025ರಲ್ಲಿ ನೀಡಿದ್ದ ವಿವಾದಸ್ಪದ ಹೇಳಿಕೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವಂತೆ ಕೋರಿ ದಾಖಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿದೆ.

ಬಲಪಂಥೀಯ ಸಂಘಟನೆಯಾದ ಹಿಂದೂಶಕ್ತಿ ಸ್ಥಳದ ಸಿಮ್ರಾನ್ ಗುಪ್ತಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಕ್ರಮ್ ಡಿ ಚೌಹಾಣ್ ಅವರು ಈ ಆದೇಶ ಹೊರಡಿಸಿದರು.

ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದ ಸಂಭಲ್‌ನ ನ್ಯಾಯಾಲಯದ ನಿರ್ಧಾರವನ್ನು ಪ್ರಶ್ನಿಸಿ ಗುಪ್ತಾ ಅವರು ಮೇಲ್ಮನವಿ ಸಲ್ಲಿಸಿದ್ದರು.

2025ರಲ್ಲಿ ನವದೆಹಲಿಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ್ದ ರಾಹುಲ್ ಗಾಂಧಿ, ‘ನಾವು ಈಗ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಜತೆಗೆ, ಭಾರತ ಸರ್ಕಾರದ ವಿರುದ್ಧವೇ ಹೋರಾಡುತ್ತಿದ್ದೇವೆ’ ಎಂದು ಹೇಳಿಕೆ ನೀಡಿದ್ದರು.

ರಾಹುಲ್ ಅವರ ಹೇಳಿಕೆಯು ಸಾರ್ವಜನಿಕರ ಭಾವನೆಗಳಿಗೆ ನೋವುಂಟು ಮಾಡಿದ್ದು, ದೇಶವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ನೀಡಿದ ದೇಶದ್ರೋಹ ಹೇಳಿಕೆಯಾಗಿದೆ ಎಂದು ಅರ್ಜಿದಾರರು ದೂರಿದ್ದರು.

ಅಮೀಬಾ ಸೋಂಕಿನ ಶಂಕೆ: ಮಹಿಳೆ ಸಾವು

ತಿರುವನಂತಪುರ: ‘ಮಿದುಳು ತಿನ್ನುವ ಅಮೀಬಾ’ (ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್) ಸೋಂಕಿಗೆ ತುತ್ತಾಗಿರುವ ಶಂಕೆ ಮೇರೆಗೆ ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆಯೊಬ್ಬರು (26) ಶುಕ್ರವಾರ ಮೃತಪಟ್ಟಿದ್ದಾರೆ.

ವೃತ್ತಿಯಲ್ಲಿ ಶುಶ್ರೂಷಕಿ ಆಗಿದ್ದ ಈ ಮಹಿಳೆ ಮಿದುಳು ತಿನ್ನುವ ಅಮೀಬಾ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಕಳೆದ ತಿಂಗಳು ಚಿಕಿತ್ಸೆಗಾಗಿ ಆಲಪ್ಪುಳ ಆಸ್ಪತ್ರೆಗೆ ದಾಖಲಾಗಿದ್ದರು. ಹೆಚ್ಚಿನ ಚಿಕಿತ್ಸೆಗೆ ತಿರುವನಂತಪುರದ ಆಸ್ಪತ್ರೆಗೆ ದಾಖಲಿಸಲಾಗಿತ್ತು .

ಖೇರಾಗೆ ನಿರೀಕ್ಷಣಾ ಜಾಮೀನು

ನವದೆಹಲಿ: ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಹಾಗೂ ಅವರ ಪತ್ನಿ ಹಲವು ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದು, ವಿದೇಶಗಳಲ್ಲಿ ಬಹಿಂಗಪಡಿಸದ ಆಸ್ತಿ ಹೊಂದಿದ್ದಾರೆ ಎನ್ನುವ ಆರೋಪದ ಮೇಲೆ ದಾಖಲಾಗಿರುವ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಪವನ್ ಖೇರಾ ಅವರಿಗೆ ಸುಪ್ರೀಂ ಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ, ಅತುಲ್. ಎಸ್. ಚಾಂದೂರ್‌ಕರ್ ನೇತೃತ್ವದ ನ್ಯಾಯಪೀಠ, ರಾಜಕೀಯ ದ್ವೇಷದ ವಿಚಾರಣೆಯಿಂದ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ಕ್ರಿಮಿನಲ್ ಪ್ರಕರಣವನ್ನು ವಸ್ತುನಿಷ್ಠತೆ ಹಾಗೂ ಜಾಗರೂಕತೆಯಿಂದ ನಡೆಸಬೇಕು’ ಎಂದು ತಿಳಿಸಿ ಜಾಮೀನು ಮಂಜೂರು ಮಾಡಿದೆ.

‘ಈ ಪ್ರಕರಣದಲ್ಲಿ ರಾಜಕೀಯ ಪ್ರೇರಿತ ಆರೋಪ–ಪ್ರತ್ಯಾರೋಪ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸುವುದನ್ನು ಬಹಿರಂಗ ಪಡಿಸುವ ಬದಲಾಗಿ ಆರೋಪಗಳ ಸತ್ಯಾಸತ್ಯತೆಯನ್ನು ವಿಚಾ ರಣೆ ವೇಳೆ ಕೂಡ ಪರೀಕ್ಷಿಸಬಹುದು. ವೈಯಕ್ತಿಕ ಸ್ವಾತಂತ್ರ್ಯ ಎಂಬುದು ಪಾಲಿಸಬೇಕಾದ ಮೂಲಭೂತ ಹಕ್ಕು ಆಗಿದೆ’ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ.

ತನಿಖೆಗೆ ಸಹಕರಿಸುವಂತೆ ಖೇರಾ ಅವರಿಗೆ ತಿಳಿಸಿದ ನ್ಯಾಯಾಲಯ, ಅಗತ್ಯಬಿದ್ದರೆ ಪೊಲೀಸ್ ಠಾಣೆಗೂ ತೆರಳಬೇಕು ಎಂದು ತಿಳಿಸಿದೆ. ಸಕ್ಷಮ ನ್ಯಾಯಾಲಯದ ಪೂರ್ವಾನುಮತಿಯಿಲ್ಲದೇ, ದೇಶ ಬಿಟ್ಟು ತೆರಳದಂತೆ ಕೋರ್ಟ್ ಸೂಚಿಸಿದೆ.

ಮೂರು ವರ್ಷದ ಕಂದನ ಅಪ್ಪಿಕೊಂಡೇ ಜೀವಬಿಟ್ಟ ತಾಯಿ

ದೋಣಿ ದುರಂತ: ಮೃತರ ಸಂಖ್ಯೆ 9ಕ್ಕೆ

ಜಬಲ್ಪುರ್ (ಪಿಟಿಐ): ಮಧ್ಯಪ್ರದೇಶದ ಜಬಲ್ಪುರ್ ಜಿಲ್ಲೆಯ ಬಾರ್ಗಿ ಜಲಾಶಯದಲ್ಲಿ ಪ್ರವಾಸಿಗರಿದ್ದ ದೋಣಿ ಮಗುಚಿದ ಪರಿಣಾಮ ಸಂಭವಿಸಿದ ದುರಂತದಲ್ಲಿ ಮೃತರ ಸಂಖ್ಯೆ ಒಂಬತ್ತಕ್ಕೆ ಏರಿಕೆಯಾಗಿದೆ. 28 ಮಂದಿಯನ್ನು ರಕ್ಷಣೆ ಮಾಡಲಾಗಿದೆ.

ನಾಪತ್ತೆಯಾಗಿರುವ ಆರು ಮಂದಿಗೆ ಶೋಧ ಕಾರ್ಯ ನಡೆಯುತ್ತಿದೆ.

‘ಗುರುವಾರ ನಾಲ್ವರ ಮೃತದೇಹ ಹೊರತೆಗೆಯಲಾಗಿತ್ತು. ಶುಕ್ರವಾರ ಬೆಳಿಗ್ಗೆ ಮತ್ತೆ ಐವರ ಮೃತದೇಹ ಪತ್ತೆಯಾಗಿವೆ’ ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ತಿಳಿಸಿದ್ದಾರೆ.

ಮಗುಚಿಬಿದ್ದಿದ್ದ ದೋಣಿಗೆ ರಂಧ್ರ ಕೊರೆದು ಕೆಲವರನ್ನು ರಕ್ಷಣೆ ಮಾಡಿದ್ದ ಸ್ಥಳೀಯ ಗ್ರಾಮಸ್ಥರೊಬ್ಬರ ಮನೆಗೆ ಮುಖ್ಯಮಂತ್ರಿ ಮೋಹನ್ ಯಾದವ್ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬಾರ್ಗಿ ಜಲಾಶಯದಲ್ಲಿ ಗುರುವಾರ ರಾತ್ರಿ ದಿಢೀರನೆ ಬಿರುಗಾಳಿ ಬೀಸಿದ್ದರಿಂದ ವಿಹಾರಕ್ಕೆ ತೆರಳಿದ್ದ ಪ್ರವಾಸೋದ್ಯಮ ಇಲಾಖೆಗೆ ಸೇರಿದ ದೋಣಿ ನೀರಿನ ಹೊಡೆತಕ್ಕೆ ಸಿಲುಕಿ ಮಗುಚಿಬಿದ್ದಿತ್ತು.

ತನಿಖೆಗೆ ಆದೇಶ: ‘ದೋಣಿ ಮಗುಚಿ ಬೀಳುತ್ತಿದ್ದಾಗ ಸಿಬ್ಬಂದಿ ಜೀವ ರಕ್ಷಕ ಕವಚಗಳನ್ನು ವಿತರಿಸಿದ್ದರು ಎಂದು ದುರಂತದಲ್ಲಿ ಬದುಕುಳಿದವರೊಬ್ಬರು ಆರೋಪಿಸಿದ್ದಾರೆ. ಈ ಕುರಿತು ತನಿಖೆ ನಡೆಸಲಾಗುವುದು‘ ಎಂದು ಸಚಿವ ಧರ್ಮೇಂದ್ರ ಭಾವ್ ಸಿಂಗ್ ಲೋಧಿ ಅವರು ತಿಳಿಸಿದ್ದಾರೆ.

ಕಂದನ ಅಪ್ಪಿಕೊಂಡೇ ಜೀವಬಿಟ್ಟ ತಾಯಿ: ದುರಂತದಲ್ಲಿ ಕರುಳುಹಿಂಡುವ ದೃಶ್ಯ ಕಂಡು ಬಂದಿದೆ. ಮೂರು ವರ್ಷದ ಕಂದನನ್ನು ಅಪ್ಪಿಕೊಂಡೇ ತಾಯಿಯೊಬ್ಬರು ಜೀವ ಬಿಟ್ಟಿದ್ದರು. ರಕ್ಷಣಾ ತಂಡ ಶುಕ್ರವಾರ ಮಗು ತಬ್ಬಿದ್ದ ಅಮ್ಮನ ಮೃತದೇಹವನ್ನು ಹೊರತೆಗೆಯಿತು.

40 ಮಂದಿ ಇದ್ದರು

‘ಮಕ್ಕಳು ಸೇರಿದಂತೆ ದೋಣಿಯಲ್ಲಿ ಸುಮಾರು 40 ಮಂದಿ ಇದ್ದರು. ಸ್ಥಳೀಯರು ಬಿರುಗಾಳಿ ಬಗ್ಗೆ ಮಾಹಿತಿ ಕೊಟ್ಟರೂ ಚಾಲಕ ವಾಪಸಾಗಲಿಲ್ಲ. ಜೀವ ರಕ್ಷಕ ಕವಚಗಳನ್ನೂ ನೀಡಿರಲಿಲ್ಲ. ದೋಣಿ ಮಗುಚಿ ಬೀಳುವಾಗ ನೀಡಿ ದರು’ ಎಂದು ದೆಹಲಿಯ ಸಂಗೀತಾ ಕೋರಿ ಎಂಬುವರು ಆರೋಪಿಸಿದ್ದಾರೆ.

ಸಾಮಾನ್ಯಕ್ಕಿಂತ ಹೆಚ್ಚಿನ ಬಿಸಿಗಾಳಿ

ನವದೆಹಲಿ (ಪಿಟಿಐ): ಪೂರ್ವ ಕರಾವಳಿ ರಾಜ್ಯಗಳು, ಹಿಮಾಲಯದ ತಪ್ಪಲು ಮತ್ತು ಗುಜರಾತ್, ಮಹಾರಾಷ್ಟ್ರದಲ್ಲಿ ಮೇ ತಿಂಗಳಿನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಬಿಸಿಗಾಳಿ ಇರಲಿದೆ ಎಂದು ಭಾರತಿಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ.

‘ದೇಶದ ಕೆಲವು ಭಾಗಗಳಲ್ಲಿ ಮೇ ತಿಂಗಳಲ್ಲಿ ಕನಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ ಹೆಚ್ಚಿರಲಿದೆ’ ಎಂದು ಅದು ಹೇಳಿದೆ.

‘ವಾಯವ್ಯ ಭಾರತದ ಹಲವು ಪ್ರದೇಶಗಳು, ಕೇಂದ್ರ ಭಾರತದ ಕೆಲವು ಭಾಗಗಳು ಹಾಗೂ ಈಶಾನ್ಯ ಭಾರತದ ದಕ್ಷಿಣ ಭಾಗದಲ್ಲಿ ಕನಿಷ್ಠ ಉಷ್ಣಾಂಶವು ಸಾಮಾನ್ಯಕ್ಕಿಂತ ಕಡಿಮೆ ಇರಲಿದೆ’ ಎಂದು ಹೇಳಿದೆ. ಇದೇ ಸಂದರ್ಭದಲ್ಲಿ ‘ಭಾರತದಾದ್ಯಂತ ಮೇ ತಿಂಗಳಿನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ಇರುವ ಸಾಧ್ಯತೆ ಇದೆ’ ಎಂದೂ ಮುನ್ಸೂಚನೆ ನೀಡಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ನೈಋತ್ಯ ಮುಂಗಾರು ಮಳೆಯು ಮೇ 14 ಅಥವಾ 16ರ ಸುಮಾರಿಗೆ ಆರಂಭವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಎನ್‌ಸಿಬಿ ಕಾರ್ಯಾಚರಣೆ: ಇತ್ತೀಚಿನ ಅತಿ ದೊಡ್ಡ ದಾಳಿ; ಕೇಂದ್ರ ಗೃಹ ಸಚಿವ ಅಭಿನಂದನೆ

₹1,745 ಕೋಟಿ ಮೊತ್ತದ ಕೊಕೇನ್ ವಶ

ಪ್ರಜಾವಾಣಿ ವಾರ್ತೆ

ಮುಂಬೈ: ಕ್ರಿಕೆಟ್ ಪ್ಯಾಡ್‌ಗಳು ಮತ್ತು ಕೈಗವಸುಗಳ ಒಳಗೆ ಬಚ್ಚಿಟ್ಟು, ವೇರ್‌ಹೌಸ್ ಮತ್ತು ಲಾಜಿಸ್ಟಿಕ್ ಹಬ್‌ಗಳನ್ನು ಬಳಸಿಕೊಂಡು ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿದ್ದ ಮಾದಕವಸ್ತು ಕಳ್ಳಸಾಗಾಣಿಕೆ– ವಿತರಣೆ ಜಾಲವನ್ನು ಭೇದಿಸಿರುವ ಮಾದಕವಸ್ತು ನಿಯಂತ್ರಣ ಬ್ಯೂರೊ(ಎನ್‌ಸಿಬಿ) ಅಧಿಕಾರಿಗಳು, ಶುಕ್ರವಾರ ಸುಮಾರು ₹1,745 ಕೋಟಿ ಮೊತ್ತದ 349 ಕೆ.ಜಿಯಷ್ಟು ಕೊಕೇನ್ ಅನ್ನು ಮುಂಬೈನಲ್ಲಿ ವಶಕ್ಕೆ ಪಡೆದಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಎನ್‌ಸಿಬಿ ನಡೆಸಿರುವ ಅತಿ ದೊಡ್ಡ ದಾಳಿ ಇದಾಗಿದೆ. ಭಾರತದಲ್ಲಿ ವಾರ್ಷಿಕ ಸರಾಸರಿ 200ರಿಂದ 300 ಕೆ.ಜಿಯಷ್ಟು ಕೊಕೇನ್ ವಶಪಡಿಸಿಕೊಳ್ಳಲಾಗುತ್ತದೆ.

ಆದರೆ, ಈಗ ಎನ್‌ಸಿಬಿ ಬಲೆಗೆ ಬಿದ್ದಿರುವ ಕೊಕೇನ್ ಪ್ರಮಾಣ ಇದನ್ನು ಮೀರಿಸಿದೆ.

‘ಆಪರೇಷನ್ ವೈಟ್ ಸ್ಟ್ರೈಕ್’ ಹೆಸರಿನಲ್ಲಿ ಎನ್‌ಸಿಬಿ ನಡೆಸಿದ ಈ ಕಾರ್ಯಾಚರಣೆಗೆ ಆರು ತಿಂಗಳಿಂದ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ನವಿ ಮುಂಬೈ, ಥಾಣೆ, ಕಲಾಂಬೋಲಿ –ಭಿವಂಡಿ ವ್ಯಾಪ್ತಿಯಲ್ಲಿ ಕೆಲವು ವೇರ್‌ಹೌಸ್ ಮತ್ತು ಲಾಜಿಸ್ಟಿಕ್ ಹಬ್‌ಗಳನ್ನು ಕಳ್ಳಸಾಗಾಣಿಕೆಗೆ ಸುರಕ್ಷಿತ ಮಾರ್ಗವನ್ನಾಗಿ ಬಳಸಿಕೊಳ್ಳಲಾಗಿತ್ತು.

ವಿದೇಶಗಳಿಂದ ಆಮದು ಮಾಡಿಕೊಳ್ಳುವ ಯಂತ್ರೋಪಕರಣಗಳ ಒಳಗೆ ಮಾದಕ ವಸ್ತುಗಳನ್ನು ಒಂಬತ್ತು ಪದರಗಳ ಪಾಲಿಥಿನ್ ಚೀಲದಲ್ಲಿ ಸುತ್ತಿ, ಈ ಚೀಲಕ್ಕೆ ಕಪ್ಪು ಜಿಡ್ಡಿನ ಪದಾರ್ಥದ ಲೇಪಿಸಿ, ಪರಿಶೀಲನೆ ವೇಳೆ ಪತ್ತೆಯಾಗದಂತೆ ಭಾರತಕ್ಕೆ ತರಲಾಗುತ್ತಿತ್ತು. ಲಾಜಿಸ್ಟಿಕ್ ಹಬ್ ಮತ್ತು ವೇರ್ ಹೌಸ್‌ನಿಂದ ಇದು ಕ್ರಿಕೆಟ್ ಪ್ಯಾಡ್, ಕೈಗವಸುಗಳಲ್ಲಿ ಬಚ್ಚಿಟ್ಟು ದೇಶದ ವಿವಿಧೆಡೆ ಪೂರೈಕೆ ಆಗುತ್ತಿತ್ತು.

ಈ ಅಂತರರಾಷ್ಟ್ರಿಯ ಜಾಲದ ಪ್ರಮುಖ ಸೂತ್ರಧಾರ, ನಿರ್ವಾಹಕರು, ಹಣಕಾಸುದಾರರು, ಬಳಕೆಗಾರರನ್ನು ಗುರಿಯಾಗಿಸಿ ಎನ್‌ಸಿಬಿ ತನಿಖೆ ಚುರುಕುಗೊಳಿಸಿದೆ. ಕುಖ್ಯಾತ ಮಾದಕವಸ್ತು ಕಳ್ಳ ಸಾಗಣೆದಾರ, ದಾವೂದ್ ಇಬ್ರಾಹಿಂನ ಸಹಚರ ಸಲೀಂ ಡೋಲಾನನ್ನು ದೇಶದಿಂದ ಗಡಿಪಾರು ಮಾಡಲಾದ ಕೆಲವು ದಿನಗಳ ಅಂತರದಲ್ಲೇ ಎನ್‌ಸಿಬಿ ಈ ದಾಳಿ ನಡೆಸಿದೆ.

‘ಅದ್ಭುತ ಕಾರ್ಯಾಚರಣೆ’: ಕಲಾಂಬೋಲಿ ಪ್ರದೇಶದ ವೇರ್‌ಹೌಸ್ ಮುಂದೆ ನಿಲ್ಲಿಸಲಾಗಿದ್ದ ಮಾರುತಿ ಸುಜುಕಿಯ ಕಾರೊಂದನ್ನು ಪರಿಶೀಲಿಸಿದಾಗ ಅದರಲ್ಲಿ ತಲಾ 1 ಕೆ.ಜಿ ತೂಕದ, 136 ಪ್ಯಾಕೆಟ್‌ನಷ್ಟು ಕೊಕೇನ್ ಕ್ರಿಕೆಟ್ ಪ್ಯಾಡ್ ಮತ್ತು ಕೈಗವಸುಗಳಲ್ಲಿ ಪತ್ತೆಯಾಗಿದೆ. ಈ ದಾಳಿಯ ಬೆನ್ನಲ್ಲೇ ಭಿವಂಡಿ ಬಳಿಯ ವೇರ್‌ಹೌಸ್‌ನಲ್ಲಿ ನಡೆಸಿದ ಇನ್ನೊಂದು ದಾಳಿಯಲ್ಲಿ 213 ಕೆ.ಜಿಯಷ್ಟು ಕೊಕೇನ್ ಪತ್ತೆಯಾಗಿದೆ. ’ಅದ್ಭುತ ಕಾರ್ಯಾಚರಣೆ ನಡೆಸಿದ ಎನ್‌ಸಿಬಿಗೆ ಅಭಿನಂದನೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಹುಲ್– ಪಥುಮ್ ಜೊತೆಯಾಟ

ಮಿಚೆಲ್ ಸ್ಟಾರ್ಕ್‌ಗೆ ಮೂರು ವಿಕೆಟ್
• ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್ ಗೆಲುವು

ಜೈಪುರ (ಪಿಟಿಐ): ಆರಂಭಿಕರಾದ ಪಥುಮ್ ನಿಸಾಂಕ ಹಾಗೂ ಕೆ.ಎಲ್. ರಾಹುಲ್ ಅವರ ಶತಕದ ಜೊತೆಯಾಟದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 7 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಲಿಸಿತು.

ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ 50 ಎಸೆತಗಳಲ್ಲಿ 90 ರನ್ ಗಳಿಸಿದ ನಾಯಕ ರಿಯಾನ್ ಪರಾಗ್ ಆಟದಿಂದ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 6ಕ್ಕೆ225 ರನ್‌ಗಳನ್ನು ಪೇರಿಸಿತು.

ದೊಡ್ಡ ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಪಥುಮ್ (62; 33ಎ, 4x3, 6x3) ಹಾಗೂ ರಾಹುಲ್ (75; 40ಎ, 4x3, 6x5) ಅಮೋಘ ಆರಂಭ ಒದಗಿಸಿದರು. ಕಳೆದ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ 1 ರನ್‌ಗೆ ಔಟಾಗಿದ್ದ ರಾಹುಲ್ ಮತ್ತೆ ಲಯಕ್ಕೆ ಮರಳಿದರು. ಈ ಜೋಡಿ, ಮೊದಲ ವಿಕೆಟ್‌ಗೆ 9.3 ಓವರ್‌ಗಳಲ್ಲಿ 110 ರನ್ ಸೇರಿಸಿತು. ಪಥುಮ್ ಅವರನ್ನು ರವೀಂದ್ರ ಜಡೇಜ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ನಿತೀಶ್ ರಾಣಾ 33 ರನ್ (17 ಎ) ಸಿಡಿಸಿದರು. ಕೊನೆಯಲ್ಲಿ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 18; 11ಎ) ಹಾಗೂ ಆಶುತೋಷ್ ಶರ್ಮಾ (ಔಟಾಗದೇ 25; 15ಎ) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು. ಇನ್ನೂ 5 ಎಸೆತ ಬಾಕಿ ಉಳಿದಿರುವಂತೆ ತಂಡವನ್ನು ಗೆಲುವಿನ ದಡ ತಲುಪಿಸಿದರು. ರಾಯಲ್ಸ್ ಬ್ಯಾಟರ್‌ಗಳು ದೊಡ್ಡ ಮೊತ್ತ ಗಳಿಸಿದ್ದಾಗಿಯೂ ಅದನ್ನು ರಕ್ಷಿಸಿಕೊಳ್ಳಲು ಬೌಲಿಂಗ್ ಪಡೆ ವಿಫಲವಾಯಿತು.

ಇದಕ್ಕೆ ಮೊದಲು, ಪರಾಗ್ ಅವರು ತಮ್ಮ ಸುತ್ತ ಆವರಿಸಿರುವ ವಿವಾದದ 'ಹೊಗೆ'ಯನ್ನು ಸುಂದರ ಬ್ಯಾಟಿಂಗ್ ಮೂಲಕ ಹೊಡೆದೋಡಿಸಿದರು. ಅವರು ನಾಲ್ಕು ದಿನಗಳ ಹಿಂದೆ ನಡೆದಿದ್ದ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದ ವೇಳೆ ಡ್ರೆಸಿಂಗ್ ರೂಮ್‌ನಲ್ಲಿ 'ಇ-ಸಿಗರೇಟ್' ಸೇದಿದ ವಿವಾದಕ್ಕೆ ಸಿಲುಕಿದ್ದರು. ಟೂರ್ನಿಯಲ್ಲಿ ಅವರು ಲಯದಲ್ಲಿಯೂ ಇರಲಿಲ್ಲ. ಆದ್ದರಿಂದ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಎಲ್ಲರ ಚಿತ್ತವೂ ಅವರ ಮೇಲೆ ಇತ್ತು.

ಟಾಸ್ ಗೆದ್ದ ಪರಾಗ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಅವರ ನಿರ್ಧಾರ ಆರಂಭದಲ್ಲಿಯೇ ಕೈಕೊಟ್ಟಿತು. ಟೂರ್ನಿಯಲ್ಲಿ ಮೊದಲ ಬಾರಿಗೆ ಕಣಕ್ಕಿಳಿದ ಡೆಲ್ಲಿ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಆರಂಭಿಕ ಓವರ್‌ನ ಮೂರನೇ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಅವರ ಕ್ಯಾಚ್ ತಾವೇ ಪಡೆದು ವಿಕೆಟ್ ಖಾತೆ ತೆರೆದರು.

15 ವರ್ಷದ ಬಾಲಪ್ರತಿಭೆ ವೈಭವ್ ಸೂರ್ಯವಂಶಿ ಅವರು ಕೈಲ್ ಜೇಮಿಸನ್ ಹಾಕಿದ ಎರಡನೇ ಓವರ್‌ನ ಐದನೇ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಜೇಮಿಸನ್ ಹಿರಿಹಿರಿ ಹಿಗ್ಗಿದರು.

ಆಗ, ಧ್ರುವ್ ಜುರೇಲ್ (42; 30ಎ) ಮತ್ತು ರಿಯಾನ್ ಜೋಡಿ ಮೂರನೇ ವಿಕೆಟ್‌ಗೆ 102 (59ಎ) ರನ್ ಸೇರಿಸಿದರು. ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ (20; 14ಎ) ಅವರು ರಿಯಾನ್ ಜೊತೆಗೂಡಿ 53 ರನ್ ಕಲೆಹಾಕಿದರು. ಜಡೇಜ ಅವರ ವಿಕೆಟ್ ಪಡೆದ ಸ್ಟಾರ್ಕ್ ಜೊತೆಯಾಟ ಮುರಿದರು. ಅದೇ ಓವರ್‌ನಲ್ಲಿ ಪರಾಗ್ ಅವರಿಗೂ ಸ್ಟಾರ್ಕ್ ಡಗ್‌ಔಟ್ ದಾರಿ ತೋರಿಸಿದರು.

ರಿಯಾನ್ ನಿರ್ಗಮನದ ಬಳಿಕ ಕ್ರೀಸ್‌ಗೆ ಬಂದ ಡೊನೊವಾನ್ ಫೆರೀರಾ (47; 14ಎ, 4x2, 6x6) ಬೀಸಾಟಕ್ಕೆ ಬೌಲರ್‌ಗಳು ಬೆಚ್ಚಿದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್‌.ರಾಹುಲ್ ಚಿತ್ರ: ಎಎಫ್‌ಪಿ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	8	6	1	1	13	1.043
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	9	6	3	0	12	0.832
ಆರ್ ಆರ್	10	6	4	0	12	0.510
ಜಿ ಟಿ	9	5	4	0	10	- 0.192
ಡಿ ಸಿ	9	4	5	0	8	- 0.895
ಸಿಎಸ್‌ಕೆ	8	3	5	0	6	- 0.121
ಕೆಕೆಆರ್	8	2	5	1	5	- 0.751
ಎಂ ಐ	8	2	6	0	4	- 0.784
ಎಲ್‌ಎಸ್‌ಜಿ	8	2	6	0	4	- 1.106

ಆರೆಂಜ್ ಕ್ಯಾಪ್: ಕೆ.ಎಲ್.ರಾಹುಲ್, ಡಿ ಸಿ (433 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 6ಕ್ಕೆ225 (20 ಓವರ್‌ಗಳಲ್ಲಿ)
ಯಶಸ್ವಿ ಸಿ ಮತ್ತು ಬಿ ಸ್ಟಾರ್ಕ್ 6(3ಎ, 6x1)
ವೈಭವ್ ಬಿ ಜೇಮಿಸನ್ 4 (2ಎ, 4x1)
ಧ್ರುವ್ ಸಿ ಸ್ಟಬ್ಸ್ ಬಿ ಪಟೇಲ್ 42 (30ಎ, 4x4, 6x1)
ಪರಾಗ್ ಸಿ ಪಟೇಲ್ ಬಿ ಸ್ಟಾರ್ಕ್ 90 (50ಎ, 4x8, 6x5)
ಜಡೇಜ ಸಿ ಆಶುತೋಷ್ ಬಿ ಸ್ಟಾರ್ಕ್ 20 (14ಎ, 4x1, 6x1)
ಡೊನೊವಾನ್ ಫೆರೀರಾ ಔಟಾಗದೇ 47 (14ಎ, 4x2, 6x6)
ಶುಭಂ ಸಿ ಶರ್ಮಾ ಬಿ ನಟರಾಜನ್ 6 (6ಎ, 4X1)
ಜೋಫ್ರಾ ಆರ್ಚರ್ ಔಟಾಗದೇ 1 (1ಎ)
ಇತರೆ: 9 (ಲೆಗ್‌ಬೈ 3, ವೈಡ್ 6)
ವಿಕೆಟ್ ಪತನ: 1–6 (ಯಶಸ್ವಿ ಜೈಸ್ವಾಲ್ 0.3), 2–12 (ವೈಭವ್ ಸೂರ್ಯವಂಶಿ; 1.5), 3–114 (ಧ್ರುವ್ ಜುರೇಲ್; 11.4), 4–167 (ರವೀಂದ್ರ ಜಡೇಜ; 16.2), 5–168 (ರಿಯಾನ್ ಪರಾಗ್; 16.4), 6–208 (ಶುಭಂ ದುಬೆ; 19.1)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–40–3, ಕೈಲ್ ಜೇಮಿಸನ್ 4–0–48–1, ಅಕ್ಷರ್ ಪಟೇಲ್ 4–0–39–1, ಕುಲದೀಪ್ ಯಾದವ್ 4–0–41–0, ಟಿ. ನಟರಾಜನ್ 4–0–54–1

ಡೆಲ್ಲಿ ಕ್ಯಾಪಿಟಲ್ಸ್: 3ಕ್ಕೆ226 (19.1 ಓವರ್‌ಗಳಲ್ಲಿ)
ಪಥುಮ್ ಎಲ್‌ಬಿಡಬ್ಲ್ಯು ಬಿ ಜಡೇಜ 62 (33ಎ, 4x3, 6x3)
ರಾಹುಲ್ ಸಿ ಫೆರೀರಾ ಬಿ ಆರ್ಚರ್ 75 (40ಎ, 4x3, 6x5)
ನಿತೀಶ್ ಸಿ ಜುರೇಲ್ ಬಿ ತುಷಾರ್ 33 (17ಎ, 4x3, 6x2)
ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 18 (11ಎ, 4x1, 6x1)
ಆಶುತೋಷ್ ಶರ್ಮಾ ಔಟಾಗದೇ 25 (15ಎ, 4x4)
ಇತರೆ: 13 (ಬೈ 4, ಲೆಗ್‌ಬೈ 1, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1–110 (ಪಥುಮ್ ನಿಸಾಂಕ; 9.3), 2–171 (ನಿತೀಶ್ ರಾಣಾ; 14.3), 3–177 (ಕೆ.ಎಲ್.ರಾಹುಲ್; 15.2)
ಬೌಲಿಂಗ್: ಜೋಫ್ರಾ ಆರ್ಚರ್ 4–0–46–1, ನಾಂಡ್ರೆ ಬರ್ಗರ್ 3–0–41–0, ತುಷಾರ್ ದೇಶಪಾಂಡೆ 4–0–38–1, ಬ್ರಿಜೇಶ್ ಶರ್ಮಾ 3.1–0–35–0, ರವಿ ಬಿಷ್ಣೋಯಿ 2–0–28–0, ರವೀಂದ್ರ ಜಡೇಜ 3–0–33–1
ಪಂದ್ಯದ ಆಟಗಾರ: ಕೆ.ಎಲ್.ರಾಹುಲ್

ಸೂಪರ್ ಕಿಂಗ್ಸ್–ಇಂಡಿಯನ್ಸ್ ಮುಖಾಮುಖಿ ಇಂದು
'ಚೆನ್ನೈ'ನಲ್ಲಿ 'ಮುಂಬೈ'ಗೆ ಪರೀಕ್ಷೆ

ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಋತುರಾಜ್ ಗಾಯಕವಾಡ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಧೋನಿ ಇದ್ದಾರೆ 'ಎಕ್ಸ್' ಚಿತ್ರ

ಚೆನ್ನೈ (ಪಿಟಿಐ): ಐಪಿಎಲ್ ಇತಿಹಾಸದಲ್ಲಿ ಐದು ಪ್ರಶಸ್ತಿಗಳನ್ನು ಗೆದ್ದಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಈ ಬಾರಿ ಅಸ್ಥಿರ ಪ್ರದರ್ಶನದಿಂದ ಪರದಾಡುತ್ತಿವೆ. ಇದರಿಂದಾಗಿ ಉಭಯ ತಂಡಗಳಿಗೂ ಪ್ಲೇ ಆಫ್ ಪ್ರವೇಶಿಸುವ ಹಾದಿಯು ಕಠಿಣವಾಗಿದೆ.

ಎರಡೂ ತಂಡಗಳು ಶನಿವಾರ ಚೆಪಾಕ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ. ಪ್ರಸ್ತುತ ಅಂಕಪಟ್ಟಿಯಲ್ಲಿ ಚೆನ್ನೈ ಆರನೇ ಹಾಗೂ ಮುಂಬೈ ಒಂಬತ್ತನೇ ಸ್ಥಾನದಲ್ಲಿವೆ.

ಋತುರಾಜ್ ಗಾಯಕವಾಡ ನಾಯಕತ್ವದ ಚೆನ್ನೈ ತಂಡದಲ್ಲಿ ಅನುಭವಿ ಆಟಗಾರ ಮಹೇಂದ್ರಸಿಂಗ್ ಧೋನಿ ಈ ಪಂದ್ಯದಲ್ಲಿಯೂ ಆಡುವುದು ಖಚಿತವಿಲ್ಲ. ಆಯುಷ್ ಮ್ಹಾತ್ರೆಯ ಅನುಪಸ್ಥಿತಿಯೂ ತಂಡದ ಹಿನ್ನಡೆಗೆ ಕಾರಣವಾಗಿದೆ. ಇದೇ ವರ್ಷ ಚೆನ್ನೈ ಸೇರಿಕೊಂಡಿರುವ ಸಂಜು ಸ್ಯಾಮ್ಸನ್ ಎರಡು ಶತಕ ಹೊಡೆದಿದ್ದಾರೆ. ಅದರಲ್ಲೊಂದು ಹೋದ ವಾರ ಮುಂಬೈ ತಂಡದ ಎದುರು ವಾಂಖೆಡೆ ಕ್ರೀಡಾಂಗಣದಲ್ಲಿ ದಾಖಲಿಸಿದ್ದರು.

ಆದರೆ ನಾಯಕ ಋತುರಾಜ್ ಅವರಿಗೆ ಲಯ ಕಂಡುಕೊಂಡಿಲ್ಲ. ಸರ್ಫರಾಜ್ ಖಾನ್, ಶಿವಂ ದುಬೆ ಅವರ ಆಲ್‌ರೌಂಡ್ ಆಟವೂ ಕಳೆಗಟ್ಟುತ್ತಿಲ್ಲ. ಇದ್ದುದರಲ್ಲಿ ಬೌಲರ್‌ಗಳು ತಕ್ಕಮಟ್ಟಿಗೆ ತಮ್ಮ ಸಾಮರ್ಥ್ಯ ಮೆರೆಯುತ್ತಿದ್ದಾರೆ. ವೇಗಿ ಅನ್ಶುಲ್ ಕಂಬೋಜ್, ಮ್ಯಾಟ್ ಹೆನ್ರಿ, ಅಕಿಲ್ ಹುಸೇನ್, ನೂರ್ ಅಹಮದ್ ಹಾಗೂ ಮುಕೇಶ್ ಚೌಧರಿ ಕೆಲವು ಪಂದ್ಯಗಳಲ್ಲಿ ಉತ್ತಮ ಬೌಲಿಂಗ್ ಮಾಡಿದ್ದಾರೆ. ಆದರೆ ಮುಂಬೈ ತಂಡದ ಬ್ಯಾಟಿಂಗ್ ಪಡೆಯು ಉತ್ತಮವಾಗಿದೆ. ಅವರನ್ನು ಕಟ್ಟಿಹಾಕುವ ಸವಾಲು ಚೆನ್ನೈ ಬೌಲರ್‌ಗಳ ಮುಂದಿದೆ.

ಮುಂಬೈನ ಕ್ವಿಂಟನ್ ಡಿ ಕಾಕ್, ರಿಯಾನ್ ರಿಕೆಲ್ಟನ್ ಮತ್ತು ತಿಲಕ್ ವರ್ಮಾ ಅವರು ತಲಾ ಒಂದು ಶತಕ ಹೊಡೆದಿರುವ ಬ್ಯಾಟರ್‌ಗಳು. ಕಳೆದ ಪಂದ್ಯದಲ್ಲಿ ರಿಕೆಲ್ಟನ್ ಹೊಡೆದ ಶತಕದಿಂದಾಗಿ ಮುಂಬೈ ತಂಡವು 243 ರನ್ ಗುರಿಯನ್ನು ಸನ್‌ರೈಸರ್ಸ್ ಹೈದರಾಬಾದ್‌ಗೆ ಒಡ್ಡಿತ್ತು. ಆದರೆ ಪಂದ್ಯ ಜಯಿಸಿಕೊಡುವಲ್ಲಿ ಬೌಲಿಂಗ್ ಪಡೆ ವಿಫಲವಾಯಿತು.

ಸ್ಟಾರ್ ಬೌಲರ್ ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ವಿಲ್ ಜ್ಯಾಕ್ಸ್ ಹಾಗೂ ಹಾರ್ದಿಕ್ ಪಾಂಡ್ಯ ಅವರ ದಾಳಿಯನ್ನು ಎದುರಾಳಿ ತಂಡವು ಮೆಟ್ಟಿ ನಿಂತಿತ್ತು. ಈ ಲೋಪವನ್ನು ಸರಿಪಡಿಸಿಕೊಳ್ಳದಿದ್ದರೆ ಮುಂಬೈಗೆ ಯಶಸ್ಸು ಒಲಿಯುವುದು ಕಷ್ಟ. ಈ ಪಂದ್ಯದಲ್ಲಿಯೂ ರೋಹಿತ್ ಶರ್ಮಾ ಅಡುವುದು ಖಚಿತ ವಾಗಿಲ್ಲ.

ಹಾರ್ದಿಕ್ ಪಾಂಡ್ಯ

ಇಂದಿನ ಪಂದ್ಯ
ಚೆನ್ನೈ ಸೂಪರ್ ಕಿಂಗ್ಸ್ V/s ಮುಂಬೈ ಇಂಡಿಯನ್ಸ್
ತಾಣ: ಚೆನ್ನೈ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ ಒಟ್ಟು ಪಂದ್ಯ 40
ಚೆನ್ನೈ ಗೆಲುವು 19
ಮುಂಬೈ ಜಯ 21

ರಾಯಲ್ಸ್ ಖರೀದಿಗೆ ಮಿತ್ತಲ್ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲ್ ಸೊಮಾನಿ ಸಮೂಹದ ಒಕ್ಕೂಟವು ರಾಜಸ್ಥಾನ ರಾಯಲ್ಸ್ ಫ್ರಾಂಚೈಸಿಯನ್ನು ₹15,290 ಕೋಟಿಗೆ ಖರೀದಿಸಿದ್ದಾಗಿ ಮಾರ್ಚ್‌ನಲ್ಲಿ ವರದಿಯಾಗಿತ್ತು. ಆದರೆ, ಒಕ್ಕೂಟದ ಸದಸ್ಯರೊಬ್ಬರು ಒಪ್ಪಂದದಿಂದ ಹಿಂದೆ ಸರಿದಿರುವುದಾಗಿ ಇದೀಗ ವರದಿಯಾಗಿದೆ.

ಮಿತ್ತಲ್ ಕುಟುಂಬದ ನೇತೃತ್ವದ ಅರ್ಸೆಲರ್ ಮಿತ್ತಲ್ ಸಿ.ಇ.ಒ ಆದಿತ್ಯ ಮಿತ್ತಲ್ ಅವರು ಒಕ್ಕೂಟಕ್ಕೆ ಸೇರುವ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಹೀಗಾಗಿ, ಸೊಮಾನಿ ಅವರು ಒಕ್ಕೂಟದ ಮುಖ್ಯಸ್ಥ ಸ್ಥಾನದಿಂದ ಹಿಂದೆ ಸರಿದು, ಪಾಲುದಾರರಾಗಿ ಮುಂದುವರಿಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಈ ಹಿಂದೆ, ಸೊಮಾನಿ ಸಮೂಹದ ಒಕ್ಕೂಟದಲ್ಲಿ ವಾಲ್‌ಮಾರ್ಟ್ ಬಳಗದ ರಾಬ್ ವಾಲ್ಟನ್ ಮತ್ತು ಫೋರ್ಡ್ ಮೋಟಾರ್ ಕಂಪೆನಿಯ ಹ್ಯಾಂಪ್ ಕುಟುಂಬ ಸಹಭಾಗಿತ್ವ ಹೊಂದಿರುವುದಾಗಿ ಹೇಳಲಾಗಿತ್ತು. ಫ್ರ್ಯಾಂಚೈಸಿ ಖರೀದಿಗೆ ಅಗತ್ಯವಿರುವ ಹಣ ತಮ್ಮಲ್ಲಿರುವುದಾಗಿ ರುಜುವಾತು ಮಾಡಲು ಒಕ್ಕೂಟವು ವಿಫಲವಾಗಿತ್ತು ಎಂದು ತಿಳಿದು ಬಂದಿದೆ.

ಲಕ್ಷ್ಯ, ಆಯುಷ್ ಮಿಂಚು; ಡಬಲ್ಸ್‌ನಲ್ಲಿ ಸಾತ್ವಿಕ್–ಚಿರಾಗ್ ಪಾರಮ್ಯ
ಥಾಮಸ್ ಕಪ್: ಸೆಮಿಗೆ ಭಾರತ

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಆಯುಷ್ ಶೆಟ್ಟಿ ಹಾಗೂ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಅವರ ಅಮೋಘ ಆಟದಿಂದಾಗಿ ಗೆಲುವು ಸಾಧ್ಯವಾಯಿತು. ಅವರ ಅಮೋಘ ಆಟದ ಬಲದಿಂದ ಭಾರತವು 3–0ಯಿಂದ ಚೀನಾ ತೈಪೆ ಎದುರು ಪಾರಮ್ಯ ಮೆರೆಯಿತು. ಅದರೊಂದಿಗೆ, ಟೂರ್ನಿಯಲ್ಲಿ ಪದಕವನ್ನು ಖಚಿತಪಡಿಸಿಕೊಂಡಿತು.

ಎಂಟರ ಘಟ್ಟದ ಮೊದಲ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಎರಡು ಮ್ಯಾಚ್ ಪಾಯಿಂಟ್ ಉಳಿಸಿಕೊಂಡರು. 1 ಗಂಟೆ, 28 ನಿಮಿಷ ನಡೆದ ಈ ಮ್ಯಾರಥಾನ್ ಪಂದ್ಯದಲ್ಲಿ ಲಕ್ಷ್ಯ 18–21, 22–20, 21–17ರಿಂದ ಆರನೇ ರ‍್ಯಾಂಕ್ ಆಟಗಾರ ಚೌ ಟೀನ್ ಚೆನ್ ವಿರುದ್ಧ ಗೆದ್ದರು.

ಡಬಲ್ಸ್‌ನಲ್ಲಿ ಸಾತ್ವಿಕ್ –ಚಿರಾಗ್ ಅವರು 23-21 19-21 21-12ರಿಂದ ಚಿಯು ಸಿಯಾಂಗ್ ಚೀಹ್ ಮತ್ತು ವಾಂಗ್ ಚಿ ಲಿನ್ ವಿರುದ್ಧ ಗೆದ್ದರು. ಒಂದು ಗಂಟೆ 15 ನಿಮಿಷ ನಡೆದ ಪಂದ್ಯದಲ್ಲಿ ಭಾರತದ ಜೋಡಿಗೆ ಮೊದಲ ಗೇಮ್ ಗೆಲುವು ಪ್ರಯಾಸದಾಯಕವಾಗಿತ್ತು. ಎರಡನೇ ಗೇಮ್‌ನಲ್ಲಿ ಸೋತರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಪುಟಿದೆದ್ದ ರೀತಿ ಅಮೋಘವಾಗಿತ್ತು.

ಇನ್ನೊಂದು ಸಿಂಗಲ್ಸ್‌ನಲ್ಲಿ ಕನ್ನಡಿಗ ಆಯುಷ್ ಶೆಟ್ಟಿ ಕಣದಲ್ಲಿದ್ದರು ಅವರು ತಮ್ಮ ಮೇಲಿನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. 20 ವರ್ಷದ ಆಯುಷ್ 21–16, 21–17ರ ನೇರ ಗೇಮ್‌ಗಳಲ್ಲಿ ಎದುರಾಳಿ, ಆಲ್ ಇಂಗ್ಲೆಂಡ್ ಚಾಂಪಿಯನ್ ಲಿನ್ ಚುನ್ ಯೀ ವಿರುದ್ಧ ಗೆಲುವು ಸಾಧಿಸಿದರು.

'ಈ ಜಯವನ್ನು ಸಂಭ್ರಮಿಸುವುದಕ್ಕಷ್ಟೇ ಸೀಮಿತಗೊಳಿಸಬೇಕಿಲ್ಲ. ಇದು ಬಹುಕಾಲ ನೆನಪಿನಲ್ಲಿ ಉಳಿಯಲಿದೆ. ನಂಬಿಕೆ, ಸಿದ್ಧತೆ ಮತ್ತು ಭಾರತದ ಬ್ಯಾಡ್ಮಿಂಟನ್ ಬೆಳೆಯುತ್ತಿರುವ ಪರಿಯನ್ನು ಬಿಂಬಿಸುವ ಜಯ ಇದಾಗಿದೆ' ಎಂದು ಭಾರತ ತಂಡದ ಮಾಜಿ ಕೋಚ್ ವಿಮಲ್ ಕುಮಾರ್ ಹೇಳಿದ್ದಾರೆ.

2022ರಲ್ಲಿ ಭಾರತ ತಂಡವು ಥಾಮಸ್ ಕಪ್ ಜಯಿಸಿತ್ತು. 1952, 1955 ಮತ್ತು 1979ರಲ್ಲಿ ಕಂಚಿನ ಪದಕ ಗೆದ್ದಿತ್ತು.

ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು ಹಾಗೂ ಕೋಚ್ ಸಿಬ್ಬಂದಿ 'ಎಕ್ಸ್' ಚಿತ್ರ

ಮಾವಿ ಬದಲಿಗೆ ಅಂಬರೀಶ್

ನವದೆಹಲಿ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡವು ಗಾಯಾಳು ಶಿವಂ ಮಾವಿ ಬದಲಿಗೆ ಆಲ್‌ರೌಂಡರ್ ಆರ್.ಎಸ್.ಅಂಬರೀಶ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಅಂಬರೀಶ್

ಬಲಗೈ ಮಧ್ಯಮ ವೇಗಿ ಮಾವಿ ಅವರು ತೊಡೆಸಂದು ಗಾಯದಿಂದಾಗಿ ಈ ಬಾರಿಯ ಐಪಿಎಲ್‌ನಿಂದ ಹೊರಬಿದ್ದಿರುವುದಾಗಿ ಸನ್‌ರೈಸರ್ಸ್ ತಂಡವು ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜಸ್ಥಾನದ ಎಡಗೈ ಬ್ಯಾಟರ್–ಬಲಗೈ ಮಧ್ಯಮ ವೇಗಿ ಅಂಬರೀಶ್ ಅವರು ಈ ವರ್ಷದ ಆರಂಭದಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ ಭಾರತ ತಂಡದಲ್ಲಿ ಆಡಿದ್ದರು.

ಐದು ಟ್ರೋಫಿ ಗೆಲ್ಲುವ ಗುರಿ: ರಾಹುಲ್

ನವದೆಹಲಿ (ಪಿಟಿಐ): ಮಹೇಂದ್ರಸಿಂಗ್ ಧೋನಿ ಅವರಂತೆ ಐದು ಸಲ ಐಪಿಎಲ್ ಟ್ರೋಫಿ ಜಯಿಸುವುದು ತಮ್ಮ ಗುರಿ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಹೇಳಿದ್ದಾರೆ.

ಧೋನಿ ಅವರು ಐಪಿಎಲ್‌ನಲ್ಲಿ ಗಳಿಸಿರುವ ಒಟ್ಟು ರನ್ (5439) ದಾಖಲೆಯನ್ನು ರಾಹುಲ್ ಈಚೆಗೆ ಮೀರಿ ನಿಂತಿದ್ದರು.

ಈ ಕುರಿತು ಜಿಯೊ ಹಾಟ್‌ಸ್ಟಾರ್ ಸಂದರ್ಶನದಲ್ಲಿ ಮಾತನಾಡಿದ ಅವರು, 'ಮಹಿ ಭಾಯ್ (ಧೋನಿ) ಅವರ ದಾಖಲೆಯನ್ನು ಮೀರಿದ್ದೆ ಎಂಬ ಅರಿವು ನನಗೆ ಇರಲಿಲ್ಲ. ವೈಯಕ್ತಿಕ ದಾಖಲೆಗಳನ್ನು ಸಾಧಿಸುವುದು ಒಂದು ರೀತಿಯಲ್ಲಿ ಒಳ್ಳೆಯದು. ಅವು ನಮ್ಮ ಆತ್ಮವಿಶ್ವಾಸವನ್ನು ವೃದ್ಧಿಸುತ್ತವೆ. ಆದರೆ ಧೋನಿಯವರ ಐದು ಪ್ರಶಸ್ತಿ ಗೆಲುವಿನ ದಾಖಲೆಯನ್ನು ಸಮ ಮಾಡುವುದೇ ನನಗೆ ಹೆಚ್ಚು ಖುಷಿ ಕೊಡುತ್ತದೆ' ಎಂದರು.

'ಕ್ರಿಕೆಟ್ ತಂಡದ ಆಟವಾಗಿದೆ. ಟ್ರೋಫಿ ಜಯಿಸುವುದು ತಂಡಗಳ ಗುರಿಯಾಗಿರುತ್ತದೆ. ಅಂತಹ ತಂಡವನ್ನು ಪ್ರತಿನಿಧಿಸುವುದು ಹೆಚ್ಚು ತೃಪ್ತಿ ಕೊಡುವ ಸಂಗತಿ. ಆದ್ದರಿಂದ ಅದೇ ನನ್ನ ಗುರಿಯೂ ಕೂಡ' ಎಂದರು.

'ಚಿನ್ನಸ್ವಾಮಿ ಕ್ರೀಡಾಂಗಣದೊಂದಿಗೆ ನನಗೆ ಭಾವನಾತ್ಮಕ ನಂಟು ಇದೆ. ನನ್ನ ತವರಿನ ಅಂಗಳ ಅದು. ಅಲ್ಲದೇ ಆರ್‌ಸಿಬಿ ಎದುರು ಆಡುವುದು ಕೂಡ ಒಂದು ರೀತಿಯ ವಿಶೇಷ ಸಂಗತಿಯಾಗಿದೆ. ಚಿನ್ನಸ್ವಾಮಿ ಅಂಗಳದಲ್ಲಿ ಆರ್‌ಸಿಬಿ ಎದುರಷ್ಟೇ ಅಲ್ಲದೇ ಅಂತರರಾಷ್ಟ್ರೀಯ ಪಂದ್ಯಗಳಲ್ಲಿಯೂ ಉತ್ತಮವಾಗಿ ಆಡಿದ್ದೇನೆ' ಎಂದರು.

ವಿಮಾನಪುರ ತಂಡಕ್ಕೆ ಪ್ರಶಸ್ತಿ
ಬಾಲಕಿಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನಪುರ ಬ್ಯಾಸ್ಕೆಟ್‌ಬಾಲ್ ಕ್ಲಬ್ ಬಾಲಕರ ತಂಡವು ಬಿ.ಎಸ್.ನಾರಾಯಣ ಸ್ಮಾರಕ ಟ್ರೋಫಿಗಾಗಿ ನಡೆದ ರಾಜ್ಯ 13 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಬಾರಿಗೆ ಚಾಂಪಿಯನ್ ಆಯಿತು. ಬಾಲಕಿಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ ತಂಡವು ಕಿರೀಟ ಗೆದ್ದುಕೊಂಡಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ವಿಮಾನಪುರ ಬಿ.ಸಿ ತಂಡವು 47–26ರಿಂದ ಎಂಸಿಎಚ್‌ಎಸ್ ತಂಡವನ್ನು ಮಣಿಸಿತು. ರಕ್ಷಿತ್ (18 ಅಂಕ) ಹಾಗೂ ನಿರ್ವೈರ್ (12 ಅಂಕ) ವಿಮಾನಪುರ ತಂಡದ ಗೆಲುವಿನಲ್ಲಿ ಮಿಂಚಿದರು.

ತೃತೀಯ ಸ್ಥಾನದ ನಿರ್ಧಾರಕ್ಕಾಗಿ ನಡೆದ ಪಂದ್ಯದಲ್ಲಿ ಬೆಂಗಳೂರು ವ್ಯಾನ್‌ಗಾರ್ಡ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 51–38ರಿಂದ ಪಾರ್ಕ್ ಪ್ಲೇಯರ್ಸ್ ಕ್ಲಬ್ (ಪಿಪಿಸಿ) ತಂಡವನ್ನು ಸೋಲಿಸಿತು. ವ್ಯಾನ್‌ಗಾರ್ಡ್ಸ್ ತಂಡದ ಚಾಯಾಂಕ್ 14 ಅಂಕ ಗಳಿಸಿದರೆ, ನೀಲ್ 13 ಅಂಕ ಸಂಪಾದಿಸಿದರು. ಪಿಪಿಸಿ ತಂಡದ ನರೂಣ್ (9 ಅಂಕ) ಹಾಗೂ ರಕ್ಷಕ್ (6 ಅಂಕ) ಹೋರಾಟ ತೋರಿದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೌಂಟ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 62–45ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತು. ದೇವಿಶಿ (14 ಅಂಕ) ಹಾಗೂ ಕೆನಿಶಾ (13 ಅಂಕ) ಮೌಂಟ್ಸ್ ತಂಡದ ಗೆಲುವಿನ ರೂವಾರಿಯಾದರು. ವ್ಯಾನ್‌ಗಾರ್ಡ್ಸ್ ತಂಡದ ಆರುಷಿ (23 ಅಂಕ) ಹಾಗೂ ಹರ್ಷದಾ (13 ಅಂಕ) ಪ್ರಬಲ ಪೈಪೋಟಿ ತೋರಿದರಾದರೂ, ಉಳಿದವರಿಂದ ಬೆಂಬಲ ಸಿಗಲಿಲ್ಲ.

ಎಂಸಿಎಚ್‌ಎಸ್ ಕ್ಲಬ್ ತಂಡವು 46–28ರಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿ, ತೃತೀಯ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಚಾಂಪಿಯನ್ ತಂಡಗಳಿಗೆ ತಲಾ ₹40 ಸಾವಿರ ಹಾಗೂ ರನ್ನರ್ಸ್‌ಅಪ್ ತಂಡಗಳಿಗೆ ತಲಾ ₹25 ಸಾವಿರ ಬಹುಮಾನ ನೀಡಲಾಯಿತು. ತೃತೀಯ ಸ್ಥಾನ ಪಡೆದ ತಂಡಗಳು ತಲಾ ₹15 ಸಾವಿರ ನಗದನ್ನು ಜೇಬಿಗಿಳಿಸಿಕೊಂಡವು.

ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದ ಮೌಂಟ್ಸ್ ಕ್ಲಬ್ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು. ಕೋಚ್ ಜಯವಂತಿ ಶ್ಯಾಮ್ ಅವರು ಇದ್ದಾರೆ ಚಿತ್ರ: ಬಿ.ಕೆ.ಜನಾರ್ದನ

ವಿಶ್ವ ರಿಲೆ ಕೂಟ ಇಂದಿನಿಂದ

ಗ್ಯಾಬೋರ್ನ್ (ಬೋಟ್ಸ್‌ವಾನಾ), (ಪಿಟಿಐ): ಭಾರತದ ಐದು ರಿಲೆ ತಂಡಗಳು, ಶನಿವಾರ ಇಲ್ಲಿ ಆರಂಭವಾಗುವ ವಿಶ್ವ ಅಥ್ಲೆಟಿಕ್ಸ್ ರಿಲೆ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿವೆ. ಮುಂದಿನ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸುವುದು ಭಾರತ ತಂಡಗಳ ಗುರಿಯಾಗಿದೆ.

21 ಮಂದಿಯ ಭಾರತ ತಂಡದ ನೇತೃತ್ವವನ್ನು ಸ್ಪ್ರಿಂಟ್ ತಾರೆ ಅನಿಮೇಶ್ ಕುಜೂರ್ ವಹಿಸಿದ್ದಾರೆ. ತಂಡದಲ್ಲಿ ಎಂಟು ಮಂದಿ ಮಹಿಳಾ ಅಥ್ಲೀಟುಗಳು ಇದ್ದಾರೆ.

ಮೊದಲ ದಿನ 4x100 ಮೀ. ಮಿಶ್ರ ರಿಲೆ ಓಟ ನಡೆಯಲಿದ್ದು, ಭಾರತ ಎರಡನೇ ಹೀಟ್‌ನಲ್ಲಿ ಸ್ಪರ್ಧಿಸಲಿದೆ. ಈ ಹೀಟ್‌ನಲ್ಲಿ ಅಮೆರಿಕ, ಬೆಲ್ಜಿಯಂ, ಸ್ಪೇನ್, ಚೀನಾ, ಫ್ರಾನ್ಸ್, ಪೋಲೆಂಡ್ ಮತ್ತು ಪರಗ್ವೆ ತಂಡಗಳಿವೆ.

ಇದರ ನಂತರ 4x400 ಮೀ. ಮಿಶ್ರ ರಿಲೆ, ಮಹಿಳೆಯರ 4x100 ಮೀ, ಪುರುಷರ 4x100 ಮೀ. ಮತ್ತು ಪುರುಷರ 4x400 ಮೀ. ಸ್ಪರ್ಧೆಗಳ ಮೊದಲ ಸುತ್ತು ನಡೆಯಲಿವೆ.

2025ರ ಗ್ವಾಂಗ್‌ಝು ವಿಶ್ವ ರಿಲೆ ಕೂಟದಲ್ಲಿ ಮೊದಲ ಬಾರಿ ಮಿಶ್ರ ರಿಲೆ ಓಟದ ಸ್ಪರ್ಧೆಯನ್ನು ಪರಿಚಯಿಸಲಾಗಿತ್ತು.

4x400 ಮೀ. ಮಿಶ್ರ ರಿಲೆ ಮತ್ತು ಮಿಶ್ರ 4x400 ಮೀ. ಮಿಶ್ರ ರಿಲೆ ವಿಭಾಗದಲ್ಲಿ ಮೊದಲ ಆರು ಸ್ಥಾನ ಗಳಿಸಲಿರುವ ತಂಡಗಳು, ಸೆಪ್ಟೆಂಬರ್‌ನಲ್ಲಿ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಅಲ್ಟಿಮೇಟ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಲಿವೆ.

ಜಮ್ಶೆಡ್‌ಪುರ ಜಯಭೇರಿ

'ಎಕ್ಸ್' ಚಿತ್ರ

ಜಮ್ಶೆಡ್‌ಪುರದ ಜೆಆರ್‌ಡಿ ಟಾಟಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಜಮ್ಶೆಡ್‌ಪುರ ಎಫ್‌ಸಿ (ಕೆಂಪು ಜೆರ್ಸಿ) ಹಾಗೂ ಗೋವಾ ಎಫ್‌ಸಿ (ಬಿಳಿ ಜೆರ್ಸಿ) ತಂಡದ ಆಟಗಾರರು ಚೆಂಡಿಗಾಗಿ ಸೆಣಸಿದರು. ಆತಿಥೇಯ ತಂಡವು 2–0ಯಿಂದ ಈ ಪಂದ್ಯವನ್ನು ಗೆದ್ದುಕೊಂಡಿತು

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

The Regency Public School

#5/1, A.M.S. Extension, Vidyaranyapura, Bangalore - 560097

Ph. : 080- 29533770, 9606913385, 9606913386

Congratulates The Toppers of ICSE - 2025-26

100% FIRST CLASSES

98% MYTHRI DAS C V
97% TEJAL R
96.4% DEVTHA K DHANESH
96.2% NIKHITA SHREE M R
95.2% K SATHWIK REDDY
95% N S PRADYUMNA
95% PRAJNA A
94.2% J GAHANA AJJAPPA
94% SAI BHUVAN T S
94% JIYA K S
94% S R BHILVA PRIYAA
94% BUVI S HEGADE
93.2% NARASIMHA SIDDHARTH M
93% VIBHA V
92.2% PRAGYA A
92% VAJRANG T
90.4% BHARGAV A
90% PALAK RANKA

ADMISSION OPEN FOR 2026-27

PUC: 9036022155
SCHOOL: 9606913386

Managed

ಫಾರಂಲ್ಯಾಂಡ್

BEST WEEKEND GETAWAYS

Offer Price Rs. 399 Per Sft

ಬೆಂಗಳೂರು

ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಂತರ

ರಾಷ್ಟ್ರೀಯ ಹೆದ್ದಾರಿ-7ರ ರಸ್ತೆ

ಈಶಾ ಫೌಂಡೇಶನ್‌ನಿಂದ 30 ನಿಮಿಷಗಳ ಪ್ರಯಾಣ

Stress Free Maintenance | Pleasant Weather | Weekend holiday home | Retirement home | Primary home for IT professionals

ಮೂಲಭೂತ ಸೌಕರ್ಯಗಳು

- ಕ್ಲಬ್ ಹೌಸ್ • ಬೋರ್‌ವೆಲ್ ಮತ್ತು ನೀರಿನ ಲೈನ್
- ಹನಿ ನೀರಾವರಿ • 24/7 ವಿದ್ಯುತ್ ಸರಬರಾಜು
- ಲೇಔಟ್ ಸುತ್ತಾ ಸಂಪೂರ್ಣ ತಂತಿ ಬೇಲಿ
- ಪ್ರತಿ ಸೈಟಿಗೆ ಯುರೋಪಿಯನ್ ಶೈಲಿಯ 2 ಅಡಿ ಬೇಲಿ
- ಸೌರ ಬೀದಿ ದೀಪಗಳು • ದಿನಪೂರ್ತಿ ಭದ್ರತೆ

ಲೇಔಟ್ ಸಮೀಪದಲ್ಲಿ

- 2 ಕಿ.ಮೀ KIADB ಕೈಗಾರಿಕಾ ಪ್ರದೇಶ
- 10 ಕಿ.ಮೀ ಏರ್ ಬಸ್ ಕಂಪನಿ ▶ 10 ಕಿ.ಮೀ BEL ಫ್ಯಾಕ್ಟರಿ
- 10 ಕಿ.ಮೀ MS ರಾಮಯ್ಯ ವಿಶ್ವವಿದ್ಯಾಲಯ
- 10 ಕಿ.ಮೀ ಸರ್ಕಾರಿ ವೈದ್ಯಕೀಯ ಕಾಲೇಜು
- 15 ಕಿ.ಮೀ KIA ಕಾರು ಫ್ಯಾಕ್ಟರಿ

ONE TIME INVESTMENT LIFETIME PROFITS | ನೋಂದಣಿಗೆ ಸಿದ್ಧವಾಗಿದೆ | SINGLE INVESTMENT IN LAND MULTIPLE RETURNS

RK Farm Valley

www.rkcalifornia.com

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ: 8880 66 55 77

RK ENTERPRISES

ಹೋಲಿ ಏಂಜೆಲ್ಸ್ ಹೈ ಸ್ಕೂಲ್

Affiliated to Indian Certificate of Secondary Education KA 094

ಹಂಪಿನಗರ, ವಿಜಯನಗರ, ಬೆಂಗಳೂರು – 560 104

PRINCIPAL DIRECTOR

TOPPERS OF CLASS X - ICSE EXAMINATION - 2026

ರಾಹುಲ್ ನಾರಾಯಣನ್ 96.6%
ವೈಷ್ಣವಿ ಎನ್. ಕೆ 95.6%
ಜೀವಿತಾ .ಎಂ 92.8%
ತೇಜಸ್ 92%
ಸುಪ್ರಿಯಾ ಸಿ. ಎಂ 91.8%
ಜೀವಿತಾ .ಎನ್ 91.4%
ಲಲಿತ್ ಮಾಳಿಗೆ ಕೆ.ಪಿ 91.4%
ದಿವ್ಯಶ್ರೀ .ಆರ್ 91%
ಮೋನಿಷ .ಕೆ. ಎಸ್ 91.%
ಹಾರಿಕ ಪ್ರಸಾದ್ .ಎಂ 90.8%
ನಯನ .ವಿ 90.6%
ರಾಘವಿ .ಎಂ 90.6%
ಸಾರಿಕ ಎ. ಪಿ 90.2%
ಕವನ .ಬಿ 90%
ಸಹನ ವಿ. ಜೆ 89.4%
ಮೋನಿಷ .ಕೆ 89.2%
ಎ. ಶ್ರೀ ಸಾಗರ್ 89%
ಜ್ಯೋತಿ ಸರವಾಡೆ 88.8%
ಗನಿಕ .ಜಿ 88.6%
ಪೂರ್ವಿತ ರಾಜ್ ಸಿ. ಬಿ 88.6%
ಪವನ್ ಕುಮಾರ್ .ಎಂ 88%
ಶ್ರೇಯಸ್ .ಬಿ 87.8%
ಬಿಂದು ಕೆ. ಜೆ 87.4%
ಕೆ. ಎಲ್ ರಾಕೇಶ್ 87.2%
ವಂದಿತಾ ಎಸ್ 86.8%
ಯಶ್ ವಿ. ಶೇತ್ 86.6%
ಪ್ರಜ್ವಲ್ ಎ 86.4%
ಸುಪ್ರೀತ್ ಬೆಳೆಗೆರೆ ಎಸ್.ಟಿ 85.8%
ಸಮೀಕ್ಷಾ ಆರ್. ಡಿಗ್ಗಿ 85.2%
ಭುವನೇಶ್ ಬಿ 85%
ಧನುಷ್ ಎಲ್ 85%
ಹಿತೇಶ್ ಚೇತನ್ 85%
ಸೂಫಿಯಾನುಲ್ಲಾ ಶರೀಫ್ 85%

EAST WEST PUBLIC SCHOOL

(Managed by Best Beginner English Public School)

No 52 & 53, 13th Cross Road, Mahalakshmi Layout, Bengaluru - 560 086

BBEPS EDUCATION WITH VALUES

Heartly Congratulations to one & all

S.S.L.C. Result 100%

SSLC BOARD EXAMINATION STUDENTS LIST - 2025-26

95.84% R Deepika (599)
95.04% Ananya V (594)
92% Bhuvan S (575)
91.52% Hari Prasad S (572)
90.88% Sneha I Patil (568)
90.56% Preksha Ganesh (566)
89.44% Ronaj S (559)
89.44% Sachin A (559)
88.8% Shreya S (555)
88.48% Haqeeb Mubarak M (553)
88% S Kushal (550)
86.88% Likitha J P (543)
84.48% P Priya Dharshini (528)
84.16% Ankitha S (526)
83.84% Aadhya S G (524)
82.6% Chandan Gowda D (515)
78.72% Likitha N (492)
76.8% Sanjay B (480)
74.08% Theju R (463)
72.8% M Kritika (455)
71.68% Lakshya V (448)
71.36% Rakesh K N (446)

OUR PROUD ACHIEVERS

Rakshitha K, Prathik S, Roshan U, K Prajwal Raj, Preetham M, Chetana CS, Samarth G, Anjan Kumar S, G Dikshitha, Lavanya Bai, Lakshmidevi N, Yashas S, Monisha L

Admissions Open for the Academic Year 2026-2027

Contact No : 080-23496950 | 94481 74742

BEST BEGINNER ENGLISH PUBLIC SCHOOL

58, 2nd Main, 2nd Stage, AGB Layout,
Mahalakshmipuram, Bangalore - 560 086

S.S.L.C. Result 100%

Heartly Congratulations to one & all

SSLC BOARD EXAMINATION STUDENTS LIST - 2025-26

98.72% VENKATESH GOWDA T L (617)
HINDI - 100 SCIENCE- 100
SOCIAL SCIENCE -100
KARNATAKA STATE 9TH RANK

95.52% SHREYA SHARMA (597) KANNADA -100 HINDI - 100
95.04% VIBHAV BALSEKAR (594) HINDI - 100
94.08% LASYA B.P (588)
92.08% SUMUKH V (580)
84.96% BHARATH M
82.72% THANISHA THYAGARAJA
91.04% GANAVI
89.28% ADITYA DALAWAI
85.12% H MAHALAKSHMI
81.28% SHRAVYA SHENOY
78.88% JAHNAVI K R
77.12% V S HARIKA
68.96% SOHAN GOWDA R
62.65% BHAVYA SHREE A

Admissions Open for the Academic Year 2026-2027

Congratulations To the students for securing 100% result in Class X Examination 2025-26

CONTACT: 96115 27984 080-2359 6889

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Multiple Locations

RERA Approved PLOTS
Mysore, Hubli, Haveri
Near likely Airport
Nelamangala
Starting @ Rs.1599/sqft
Farm Plots Rs. 599/sqft
For Special Offer and Free Visit Contact
9916 356 000

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE For Sale Banashankari 6th Stage 7th Block 40x60 E/F Anjanapura 7th Block 30x40 S/F: 9964627255

Electronic City

"ELECTRONIC CITY 30x40 DC.conversion E-Katha, Gated Community 38 Sites Sale total 1.5 acres with Basic Amenities, Bank Loan Available, Ready for Registration near VIBGYOR School, 1.75kms from Hosa Road, Metro Station. 9620424103/ 9448670671"

Jakkur

SITE FOR SALE 30x40 West Face GKVK LAYOUT JAKKUR (Prime Location) Price 18000/- Per SFT Negotiable 7760623953

Kempegowda Layout

BDA SITE for Sale Nadaprabhu Kempegowda Layout 40x60 1st block H Sector Near 330 feet PRR Road South, Broker Excuse Genuine buyers only: 9591307071

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449.

20×30 BDA South Facing Site For Sale, Brokers Excuse, Good Location, Contact: 9886107471

Nelamangala

BYRASHETTYHALLI AISHWARYA County BMRDA 40X60,East And Banashankari BDA 30X40,Sites For Sale : 9620117773/9845857006

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

BHARATH EDUCATION SOCIETY®

BES DEGREE COLLEGE

Recognised by UGC. Approved by AICTE.
Affiliated to Dr. MMS BCU, Re-accredited B++ Grade by NAAC.
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
✆ 080 - 2663 7295 / 94488 48416
Email: besddcol@yahoo.co.in
besdegreecol@gmail.com
Website: www.besinstitutions.com

Sahakara Rathna
B.L. Lakke Gowda
Founder
B.E.S Institutions

SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

PROGRAMMES OFFERED FOR : 2026-27
B.Com | BBA | BCA
BA | HEP | HES | HEK

Languages Offered: English, Kannada, Hindi & Sanskrit
As per Dr. MMS BCU Syllabus

BES EVENING DEGREE COLLEGE

Re-accredited B Grade by NAAC.
✆ 080-26638415 / 99455 46840 E-mail: besedceve@gmail.com
PROGRAMMES OFFERED FOR : 2026-27
B.Com | BA | HEP | HES | HEK

Sri..Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Dr. N. Ashok Kumar, Principal, BES Degree College
Dr. Rekha Kowshik P.R., Principal, BES Evening Degree College

HOSTEL FACILITY AVAILABLE FOR GIRLS

BES-26701

Vishweshwariah Layout

DIRECT OWNER 30x40 Site Sale VISHWESHWARAIAH LAYOUT 2nd Block near 100 feet-road, Opposite-Park, ₹11250/-. 9742681666

Malur

SALE HIGHWAY-LAND MALUR/KOLAR ROAD AGRAHARA HOSAHALLI NEAR STRR VOKKALERI EXIT 2ACRES 11GUNTAS LEVEL LAND PRIME FRONTAGE IDEAL FOR FARMHOUSE/INVESTMENT 7019472246 9045257786

Magadi Road

D GROUP Layout 30x40 WF, 3rd Block, Andrahalli, Magadiroad, Near 60ft Road, Beside Corner 16,000/- PSFT 9739957911

Flat

Malleshwaram

MALLESWARAM 11TH Main. SALE New duplex 5BHK. North Facing Door. 2 carparking. 2216 sft SBA. 6Crores. AND NEW 3BHK North Facing Door, 1 carparking, 1491 sft SBA. 4.1Crores. E-Katha available for both. Contact: 8151991952

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Seshadripuram

SALE 3BHK Flat Ground Floor EF 1320 SqFt. Covered CarPark 2Bathrms UDS 1000 Sft Suitabl: Res/Comml. Ready Occupation: 9886019240/ 08026603673

Yelahanka

3BHK CENTURY SARAS. Near California-Resort. Semi-Furnished. EastFacing. First Floor. 1674Sft. Parking+ Amenities. 1.2cr. 9845336624

Agricultural Land Converted

Out-Station

LAND-SALE 29 Guntas alienated land for sale along with Industrial sheds& office room atSite No. 231, E IInd block,Mysore-Palahalli Road, Palahalli.10 KM from Mysore.Call 93554 71129Time 2 to 5 pm

House

Jayanagar

HOUSE FOR SALE. JAYANAGAR 1st Block East Byrasandra BDA Layout G+1st Floor 6BHK on 40x60. Rs.28000 psft. Negotiable. Interested buyers Contact: RAPHAEL- 9343728200.

Kasturinagar

INDEPENDENT BUNGALOW Sale. 60x40 East Facing BDA. Newly Renovated. No Brokers. 5.5 Cr. 'Prime' 9845079698

Mysore

HOUSE-SALE 50X80; 42 sqrs; 2 floors 10 bedrooms 8 bathrooms.At #3133 4th stage 2nd Phase Vijaynagar Mysore 32Call 9355471129Time 2 to 5 pm

Nagarabhavi

BDA 20X20 G+2 Building NF Pattegarapalya, Nagarabhavi, 69 Lakhs Direct Owner 9740073482

Vishweshwariah Layout

SMV 3RD Block 1598 East 20x30 House 13500000 Negotiable, Kempegowda 1st Attach, Kodigehalli Main Road Commercial 30x40 Corner 10,000/- Revenue E Katha 9845793121

HOUSE SALE BDA SMVL, 5th Block, Rentel Income G + Three, with Car Parking 10 Years Old Building Good Location: 8217392686

Industrial & Factory

Tumkur Road

KIADB CONVERTED: Prime Industrial Land for sale. 50,000 sqft in Vasanthanrasapura Industrial area situated in NH4, Tumkur Road, East facing. Rate 2500/- psqft Negotialbe. Serious buyers contact:- Arif Khan:- 9845021260.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

R.E.S. POLYTECHNIC

Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

REAL ESTATE BUYING

Sites

Banashankari

BDA SITES WANTED ARKAVATI ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 40x60 30x40 BCCHS LAYOUT NARAYANNAGAR BANASHANKARI 6th STAGE, ANJANAPURA KANAKAPURA ROAD BROKER EXCUSE. Call 9663454878.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

Godown

GODOWN FOR Rent 1800-2000 sft at 100/14-2,1st cross Nagappastreet, Seshadripuram Bangalore-20.Contact: 9900632406/ 9845132406

House

FOR RENT FURNISHED 3-BHK, 1350 sqft, Ground Floor, Car Parking, Veranda, UPS, 400m Vijayanagar Metro. 9620869322

JOB OPPORTUNITIES

Marketing & Sales

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

PERSONAL

Change of Name

CHANGE OF NAME
I, ZEENATH RAHILA NOOR MOHAMMED residing at No.221, Noor Manzil, 2nd Main Road, Ilyas Nagar, Bengaluru- 560078, have changed my name to ZEENATH RAHILA vide affidavit dated 14-04-2026 sworn before notary Mohammed Hussain, Bengaluru. Henceforth I shall be called as ZEENATH RAHILA only.

I, KALPANA Udaykumar, R/o #616, 11th Cross, 7th Block West, Jayanagar, Bangalore-70 State that KALPANA UDAYKUMAR, Dr. KALPANA N. DHANANJAY, & KALPANA DHANANJAY All the above three names refer to me only vide affidavit dated 24-4-2026 before Notary Sumithra. N

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

St. MARTIN'S HIGH SCHOOL

7th Cross, Magadi Road, Bangalore - 560 023

MANAGEMENT & STAFF CONGRATULATES ALL THE TOPPERS OF SSLC EXAM 2025-26

GEETIKA SONI A
608 - 97.28%

M DHIVYA
605 - 96.80%

Name	Marks
Jeevitha Ramesh	553 - 88.48%
V Nikkitha Sri	553 - 88.48%
Aafiya Aiman	552 - 88.32%
Hemavathi S	549 - 87.84%
Rakshitha G	544 - 87.04%
Punith Kumar B	539 - 86.24%
Hemanth L G	536 - 85.76%
Sadhana H Parmar	536 - 85.76%
RASHMI BAI P	595 - 95.20%
Sneha Vishwanath Shinde	586 - 93.76%
Rishabh Gurjar	585 - 93.60%
D Thritika	526 - 84.16%
Shamika V	522 - 83.52%
Hari Priya S	519 - 83.04%
H Manisha	518 - 82.88%
K Deepika	583 - 93.28%
B Rajeshwari	568 - 90.88%
Rudra Deepak Gadhiya	567 - 90.72%
Nandini S	512 - 81.92%
R Sahana	507 - 81.12%
Sinchana S	504 - 80.64%
Srinithi R	504 - 80.64%
Rohith S	557 - 89.12%
Rakshitha J	556 - 88.96%
Bramarambika S	503 - 80.48%
Shreya K	502 - 80.32%
J Monisha	501 - 80.16%
Jayeetha Ramesh	500 - 80.00%

ADMISSION OPEN FOR THE ACADEMIC YEAR -2026-27

DH DECCAN HERALD
ಪ್ರಜಾವಾಣಿ
Classifieds
More value, more impact
EDUCATION

Book your Educational Related Ads in DH All Karnataka + Prajavani Bengaluru City
*Conditions apply
www.dhclassifieds.com
BOOK NOW
For more details contact:
9731810277 | 9886213331
9845114560 | 9900428036
080- 45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

DS MAX®

PRM/KA/RERA/1251/308/PR/291225/008366

DS MAX SKY SAMPADHA

2 & 3-BHK HOMES | ▲G+22 FLOORS▼

HOSUR ROAD
10 MINS. ELECTRONIC CITY

2-BHK	3-BHK
₹63 LAKHS*	₹92 LAKHS*

ONWARDS

Not just location. Not just price.
Our past projects have witnessed up to

2X Growth in 3 Years*

This could be your next smart move...

*T & C Apply

Visit our website or talk to our
advisors for the complete portfolio

www.dsmaxproperties.com

8880 003 003

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/251024/007179
WHITEFIELD G+14
10 MINS. HOPEFARM METRO
₹ 72.86 L - 1.32 Cr*
8880 461 461

PRM/KA/RERA/1251/310/PR/210324/006724
SILKBOARD G+14
NEAR SINGASANDRA METRO STN.
₹ 91.27 L - 1.47 Cr*
8880 013 310

PRM/KA/RERA/1251/472/PR/250225/007524
AIRPORT ROAD G+14
NEAR PRESTIGE TECH IT PARK
₹ 87.89 L - 1.21 Cr*
8880 465 465

PRM/KA/RERA/1251/310/PR/150223/005721
MYSORE ROAD G+14
NEAR CHALLAGHATTA METRO STN.
₹ 75.00 L - 1.06 Cr*
8880 461 461

PRM/KA/RERA/1251/308/PR/281125/008287
JIGANI G+14
5 MINS. APC CIRCLE
₹ 60.78 - 95.35 Lakhs*
8880 003 003

PRM/KA/RERA/1251/309/PR/030524/006841
HENNUR G+4
NEAR HENNUR DECATHLON
₹ 90.41 L - 1.21 Cr*
8880 465 465

PRM/KA/RERA/1250/301/PR/251024/007178
YELAHANKA G+14
5 MINS. RAJANUKUNTE
₹ 54.85 - 97.21 Lakhs*
8880 465 465

PRM/KA/RERA/1251/308/PR/160824/006973
BANNERGHATTA RD. G+14
NEAR KOPPA GATE
₹ 59.86 - 85.23 Lakhs*
8880 013 310

PRM/KA/RERA/1251/308/PR/230126/008427
SARJAPURA G+4
SARJAPUR - ATTIBELE ROAD
₹ 60.01 - 83.25 Lakhs*
8880 003 003

PRM/KA/RERA/1251/308/PR/160824/006972
HOSA ROAD METRO G+4
NEAR ELECTRONIC CITY
₹ 80.01 L - 1.44 Cr*
8880 013 310

PRM/KA/RERA/1251/310/PR/151223/006489
BANASHANKARI G+3
OPP. NPS SCHOOL (3 & 4-BHK)
₹ 1.45 - 2.17 Cr*
8880 461 461

PRM/KA/RERA/1251/446/PR/190301/002464
WHITEFIELD G+4
5 MINS - KADUGODI METRO
₹ 72.00 - 86.88 Lakhs*
8880 461 461

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain
Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

AISHWARYA'S
ಕಾರ್ಮಿಕರ
ಪರಿಶ್ರಮಕ್ಕೆ ನಮ್ಮ ನಮನ
Kt Special Tea
SHALIMAR GOLD TEA
ಚಹಾ ತೋಟದಿಂದ
ನಮ್ಮ ಕಪ್ ವರೆಗೆ
ಪ್ರತಿ ಹಂತದಲ್ಲೂ
ಇರುವ ನಿಮ್ಮ ಶ್ರಮಕ್ಕೆ
ನಮ್ಮ ವಂದನೆ.
ಕರ್ನಾಟಕದ ಹೆಮ್ಮೆ
PURE &
NATURAL
MONEY GUARANTEE BACK
SHALIMAR GOLD
PREMIUM ASSAM TEA
THE HOMEMAKERS CHOICE
Available in
amazon
ಅದ್ಭುತ ರುಚಿ * ಮಿತವಾದ ಬೆಲೆ * ಉತ್ಕೃಷ್ಟ ಗುಣಮಟ್ಟ
TRADE ENQUIRIES
Bangalore
Sales Head
+91 9980 157884
Rest of Karnataka
Satish RSM
+91 97313 03541
www.aishwaryateaindustries.com
aishwaryatea@gmail.com

ರಾಜೇಂದ್ರ ಪಾಲಿಟೆಕ್ನಿಕ್
RAJENDRA POLYTECHNIC
Sunkadakatte, Hegganahalli cross,
Near PEENYA II Stage, Bangalore - 560091
for more info contact:
99166 46466
R. E. S. Evening Polytechnic
(Working professional program) since 2023-24
Join govt approved 2 yrs diploma in
▪ Electrical & electronics engg.
Eligibility:
• Any ITI Trade with 2 yrs exp.
• Any PUC Science group with 2 yrs exp.
R. E. S. Polytechnic
since 1986
Join govt approved 2/3 years diploma in
▪ Computer science engg.
▪ Information science engg.
▪ Mechanical engg.
▪ Automobile engg.
▪ Electrical & electronics engg.
▪ Electronics & communication engg.
▪ Civil engg.
▪ Fashion design & technology
▪ Commercial practice
Eligibility:
• PUC/ITI/12th pass for 2 yrs Diploma
• SSLC/10th pass for 3 yrs Diploma
For Further Details Contact : PRINCIPAL / SECRETARY
R.E.S. POLYTECHNIC
Campus : # 5, Sunkadakatte, Hegganahalli Cross, Magadi Main Road,
Bangalore - 560 091. Ph : 080-23484814, 23289424

ಕಲ್ಪವೃಕ್ಷ ಗ್ರೀನ್
Premium Plots For Sale
Near Devanahalli
North Bangalore
Fastest-Growing Location
ವಿಶೇಷ ಆಫರ್!
NOW AT
₹1059
PER.SQFT
BOOK NOW
PRICE WILL BE INCREASED SOON
• Close to Residential Areas
• Near Major Tech Parks
• Easy Access to Highways
• Rapidly Developing Zone
ಎಂಟ್ರೆನ್ಸ್ ಆರ್ಚ್
ಮಕ್ಕಳ ಆಟದ ಪ್ರದೇಶ
ಸೌರ ಬೀದಿ ದೀಪ
ಭೂಗತ ಸ್ಯಾವೇಜ್ ಲೈನ್ಸ್
ಕ್ಲಬ್‌ಹೌಸ್ ಅಥವಾ ಪಾರ್ಟಿ ಹಾಲ್
ಭೂಗತ ವಿದ್ಯುತ್
24 ಗಂಟೆಗಳ ಭದ್ರತೆ
Easy Installment
All Bank Loans Available
ಬುಕಿಂಗ್ ಕರೆಗಾಗಿ
90355 97620 / 63615 47442